Mysore Irrigation (Levy of Betterment Contribution and Water Rate) (Amendment) Bill, 1969

Sri K. PUTTASWAMY.—On behalf of the Chief Minister Sir, I beg to move :

> " That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

Mr. SPEAKER.—Motion moved :

> " That the Mysore Irrigation (Levy of Betterment Contribution and Water Rate) (Amendment) Bill, 1969, be taken into consideration."

Sri H. N. NANJE GOWDA.—Sir, I rise on a Point of Order. The Mysore Irrigation (Levy of Betterment Contribution and Water Rate) (Second Amendment) Bill, 1968, was introduced in this House on 3rd September 1968. This Bill purports to amend the same clauses of the original Bill.

Mr. SPEAKER.—That Bill is not before the House; it has lapsed.

Sri H. N. NANJE GOWDA.—Sir, I have another Point of Order. Article 199 (1) (a) says :

> "The imposition, abolition, remission, alteration or regulation of any tax."

This Bill purports to regulate the tax. The other side may plead that under the original Act, Rs. 500 per acre is already levied and therefore it cannot be a Finance Bill. My submission is that the mode of collection is regulated. According to the original Act, it would have been collected only after the completion of the project or 10 or 15 years thereafter. By this Bill we are regularising the payment of this particular tax even before the completion of the Project, and therefore, it comes under Article 199 (1) (a). There is no recommendation of the Governor for this Bill. Therefore, please do not permit this Bill for the consideration of the House.

Sri K. PUTTASWAMY.—The recommendation of the Governor has already been received.

†Sri H. M. CHANNABASAPPA.—Sir, I would like to point out that this House may not be competent to take up this Bill. This Bill purports to provide for enforcement of payment of the betterment levy before the project is constructed and benefits accrue to the parties. It also purports to say, whether a person has agreed or not, he will be bound to pay the contribution contemplated by the Notification issued by the Government before actually he receives any benefit at all. It would be a step, which is, in my humble opinion, *ultra vires* of the Constitution. The Bill says that if 66 per cent of the people holding lands agree to make payment in advance, the rest of the 33 people are

deemed to have agreed and they will be called upon to pay the advance contribution before any benefits accrue to them. There is no binding on the part of the Government to specify the dates on which the benefits will accrue to him nor is there an assurance of that kind. Article 19 (f) is clear on the point that all citizens shall have the right to acquire, hold and dispose of the property. It is also said that any law that is passed by this House should not restrict the reasonable rights that a person enjoys on his property. You can only impose certain reasonable restrictions and not take away the right altogether.

MR. SPEAKER.—Then what is the hon. Member's constitutional objection ?

SRI H. M. CHANNABASAPPA.—My constitutional objection is that it is not in order to impose certain restrictions on a man or call upon a man who has not agreed to make a payment, to make a payment although the benefits are not given to him, in anticipation of certain benefits that might accrue later. This Bill purports to force the man to agree to pay advance payment. Therefore, it would be *ultra vires* of the Constitution to pass such a Bill in this House and I am afraid this House may not be competent to pass this Bill into law.

SRI K. PUTTASWAMY.—I just want to bring to your kind notice sub-clause (5) of article 19 of the Constitution. Hon. Member Sri Channabasappa pointed out that every person is entitled to acquire, hold and dispose of property as per article 19 (1) (f) and that is a fundamental right guaranteed by the Constitution. He seems to feel that enacting a law of this nature would come in the way of freedom to acquire, hold and dispose of property. Perhaps he did not notice the existence of sub-clause (5) of article 19 which reads as follows :

> "19. (5) Nothing in sub-clauses (d), (e) and (f) of the said clause shall affect the operation of any existing law in so far as it imposes, or prevents the State from making any law imposing, reasonable restrictions on the exercise of any of the rights conferreed by the said sub-clauses either in the interests of the general public or for the protection of the interests of any Scheduled Tribe."

Sir, the Bill that we have placed before this House lays reasonable restrictions on the right of the person to acquire, hold and dispose of property and that is in the interest of the public and therefore it does not violate article 19 (1) (f) as pointed out by hon. Member Sri Channabasappa.

MR. SPEAKER.—I have heard both the hon. Member and the Hon. Minister. As regards the point in regard to recommendations of the Governor under article 207 of the Constitution, I would like to bring to the notice of the Hon. House that the recommendation of the Governor has already been received. I shall bring that recommendation to the notice of the House within a short time.

(MR. SPEAKER)

As regards the constitutional point raised by the hon. Member Sri Channabasappa, there is nothing to show that unreasonable restrictions have been laid on the persons to hold, acquire or dispose of property and even the property could be mortgaged and money obtained from the bank if the person so desires. There is no compulsion laid on any person. The Bill is in the interest of the general public. Therefore there is no constitutional point as mentioned by the hon. Member Sri H. M. Channabasappa. If the hon. Member wants to oppose this measure, he is quite welcome and he may do so during the debate on the Bill.

Hon. Members Sri H. N. Nanje Gowda and Sri Doddaboregowda have given notice of a motion for circulation of the Bill in order to elicit public opinion. The hon. Member Sri Nanje Gowda may move the motion.

Sri H. N. NANJE GOWDA.—Sir, I beg to move:

"That the Mysore Irrigation (Levy of Betterment Contribution and Water Rate) (Amendment) Bill, 1969 be circulated for purposes of eliciting public opinion."

Mr. SPEAKER.—Motion moved:

"That the Mysre Irrigation (Levy of Betterment Contribution and Water Rate) (Amendment) Bill, 1969 be circulated for purposes of eliciting public opinion."

Both the consideration motion and the motion for circulation of the Bill are before the House for discussion.

[MR. DEPUTY SPEAKER in the Chair].

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಮಸೂದೆಯನ್ನು ಈ ಸಭೆಯ ಪರಿಶೀಲನೆಗೆ ಮುಂಡಿಸುತ್ತಾ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಭೆಯಲ್ಲೂ ಹಾಗೂ ಅನೇಕ ಸಾರ್ವಜನಿಕರ ಸಭೆಗಳಲ್ಲೂ ಮೈಸೂರು ರಾಜ್ಯದಲ್ಲಿರತಕ್ಕಂಥ ದೊಡ್ಡ, ಸಣ್ಣ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಒತ್ತಾಯ ಇದೆ. ಸ್ವಾಮಿ, ತಮಗೆ ತಿಳಿದಂತೆ ರಾಜ್ಯದಲ್ಲಿ ಆಹಾರ ಅಭಾವ ಇದೆ ಮತ್ತು ನಮ್ಮ ರಾಜ್ಯದಲ್ಲಿ ಇರುವ ನೀರಾವರಿ ಬಹಳ ಕಡಿಮೆ. ಶೇಕಡ 10 ಭಾಗ ಕೂಡ ಇಲ್ಲ. ಅಂಥಾದ್ದರಲ್ಲಿ ನಮ್ಮಲ್ಲಿರತಕ್ಕಂಥ ನೀರಾವರಿ ಆಶ್ರಯದಲ್ಲಿ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನೂ, ಮಧ್ಯಮ ಹಾಗೂ ಸಣ್ಣ ನೀರಾವರಿ ಕಾಮಗಾರಿಗಳನ್ನೂ ಆದಷ್ಟು ಜಾಗ್ರತೆ ಕೈಗೊಂಡು ಕಾರ್ಯವನ್ನು ಮುಗಿಸುವುದು ಅತ್ಯಗತ್ಯವಿದೆ. ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಾರ್ಯವನ್ನು ಕೈಗೆಳ್ಳಬೇಕಾಗಿರುವುದರಿಂದ ಅದಕ್ಕೆ ಬೇಕಾದಂಥ ನಂಪನ್ಮೂಲಗಳು ನಮ್ಮಲ್ಲಿ ಒದಗದೇ ಇರುವುದರಿಂದ ಅನೇಕ ಕಡೆ ಬೆಟರ್‌ಮೆಂಟ್ ಲೆವಿಯನ್ನು ಅಂದರೆ ತರೀ ಮೇಲೆ ಕೊಡಬೇಕಾದಂಥ ಕಾಂಟ್ರಿಬ್ಯೂಷನ್ನನ್ನು ಮುಂಗಡವಾಗಿ ಅನೇಕರು ಕೊಡುವುದಾಗಿ ಒತ್ತಾಯ ಮಾಡುತ್ತಿದ್ದಾರೆ. ಹಿಂದಿನ ಕಾನೂನು ಪ್ರಕಾರ ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಟ್ಟರೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಈ ವಿಚಾರವನ್ನು ಯಾವರೀತಿಯಾಗಿ ಮಾಡಬೇಕೆಂದು ಪರಿಶೀಲನೆ ಮಾಡುತ್ತಾ ಇದ್ದೆವು. ಮತ್ತು ಕೆ. ಆರ್. ನಗರದಲ್ಲಿ ದೊಡ್ಡ ರೈತರ ಸಭೆ ಸೇರಿ ಅವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಾಗಿಯೂ ಮತ್ತು ಅಲ್ಲಿ ಹೊಸದಾಗಿ ಕಾಲುವೆ ಕೆಲಸಗಳನ್ನು ಕೂಡಲೇ ತೆಗೆದುಕೊಳ್ಳಲು

ಪ್ರಾಶಸ್ತ್ಯ ಕೊಡಬೇಕೆಂದು ಸಹ ನಿರ್ಣಯವನ್ನೂ ಕೂಡ ಮಾಡಿದ್ದಾರೆ. ಮುಖ್ಯಮಂತ್ರಿಗಳಲ್ಲಿ ಅನೇಕ ಜನರು ಬಂದು ಅರಿಕೆ ಮಾಡಿಕೊಂಡಿದ್ದಾರೆ. ಮತ್ತು ಇದು ಅತ್ಯಂತ ಅಗತ್ಯವಾದುದು ಎಂದು ಈ ಸಭೆಯಲ್ಲೂ ಕೂಡ ಪ್ರಶ್ನೆಗಳ ಮೂಲಕ ಆಯವ್ಯಯದ ಅಂದಾಜಿನ ಸಮಯದಲ್ಲಿ ಅನೇಕ ಸದಸ್ಯರು ಸಲಹೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಕಳೆದ ವರ್ಷವೇ ಈ ಕಾನೂನಿನ ತಿದ್ದುಪಡಿ ತರಬೇಕಾಗಿತ್ತು ಎಂದು ಹೇಳಿದ್ದರು. ಅದನ್ನು ನಾವು ಈ ಸಭೆಯ ಪರಿಶೀಲನೆಗೆ ಇಡುವುದಕ್ಕೆ ಕೆಲವು ವಿಷಯಗಳನ್ನು ಪರಿಶೀಲಿಸಬೇಕಾಗಿದ್ದುದರಿಂದ ಆಗಲಿಲ್ಲ. ಅಲ್ಲಿಂದೀಚೆಗೆ ಇದನ್ನು ಪರಿಶೀಲಿಸಿ ಅನೇಕ ತಿದ್ದುಪಡಿಗಳನ್ನು ಮಾಡಿ ಈಗ ಈ ತಿದ್ದುಪಡಿಯನ್ನು ಸಭೆಯ ಮುಂದೆ ತಂದಿದ್ದೇವೆ. ಈ ತಿದ್ದುಪಡಿ ಮಸೂದೆಯಲ್ಲಿ ಕಡಿಗಿರತಕ್ಕಂಥ ವಿಚಾರಗಳನ್ನು ನಾನಾದರೂ ತಿಳಿಸುತ್ತೇನೆ. ಇದರಲ್ಲಿ ರೈತರ ವಾದಗ್ರಸ್ತವಾದಂಥ ಭಾವನೆ ಏನೂ ಇಲ್ಲ. ಮಾನ್ಯ ಶ್ರೀಮಾನ್ ಚೆನ್ನಬಸಪ್ಪನವರು ಇದು ರೈತರ ಮೇಲೆ ಒತ್ತಾಯ ಬರುತ್ತದೆ ಎನ್ನುವ ಮಾತನ್ನು ಹೇಳಿದರು. ಅವರು ಈ ಮಸೂದೆ ಮೇಲೆ ಮಾತನಾಡುವಾಗ ಯಾವರೀತಿ ರೈತರ ಮೇಲೆ ಪರಿಣಾಮವಾಗುತ್ತದೆ ಎನ್ನುವುದನ್ನು ವಿವರಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಮಯದಲ್ಲಿ ಅವರ ಮೇಲೇನಾದರೂ ಅನ್‌ರೀಸನಬಲ್ ಆಗಿ, ಅನ್ಯಾಯದ ಹೊರೆ ಆದಪಕ್ಷದಲ್ಲಿ ಅವರು ಹೇಳುವಂಥ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತೇನೆ. ಈಗ ಇರುವ ಬಿಲ್ಲಿನಲ್ಲಿ ಬಹಳ ಸ್ಪಷ್ಟವಾಗಿದೆ. ಈಗ ಕಾಂಟ್ರಿಬ್ಯೂಷನ್ ಕೊಡಬೇಕಾದರೆ ಕಾಮಗಾರಿ ಕೆಲಸ ಮುಗಿದ ಮೇಲೆ, ಅವರಿಗೆ ನೀರು ಒದಗಿಸಿಕೊಟ್ಟ ಮೇಲೆ ಕಾಂಟ್ರಿಬ್ಯೂಷನ್ ವಸೂಲ್ಮಾಡುತ್ತಿದ್ದೇವೆ. ಇದು ಕಂತುವಾರಾಗಿ 20 ಕಂತುಗಳಲ್ಲಿ ವಸೂಲ್ಮಾಡಬಹುದು ಎಂದು ಇದೆ. ಈಗ ನಮಗೆ ಹೆಚ್ಚು ಸಂಪನ್ಮೂಲಗಳು ಇಲ್ಲದೆ ಅಗತ್ಯವಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ರೈತರು ನೀರಾವರಿಗೋಸ್ಕರ ಅರಿಯುತ್ತಿದ್ದಾರೆ. ಅದರಲ್ಲೂ ಕೆಲವು ಭಾಗದ ರೈತರು ನೀರಿಗಾಗಿ ತವಕ ಪಡುತ್ತಿದ್ದಾರೆ, ಜಾತಕ ಪಕ್ಷಿಯಂತೆ ಬಾಯಿಬಿಡುತ್ತಿದ್ದಾರೆ, ಅದಕ್ಕಾಗಿಯೇ ಮುಂಚಿತವಾಗಿಯೇ ಹಣವನ್ನು ಕಟ್ಟುವುದಕ್ಕೆ ಮುಂದೆ ಬಂದಿದ್ದಾರೆ. ಆದುದರಿಂದ ಈ ಮಸೂದೆಯಲ್ಲಿರತಕ್ಕಂಥಾದ್ದು ಶೇಕಡ 66 ಭಾಗದ ಜನರು ಒಪ್ಪಿದರೆ ಅಂದರೆ ⅔ ಭಾಗದ ಜನರು ಮುಂಗಡವಾಗಿ ಹಣಕೊಡುವುದಕ್ಕೆ ಒಪ್ಪಿದರೆ ಆಮೇಲೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಇದರಲ್ಲಿ ಇದೆ. ಹಾಗೇನಾದರೂ ನಾವು ತೆಗೆದುಕೊಳ್ಳತಕ್ಕ ಎಲ್ಲ ಕಾಮಗಾರಿಗಳಲ್ಲಿಯೂ ಕೂಡ ಇದೇ ಒಂದು ಪದ್ಧತಿಯನ್ನು ಅನುಸರಿಸುತ್ತೇವೆ ಎಂದು ಸದಸ್ಯರು ಯಾರೂ ಭಾವನೆ ಮಾಡಬಾರದು. ಸರ್ಕಾರದ ಕಾರ್ಯಕ್ರಮದಲ್ಲಿರತಕ್ಕ ಕೆಲಸಗಳಿಗೆ ಇದು ಅನ್ವಯವಾಗುವುದಿಲ್ಲ. ಈಗ ಸರ್ಕಾರದ ಕಾರ್ಯಕ್ರಮದಲ್ಲಿಲ್ಲದೆ, ಯಾವುದಾದರೂ ಒಂದು ಭಾಗದ ರೈತರು ಈ ಒಂದು ಪ್ರಯೋಜನವನ್ನು ಪಡೆದು, ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದರೆ ಆಗ ಮಾತ್ರ ಈ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಅಪೇಕ್ಷೆ ಇದೆಯೇ ಹೊರತು ಬೇರೇನೂ ಇಲ್ಲ.

Sri H. SIDDAVEERAPPA.—According to Section 3-A, even if we have to proceed towards the completion with sufficient expedition in respect of the incompleted part or stage of the work, this advance contribution will be called for. You can ask for advance contribution in respect of the incompleted work according to this new section.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮಾನ್ಯ ಸದಸ್ಯರಿಗೆ ಆಗಲೇ ಹೇಳಿದ್ದು, ಯಾವುದು ಸರ್ಕಾರದ ಕಾರ್ಯಕ್ರಮದ ಪಟ್ಟಿಯಲ್ಲಿಲ್ಲ ಅಂಥ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಎಂದು. ಕಡಿನಿ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದರು. ಅದು ಸರ್ಕಾರದ ಕಾರ್ಯಕ್ರಮದ ಪಟ್ಟಿಯಲ್ಲಿದೆ. ಅದನ್ನು ಪೂರ್ಣಗೊಳಿಸತಕ್ಕ ಜವಾಬ್ದಾರಿ ಸರ್ಕಾರದ್ದಿದೆ. ಅಂಥದಕ್ಕೆ ಈ ಮಸೂದೆ ಅನ್ವಯವಾಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

Sri H. M. CHANNABASAPPA.—It amouuts to levying contribution. What is stated in Sub-section 1 (b) of Section 3A is this :

> "to proceed towards the completion with sufficient expedition in respect of the incompleted part or stage of the work, the construction, restoration, expansion or alteration of which the Government has already commenced and which is capable of irrigating more than one hundred acres of land."

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರವಿಲ್ಲ ಎಂದು ನಾನು ಹೇಳಲಿಲ್ಲ. ಸರ್ಕಾರದ ಕಾರ್ಯ ಕ್ರಮದ ಪ್ರಕಾರ ಯಾವ ಕಾರ್ಯಗಳನ್ನು ತೆಗೆದುಕೊಂಡು ಮುಗಿಸಬೇಕೆಂದು ಇರುತ್ತೋವೆ ಅದಕ್ಕೆ ಅನ್ಯಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಈ ವಿಚಾರದಲ್ಲಿ ನಾನು ಸಭೆಗೆ ಭರವಸೆ ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾರಂಗಿ ಪ್ರಾರಂಭ ಮಾಡಿದ್ದೀರಿ, ಕಬಿನಿ ಪ್ರಾರಂಭ ಮಾಡಿದ್ದೀರಿ. ಹೇಮಾವತಿ ಪ್ರಾರಂಭ ಮಾಡಿದ್ದೀರಿ. ಕೆಲಸ ಯಾವ ಯಾವದೋ ಹಂತವಲ್ಲಿದೆ ಅವೆಲ್ಲ ಪೂರ್ತಿಯಾಗುವುದು ಅವಶ್ಯಕ, ನಮ್ಮಲ್ಲಿ ದುಡ್ಡಿಲ್ಲವಾದ್ದರಿಂದ ಇಂಥವುಗಳಿಗೂ ಅನ್ಯಯ ಮಾಡಬೇಕು ಎಂದು ಹೇಳಿದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರವಾಗಿ ಮಾನ್ಯ ಸದಸ್ಯರು ಮಾತನಾಡಲಿ. ಅವರಿಗೆ ಅಪಾರವಾದ ಅನುಭವವಿದೆ. ಅದರಲ್ಲಿಯೂ ಈ ದೇಶದಲ್ಲಿ ಬಿದ್ದುಂಥ ಪ್ರತಿಯೊಂದು ಹನಿ ನೀರಿನ ತೊಟ್ಟನ್ನೂ ರೈತನಿಗೆ ಉಪಯೋಗವಾಗುವಂತೆ ಮಾಡಬೇಕು ಎನ್ನುವ ಅಭಿಪ್ರಾಯ ಅವರದಾಗಿದೆ. ಸರ್ಕಾರ ಯಾವ ಉದ್ದೇಶದಿಂದ ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದೆಯೋ ಅದೇ ಉದ್ದೇಶವನ್ನು ಹೊಂದಿರತಕ್ಕ ಶ್ರೀಮಾನ್ ಚನ್ನಬಸಪ್ಪನವರು ಇದರ ಬಗ್ಗೆ ಹಿತವಾದ ಟೀಕೆಯನ್ನು ಮಾಡುತ್ತಾರೆ ಮತ್ತು ಈ ಮಸೂದೆ ಉತ್ತಮವಾದ ಕಾಯಿದೆ ಆಗುವುದಕ್ಕೆ ಸಹಾಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ನಾನು ಅರಿಕೆ ಮಾಡಿಕೊಳ್ಳುತ್ತಿದ್ದೆ, ಮೂರನೇ ಎರಡು ಭಾಗದ ಜನರು ಒಪ್ಪಿಗೆ ಕೊಟ್ಟ ಸಂದರ್ಭದಲ್ಲಿ ಮಾತ್ರ ಕಾರ್ಯವನ್ನು ತೆಗೆದುಕೊಳ್ಳುವುದು, ಇಲ್ಲದೆ ಇದ್ದರೆ ಇಲ್ಲ. ಅದರಲ್ಲಿಯೂ ಮೂರನೇ ಎರಡು ಭಾಗದ ಜನರು ಒಪ್ಪಿಗೆಯನ್ನು ಕೊಟ್ಟ ಮೇಲೆ ಕೂಡ ನಾಲ್ಕು ಕಂತಿನಲ್ಲಿ ಕೊಡುವುದಕ್ಕೆ ಒಪ್ಪಿರಬೇಕು, ಪ್ರಥಮ ಕಂತನ್ನು ಐದನೇ ಮೂರು ಭಾಗದ ಜನ ಕೊಡಬೇಕು. ಇಂಥ ಸಂದರ್ಭದಲ್ಲಿ ಮಾತ್ರ ಈ ಒಂದು ತಿದ್ದುಪಡಿ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ವಿನಾ ಇಲ್ಲದೆ ಇದ್ದರೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಈ ಮಸೂದೆಯನ್ನು ಮೊದಲು ತರಬೇಕೆಂದು ಅಪೇಕ್ಷೆ ಪಟ್ಟ ಕಾಲದಲ್ಲಿ ಅತಿ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಅನ್ಯಯ ಮಾಡಬೇಕೆಂಬ ಉದ್ದೇಶವಿತ್ತು. ಆದರೆ ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾತ್ರ ಕೈಗೊಂಡರೆ ಯಾವ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆಯೋ ಆ ಉದ್ದೇಶ ಸಫಲವಾಗುವಾರದು, ಕಾರ್ಯ ಕೈಗೂಡಲಾರದು ಎಂದು ತಿಳಿದು 100 ಎಕರೆಗೆ ಮೇಲ್ಪಟ್ಟ ಎಲ್ಲ ಕಾಮಗಾರಿಗಳಿಗೂ ಇದನ್ನು ಅನ್ಯಯ ಮಾಡಬೇಕೆಂಬ ಅಪೇಕ್ಷೆ ಸರ್ಕಾರಕ್ಕೆ ಬಂತು. ಈ ಮಸೂದೆ ಕಾನೂನಾದ ಮೇಲೆ ರೈತರು ಮುಂಗಡವಾಗಿ ಹಣ ಕೊಡುವ ಹಾಗೆ ಬಂದರೂ ಕೂಡ, ಸರ್ಕಾರದ ಉದ್ದೇಶವಾದರೂ ಕೂಡ ಅವರು ಕೊಡಬೇಕಾದ ಹಣವೇನಿರುತ್ತದೆ ಅದನ್ನು ಬ್ಯಾಂಕುಗಳ ಮೂಲಕ ಕೊಡಿಸಬೇಕು ಎಂಬ ಅಪೇಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಮತ್ತೆ, ಆ ವಿಚಾರದಲ್ಲಿ ರೈತನ ಮೇಲೆ ಹೆಚ್ಚಿನ ಹೊರೆಯಾಗದಂತೆ ನೋಡಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಇದಕ್ಕೆ ಕಾನೂನು ಅಥವಾ ನಿಯಮಾವಳಿಯ ಅಡ್ಡಿ ಆದಚಣೆಯನ್ನು ತರದೆ ಸರ್ಕಾರ ಯಾವ್ಕೆ ಕಾತುರತೆಯಿಂದ ಸಭೆಯ ಮುಂದೆ ಇಟ್ಟಿದೆ ಅದೇ ಕಾತುರತೆಯಿಂದ ಈ ಮಾನ್ಯ ಸಭಾಸದಸ್ಯರು ಈ ವಿಚಾರದಲ್ಲಿ ಈ ಮಸೂದೆಯ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ನಾನು ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ. ರೈತರಿಗೆ ಯಾವುದಾದರೂ ರೀತಿಯಲ್ಲಿ ಇದರಿಂದ ತೊಂದರೆಯಾಗುವುದಾದರೆ ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎನ್ನುವ ವಿಚಾರವನ್ನು ಸಭೆಯಲ್ಲಿ ಅರಿಕೆ ಮಾಡಿಕೊಂಡು ಈ ಮಸೂದೆಯನ್ನು ಪರಿಶೀಲಿಸಬೇಕೆಂದು ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು). —ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು, ಸಂಸದೀಯ ವ್ಯವಹಾರ ಶಾಖೆಯ ಮಂತ್ರಿಗಳಾಗಿ ಈ ಒಂದು ತಿದ್ದುಪಡಿ ಮಸೂದೆಯನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ನಮಗಾದರೂ ಇಂಥ ಒಂದು ಕಾಯಿದೆ ಈ ಸಭೆಯಲ್ಲಿ ಬರಲಿ ಎನ್ನುವ ಆಕಾಂಕ್ಷೆ ಬಹಳ ದಿವಸಗಳಿಂದಲೂ ಇತ್ತು. ಆದರೆ ಈ ಹೊತ್ತು ನಮ್ಮ ಮನಸ್ಸಿಗೆ ಅದಂಥ ದುಃಖವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಈ ಹೊತ್ತು ನಮ್ಮ ರಾಜ್ಯದಲ್ಲಿ ತರೆ ಎತ್ತಿ ನಿಂತಿರತಕ್ಕ ಅಪ್ಪರ್ ಕೃಷ್ಣ, ಹೇಮಾವತಿ, ಕಾವೇರಿ ಮುಂತಾದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ತೀವ್ರ ಕಾರ್ಯಗತಗೊಳಿಸಬೇಕು, ನಮ್ಮ ರಾಜ್ಯದಲ್ಲಿನ ರೈತರ ಹಕ್ಕುಗಳನ್ನು ಮತ್ತು ರಾಜ್ಯದ ನೀರಿನ ಪೂರ್ಣ ಸಂರಕ್ಷಣೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ಮಾತ್ರ ಇಂಥ

ಒಂದು ಕಾಯಿದೆಯನ್ನು ತರಬೇಕು ಎನ್ನುವ ಒತ್ತಾಯ ವಿರೋಧಪಕ್ಷದಿಂದಲೂ ಮತ್ತು ಜನತೆಯಿಂದಲೂ ಇತ್ತು ಎನ್ನುತಕ್ಕ ಮಾತನ್ನು ಹೇಳಬಯಸುತ್ತೇನೆ. ಈ ದಿವಸ ಈ ಮನೂದೆಯನ್ನು ತಂದದ್ದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇದರಿಂದ ಸರ್ಕಾರ ತನ್ನ ಒಂದು ಜವಾಬ್ದಾರಿಯನ್ನು, ತಾನು ಮಾಡಬೇಕಾದ ಕರ್ತವ್ಯವನ್ನು, ತಾನು ನೇರವಾಗಿ ಮಾಡದೆ ಅದನ್ನು ಜನತೆಯ ಮೇಲೆ ಹಾಕಬೇಕು, ಯಾರಲ್ಲಿ ಯಾವ ಜನರಲ್ಲಿ ಜಾಸ್ತಿ ರಾಜಕೀಯ ಎಚ್ಚರಿಕೆ ಇದೆ ಅಥವಾ ಯಾರು ಮುಂದೆ ಬಂದು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಇಷ್ಟುಪಡುತ್ತಾರೆ ಅಂಥವರಿಗೆ ಮಾತ್ರ ಇದು ರಾಭದಾಯಕವಾಗುತ್ತದೆಯೇ ಹೊರತು ಮುಂದೆ ಸರ್ಕಾರ ಯಾವ ದೃಷ್ಟಿಯಿಂದ ಜನತೆಯ ಹಿತ ಮಾಡಬಹುದು ಎಂಬ ಉದ್ದೇಶ ಈ ಮನೂದೆಯಲ್ಲಿ ಕಂಡು ಬರುವುದಿಲ್ಲ.

4-00 P. M.

ಕಾಯಿದೆ ತರುವವರೆಗೆ ಸಹಕಾರ ಮಾಡುತ್ತೇವೆಂದು ಹೇಳಿದರು, ಇಂದು ವಿರೋಧಿಸುತ್ತಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ಆದರೆ ಕೆರೆ ವಗೈರೆ ಕಟ್ಟಲು ಕಾಂಟ್ರಿಬ್ಯೂಷನ್ ಯಾರಿಂದ ತೆಗೆದುಕೊಳ್ಳುತ್ತೀರೋ ಅವರಿಗೆ ನೀರು ದೊರೆಯದಿದ್ದರೆ ಕಂದಾಯ, ತೆರಿಗೆ ಮುಂತಾದ್ದು ಯಾವುವು ಇವೆಯೋ ಅವನ್ನು ತೆಗೆಯಿರಿ ಎಂದು ಹೇಳಬಹುದು. ಇಂದು ಸರಕಾರ ನಡುವಿನ ಕಂಟ್ರಾಕ್ಟರು, ಕೆಲಸಮಾಡುವ ಏಜೆನ್ಸಿ. ಸರಿಯಾದ ಕಾರ್ಯಸಾಧನೆ ಈ ಕಾಯಿದೆಯಿಂದಾಗುವುದಿಲ್ಲ. ಆದುದರಿಂದ ಈ ವಿಧೇಯಕವನ್ನು ಬಹಳವಾಗಿ ವಿರೋಧಿಸಬೇಕೆಂಬ ಉದ್ದೇಶವಿದೆ. ಇದರಲ್ಲಿ ಸ್ಪಷ್ಟವಾಗಿಲ್ಲ. ರೈತರಿಗೆ ಅನುಕೂಲ ಇದರಿಂದಾಗುವುದೆಂದು ಮಂತ್ರಿಗಳು ಹೇಳಿದರು. ಹಾಗಿರುವುದಾದರೆ ನೂರು ಎಕರೆ ಪರಿಮಿತಿ ಇರುವುದನ್ನು ತೆಗೆದುಹಾಕಬೇಕು. ಕಾವೇರಿ, ಕೃಷ್ಣ ನೀರಿನ ಉಪಯೋಗದ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಾಗಿ ಅಧ್ಯಕ್ಷರು ತಿಳಿಸಿದ್ದಾರೆ. ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಸರಕಾರ ತಾನೇ ಮಾಡದೆ ರೈತರಮೇಲೆ ಹಾಕುವುದು ಬಹಳ ನಾಚಿಕೆಗೇಡು. ಸೇಕಡ 66 ಜನರು ಒಪ್ಪಿದರೆ ಸರಕಾರ ಒಂದು ಪ್ರಯಾರಿಟಿ ಲಿಸ್ಟ್ ಕೊಡುವುದು. ಯಾವ ಭಾಗಕ್ಕೆ ಕೊಡಬೇಕು, ತಮಗೆ ಬೇಕಾದವರಲ್ಲದ್ದಾರೆ ಎಂದು ನೋಡಿ ಸರಕಾರ ಸ್ವಾರ್ಥ ಸಾಧಿಸಲು ಅವಕಾಶವಿದೆ, ಅದರ ಪ್ರಕಾರ ಪ್ರಯಾರಿಟಿ ಲಿಸ್ಟ್ ಮಾಡಬಹುದು, ಸರಕಾರದ ಹತೋಟಿ ಇದೆ. ಇಂದು ಜನರು ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಸರಕಾರದ ಮುಂದೆ ಹೇಳಿದರೆ ಅದನ್ನು ಸರಕಾರ ಸ್ವಾಗತಿಸಿ ಇಂಥ ಕೆಲಸಮಾಡುವುದು ಸರಕಾರದ ಕರ್ತವ್ಯ. ಆದರೆ ಅದನ್ನು ಬಿಟ್ಟಿದ್ದಾರೆ. ಅವರು ರೆಲೆಟಿವ್ ಪ್ರಯಾರಿಟಿ ಇರಬೇಕು, ಹಣವಿರಬೇಕು ಎಂದು ಕಂಡೀಷನ್ ಹಾಕಿ ಅದಾದಮೇಲೆ ಮಾಡುತ್ತೇವೆ ಎಂದು ಹೇಳಿದರೆ ಯಾವರೀತಿ ಈ ತಿದ್ದುಪಡಿ ಮನೂದೆಯಿಂದ ಕಾರ್ಯಸಾಧನೆಯಾಗುವುದು. ಉದ್ದೇಶವೇನಿದೆ ಅದು ಇದರಿಂದ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇದಲ್ಲದೆ ಒಂದು ವಿಶೇಷ ವಿಷಯವನ್ನು ಹೇಳುತ್ತೇನೆ. ಸೆಕ್ಷನ್ 3 (ಎ) ಸಬ್ ಸೆಕ್ಷನ್ ಎರಡರಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಸರಕಾರ ಆಯಾ ನೀರಾವರಿ ಯೋಜನೆಗೆ ನಿಗದಿಮಾಡುವುದು, ಅದರಂತೆ ರೈತರು ಹಣ ಕಟ್ಟಬೇಕು ಎಂದು ತಿಳಿಸಲಾಗಿದೆ. ಆದರೆ ಹಿಂದೆ ಮಾಡಿದ ತಿದ್ದುಪಡಿಯಲ್ಲಿ ಎಕರೆಗೆ 500 ರೂಪಾಯಿ ಕೊಡಬೇಕು ಎಂದಿದೆ. ಹೀಗೆ ಒಂದು ನಿರ್ದಿಷ್ಟವಾದ ಹಣವನ್ನು ತೋರಿಸಿ ಮತ್ತೆ ಯೋಜನೆಗೆ ಹಣ ರೈತರು ಮುಂಗಡವಾಗಿ ಇಷ್ಟು ಕೊಡಬೇಕು ಎಂದು ಸರಕಾರಕ್ಕೆ ಬಿಟ್ಟಿರುವುದು ಅಥವ ಅಧಿಕಾರಿಗೆ ಬಿಟ್ಟಿರುವುದು ಎಂದು ಇಲ್ಲದೆ. ಸರಕಾರ ಈ ರೀತಿಯ ಹಕ್ಕನ್ನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸ್ಪಷ್ಟಪಡಿಸಬೇಕು. ಯಾವ ಜಮೀನಿಗೆ ಎಷ್ಟು ಕೊಡಬೇಕು ಎಂದು ಒಂದು ಪಟ್ಟಿಹಾಕಿ ತೋರಿಸಬೇಕು. ಇಷ್ಟು ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಸೂಚಿಸಬೇಕು. ಸರಕಾರ ಅಧಿಕಾರಿಗಳ ಕೈಗೊಂಬೆಯಾಗಬಾರದು. ಅಧಿಕಾರಿಗಳಿಗೆ ಬಿಡುವುದು ಸರಿಯಲ್ಲ. ಈ ರೀತಿ ಕಾಯಿದೆ ಇದ್ದರೆ ನಾಳೆ ಹೈಕೋರ್ಟಿನಲ್ಲಿ ಥಾರಿಂಜ್ ಮಾಡದೆ ಬಿಡುವುದಿಲ್ಲ, ಇದು ಕಾರ್ಯಗತವಾಗುವುದಿಲ್ಲ. ಕನಿಷ್ಠ ಮೊಬಲಗನ್ನಾದರೂ ತೋರಿಸಬೇಕು. 500 ರೂಪಾಯಿಗಳಿಗಿಂತ ಹೆಚ್ಚಾಗಿ ಒಂದು ಎಕರೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಇಲ್ಲಿ ತೋರಿಸಬೇಕು. ಇಲ್ಲದಿದ್ದರೆ ಇಲ್ಲಿರುವುದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ಹೈಕೋರ್ಟ್ ಹೇಳಬಹುದು. ನಿಷ್ಕರ್ಷೆ ಮಾಡುವ ಅಧಿಕಾರ ಅಧಿಕಾರಿಗಳಿಗಿರುವುದು ಸರಿಯಲ್ಲ. ಎಕ್ಸಿಕ್ಯುಟಿವ್ ಅಧಿಕಾರಿಗಳಿಗೆ ಲಂಗುಲಗಾಮಿಲ್ಲ, ಇಂಥ ಬಿಲ್ಲು ಮಾಡಿದರೆ ಕಾರ್ಯಗತಮಾಡುವುದಕ್ಕೆ ಬರುವುದಿಲ್ಲ. ಆದಕ್ಕಾಗಿ 3 (ಎ) ಸಬ್‌ಸೆಕ್ಷನ್ ಎರಡರಲ್ಲಿ 100 ರೂಪಾಯಿಗಳಿಗಿಂತ ಹೆಚ್ಚು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುವದಕ್ಕೆ ಬರುವುದಿಲ್ಲ ಎಂದು ಸೇರಿಸಬೇಕು. ಹೈಯರ್ ಲಿಮಿಟ್ ಆದರೂ ತೋರಿಸಿ.

(ಶ್ರೀ ಎಂ. ನಾಗಪ್ಪ)

ಇವಲ್ಲದೆ ಮುಖ್ಯವಾದ ಇನ್ನೊಂದು ಅಂಶವೆಂದರೆ ಕಾಯಿದೆಯಲ್ಲಿರುವ ಪ್ರೊಸೀಜರ್ ಎಚಿತ್ರವಾಗಿದೆ. ಮೊದಲನೆಯದಾಗಿ ಆಯಾ ನೀರಾವರಿ ಯೋಜನೆಯಲ್ಲಿ ಬರುವ ಒಟ್ಟು ರೈತರಲ್ಲಿ ಸೇಕಡ 66 ಮಂದಿ ಒಪ್ಪಿಗೆ ಮೊದಲು ಕೊಡಬೇಕು. ನಂತರ ಐದನೆಯ ಮೂರು ಭಾಗದ ರೈತರು ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಒಪ್ಪಬೇಕು. ನಂತರ ಒಂದು ಕರಡು ಯೋಜನೆ ಮಾಡಿ ಪಬ್ಲಿಷ್‌ಮಾಡುವರು. ಫೈನರ್ ಆದಮೇಲೆ ಇಂಥ ತಾರೀಖು ಹಣ ಕಟ್ಟಬೇಕೆಂದು ರೈತರಿಗೆ ನೋಟೀಸು ಕೊಡುವರು. ಹಣ ಕೊಟ್ಟಮೇಲೆ ಸಬ್‌ಸೆಕ್ಷನ್ 4 ರ ಪ್ರಕಾರ ಸೇಕಡ 66 ರೈತರು ಒಪ್ಪಿಗೆ ಕೊಡಬೇಕು ಎಂದು ಸೇರಿನಲಾಗಿದೆ. ಒಂದು ಸಲ ಸೇಕಡ 66 ಮಂದಿ ರೈತರು ಬರೆದು ಕೊಟ್ಟ ಮೇಲೆ, ಹಣ ಕೊಟ್ಟ ಮೇಲೆ ಮತ್ತೆ ಎರಡನೆಯ ಸಲ ಫೈನರ್ ಮಾಡಿಲ್ಲ, ಸೇಕಡ 66 ಮಂದಿ ಮತ್ತೆ ಒಪ್ಪ ಬೇಕು ಎಂದು 4 ಮತ್ತು 5ರಲ್ಲಿರುವುದು ಅನ್ಯಾಯ. ಇಂಥ ಒಪ್ಪಿಗೆ ಕೊಡದೇ ಇದ್ದರೆ ಹಣ ಕೊಟ್ಟಿರುವವರಿಗೆ ಸಹ ಸರಿಯಾದ ವ್ಯವಸ್ಥೆ ಮಾಡುವುದಿಲ್ಲ. ಆದುದರಿಂದ ಸಬ್‌ಸೆಕ್ಷನ್ 4 ಮತ್ತು 5 ಏನಿವೆ ಅವನ್ನು ಪರಿಶೀಲನಬೇಕು ಎಂದು ಹೇಳುತ್ತೇನೆ.

ಬಹಳ ಉತ್ತಮ ಕಾಯಿದೆ ತಂದಿದ್ದೇವೆ ಎಂದು ತಾವು ಹೇಳಬಹುದು. ಯಾರು ಲಂಚಸಂ ಆಗಿ ಒಂದೇ ಸಾರಿ ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹಣವನ್ನು ಕೊಡುತ್ತಾರೆ ಅವರಿಗೆ 10 ಪರ್ಸೆಂಟ್ ರಿಬೇಟ್ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ಇದು ಬಡ ರೈತರಿಗೆ ಹಿತ ಮಾಡುವಂತಹ ಮಾತು ಅಲ್ಲ. ಯಾರು ಹಣವಂತ ರೈತರು ಇದ್ದಾರೆ ಅಂತಹವರು ಬ್ಯಾಂಕಿನಲ್ಲಿ ಹಣ ಇಟ್ಟರೆ ಎರಡು ಪರ್ಸೆಂಟ್ ಬಡ್ಡಿ ಬರುವುದಿಲ್ಲ ಅವರಿಗೆ ಇದು ಒಂದು ಒಳ್ಳೆಯ ಅವಕಾಶ ಮಾಡಿ ಕೊಟ್ಟಂತೆ ಆಗುತ್ತದೆ, ಆದ್ದರಿಂದ ಈ ರಿಬೇಟ್ ಬಹಳ ಹೆಚ್ಚಿನದು, ಬ್ಯಾಂಕುಗಳಲ್ಲಿ ಇಟ್ಟರೆ ಯಾವ ಪ್ರಕಾರ 2 ಪರ್ಸೆಂಟ್ ಕೊಡುತ್ತಾರೆ ಅಷ್ಟು ಮಾತ್ರ ಕೊಡಬಹುದಾಗಿತ್ತು. 10 ಪರ್ಸೆಂಟ್ ಕೊಡುತ್ತೇವೆ ಅಂತ ಅನ್ನುವ ಮಾತು ಬಹಳ ಅನ್ಯಾಯ, ದೊಡ್ಡ ರೈತರಿಗೆ ಸಹಕಾರ ಮಾಡಬೇಕು, ಅವರ ಬೆಳವಣಿಗೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ತಂದಿದ್ದೀರಿ ಎಂಬ ಮಾತನ್ನು ಸ್ಪಷ್ಟ ಪಡಿಸುತ್ತೇನೆ. 10 ಪರ್ಸೆಂಟ್ ರಿಬೇಟ್ ಕೊಡುತ್ತೇವೆ, ಇದು ಬಹಳ ಉತ್ತಮವಾದ ಉದ್ದೇಶದಿಂದ ತಂದಿದ್ದೇವೆ ಅಂತ ಹೇಳುವುದನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ಸರ್ಕಾರದವರು ಇಂತಹ ಒಂದು ಕಾಯಿದೆಯನ್ನು ಸಣ್ಣ ಸಣ್ಣ ಯೋಜನೆಗಳಿಗಾಗಿ ಯಾವತ್ತೂ ಮಾಡಕೂಡದು ದೊಡ್ಡ ದೊಡ್ಡ ಯೋಜನೆಗಳು ಯಾವುವು ಪೂರ್ಣವಾಗದೇ ನಿಂತಿವೆ ಅಂತಹ ಯೋಜನೆಗಳನ್ನು ಪೂರ್ಣಗತಿಗೊಳಿಸುವುದಕ್ಕೆ ಪ್ರಯತ್ನ ಮಾಡುವುದಿದ್ದರೆ ಮಾತ್ರ ಇಂತಹ ಕಾಯಿದೆ ಅವಶ್ಯಕ, ಇಲ್ಲದೇ ಇದ್ದರೆ ಇಂತಹ ಕಾಯಿದೆಗೆ ಅವಕಾಶವಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರದವತ ಮೇಲೆ ಇರತಕ್ಕ ಜವಾಬ್ದಾರಿ ತೆಗೆದು ಹಾಕಿಕೊಳ್ಳುವುದಕ್ಕೆ ಎಂದರೆ ಪರ್ಚಿಂಗ್ ದಿ ರೆಸಪಾನ್‌ಸಿಬಿಲಟಿ ಎಂದು ಏನು ಹೇಳುತ್ತೇವೆ ಅದನ್ನು ಮಾಡುವುದಕ್ಕೆ ಈ ಕಾಯಿದೆಯನ್ನು ತಂದಿದ್ದೀರಿ ಎಂದು ಖಚಿತವಾಗಿ ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ನನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಮುಂಗಡ ಹಣವನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡತಕ್ಕ ಈ ತಿದ್ದುಪಡಿ ವಿಧೇಯಕವನ್ನು ನಾನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಇದರ ಹಿನ್ನೆಲೆ ಬಹುಶಃ ಈ ಸಭೆಗೆ ಗೊತ್ತಿದೆ. ನೀರಾವರಿಯ ಪ್ರಮಾಣ ಈ ರಾಜ್ಯದಲ್ಲಿ ಎಷ್ಟು ಮಟ್ಟಿಗೆ ಇದೆ, ನಾವು ಈ ರಾಜ್ಯದಲ್ಲಿ ಸಿಕ್ಕಬಹುದಾದಂತಹ ಒಂದು ತೊಟ್ಟು ನೀರೂ ಅಪವ್ಯಯ ವಾಗದಂತೆ, ಅವಿಯಾಗಿ ಅರಿ ಹೋಗದಂತೆ ತಡೆಗಟ್ಟಿ ನೀರಾವರಿ ಯೋಜನೆಗಳನ್ನು ಮಾಡಿದರೂ ಸಹ ನಾವು ಯಾವ ಮಟ್ಟಕ್ಕೆ ಮುಟ್ಟಿದ್ದೇವೆ ಎಂಬ ಎರ್ಲಾ ಅಂಕಿಅಂಶಗಳೂ ಹಲವಾರು ಸಾರಿ ಈ ಸಭೆಯಲ್ಲಿ ಚರ್ಚಿತವರ್ತಣವಾಗಿದೆ ; ಮತ್ತೆ ಪ್ರಸ್ತಾಪ ಮಾಡಬೇಕಾದ್ದು ಅಗತ್ಯ ಎಂದು ಅನಿಸುತ್ತಾ ಇಲ್ಲ. ನೀರಾವರಿ ಯೋಜನೆಯನ್ನು ಅತ್ಯಂತ ಕ್ಷಿಪ್ರಗತಿಯಲ್ಲಿ ಸಾಧ್ಯವಾದಷ್ಟೂ ಹೆಚ್ಚು ಪ್ರಮಾಣದಲ್ಲಿ ಸಾಧಿಸಬೇಕೆನ್ನತಕ್ಕ ತವಕ ಕೇವಲ ಸರ್ಕಾರಕ್ಕೆ ಮಾತ್ರವಲ್ಲ, ಆಳುವ ಪಕ್ಷಕ್ಕೆ ಸೇರಿರತಕ್ಕ ಸದಸ್ಯರಿಗೆ ಮಾತ್ರವಲ್ಲ, ವಿರೋಧ ಪಕ್ಷದ ಅನೇಕ ಸ್ನೇಹಿತರಲ್ಲೂ ಕೂಡ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇತ್ತೀಚಿನ ದಿವಸಗಳಲ್ಲಿ ಕಂಡುಬಂದಿದೆ. ನೀರಾವರಿ ಯೋಜನೆಯನ್ನು ಸಾಧಿಸುವುದಕ್ಕೆ ಏನೇನು ಮಾಡಲಾಗಿದೆ ಏನೇನು ಮಾಡಿದ್ದಾರೆ, ಏನೇನು ಮಾಡಬೇಕೆಂಬ ಧಾಟಿಯಲ್ಲಿ ನಿರ್ಣಯಗಳನ್ನು ವಿರೋಧಪಕ್ಷದ ಸ್ನೇಹಿತರು ಈ ಸಭೆಯ ಮುಂದೆ ಹಿಂದೆ ಮಂಡಿಸಿದ್ದಾರೆ. ಅಂತಹ ಒಂದು ಹಿನ್ನೆಲೆಯಲ್ಲಿ ಯಾವ ಯಾವ ಪ್ರಾಜೆಕ್ಟುಗಳು ಇವೆ, ಇವುಗಳನ್ನು ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರವೇ ನೇರವಾಗಿ ತನ್ನ ಸಂಪನ್ಮೂಲದ ಬಲದಿಂದ ಸಾಧಿಸಲಿಕ್ಕೆ ಶಕ್ಯವಿಲ್ಲ ಅಂತಹ ಯಾವುದೇ ಪ್ರಾಜೆಕ್ಟಿನ

ನಂಬಂಧದಲ್ಲಿ ಆದರಿಂದ ಯಾರಿಗೆ ಅನುಕೂಲವಾಗುತ್ತದೆ ಆ ಹಿಡುವಳಿದಾರರು ಮುಂದೆ ಬಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿ ಒಪ್ಪಿಕೊಂಡ ನಂದರ್ಭದಲ್ಲಿ ಅದಕ್ಕೆ ಅವ ಕಾಶಮಾಡಿಕೊಟ್ಟರೆ, ಅವರಿಂದ ಮುಂಗಡವಾಗಿ ಹಣ ಪಡೆದು ಆ ವ್ಯಾಜೆಕ್ಟುಗಳನ್ನು ಮಾಡುವು ದಕ್ಕೆ ಒಂದು ಅವಕಾಶವಿರಬೇಕೆನ್ನುವುದು ಈ ಒಂದು ಮಸೂದೆಯ ಧ್ಯೇಯ. ಇಂಥಾದ್ದು ಇರಬೇಕೆಂದು ಸಾರ್ವತ್ರಿಕವಾಗಿ ಅನೇಕ ದಿವಸಗಳಿಂದ ಅಭಿವ್ಯಾಯಗಳು ಬಂದುದನ್ನು ನಾವು ಅಲ್ಲಲ್ಲಿ ಕೇಳಿದ್ದೇವೆ. ಸರ್ಕಾರ ಇವತ್ತು ವ್ಯವಸ್ಥಿತವಾದಂತಹ ರೀತಿಯಲ್ಲಿ ಅದಕ್ಕೆ ಒಂದು ರೂಪವನ್ನು ಕೊಟ್ಟು ಒಂದು ವಿಧೇಯಕದ ಮೂಲಕ ಪ್ರತಿಪಾದನೆ ಮಾಡಿದೆ. ಇವತ್ತು ಸರ್ಕಾರ ದೊಡ್ಡ ದೊಡ್ಡ ವ್ಯಾಜೆಕ್ಟು ಗಳನ್ನು ತೆಗೆದುಕೊಳ್ಳಬೇಕಾದರೂ ಕೂಡ ಅವಕ್ಕೆ ಯಾವುದಾದರೂ ಒಂದು ರೀತಿಯ ಪ್ರಯಾರಿಟಿ ಯನ್ನು ನಿರ್ಧರಿಸಲೇಬೇಕು. ಕಬಿನಿ ಯೋಜನೆ ಅಥವಾ ಕೃಷ್ಣ ಯೋಜನೆ ಯಾವುದೇ ಆದರೂ ಕೂಡ ಅದಕ್ಕೆ ಯಾವ ರೀತಿ ಸಂಪನ್ಮೂಲವನ್ನು ರೂಢಿಸಬೇಕೆಂಬುದನ್ನು ಯೋಚನೆ ಮಾಡಬೇಕು ಮತ್ತು ಅದೇ ರೀತಿ ಪ್ರತಿಯೊಂದು ವಿಷಯದಲ್ಲೂ ಕೂಡ ಸರ್ಕಾರ ಒಂದು ಪ್ರಯಾರಿಟಿಯನ್ನು ಇಟ್ಟು ಕೊಳ್ಳದೆ ಕೆಲಸ ಮಾಡಲಕ್ಕೆ ಸಾಧ್ಯವಿಲ್ಲ. ಬಡ್ಜೆಟ್ ಮಾಡುವಾಗಲೂ ಸಹ ಬಹುಶಃ ಅನೇಕ ವರ್ಷಗಳಿಂದ ಅದಕ್ಕೆ ಯಾವ ರೀತಿಯಲ್ಲಿ ಹಣ ಒದಗಿಸಬೇಕು, ಯಾವುದು ಅತ್ಯಂತ ಪ್ರಾಮುಖ್ಯ ವಾದುದು ಎಂಬುದಾಗಿ ನಿರ್ಧರಿಸಬೇಕೆನ್ನುವುದು ಸಾಕಾದಷ್ಟು ಜವಾಬ್ದಾರಿಯುತವಾಗಿ ಪೂರ್ವ ಗ್ರಹವಿಲ್ಲದೆ ಅಬ್ಜೆಕ್ಟೀವ್ ಕನ್‌ಸಿಡರೇಷನ್ ಸರ್ಕಾರದ ಮುಂದೆ ಇದೆ. ಈ ಆಧಾರದ ಮೇರೆ ಇವು ಗಳನ್ನು ತೀರ್ಮಾನ ಮಾಡುತ್ತಾರೆ. ಇಷ್ಟೇ ಅಲ್ಲ, ಮಧ್ಯಮ ವರ್ಗದ ನೀರಾವರಿ ಯೋಜನೆ ಇರಲಿ ಅಥವಾ ಸಣ್ಣ ಪ್ರಮಾಣದ ನೀರಾವರಿ ಯೋಜನೆಯಲ್ಲೂ ಕೂಡ ಇಂತಹ ಪ್ರಯಾರಿಟಿ ಹಾಕಿ ಕೊಳ್ಳಬೇಕಾಗುತ್ತದೆ. ಈ ವರ್ಷ 15 ಕೆರೆಗಳ ಕೆಲಸ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಎಕ್ಸಿ ಕ್ಯೂಟೀವ್ ಇಂಜನಿಯರು ಅಥವಾ ಅಸಿಸ್ಟೆಂಟ್ ಇಂಜನಿಯರಿಂದ ಪ್ರಾರಂಭವಾಗಿ ಸರ್ಕಾರದವ ರೆಗೂ ಬಂದು ಅದರ ಪ್ರಯಾರಿಟಿ, ಯಾವುದು ತೆಗೆದುಕೊಳ್ಳಬೇಕೆಂಬುದು ನಿರ್ಧಾರವಾಗುತ್ತದೆ. ಇವತ್ತು ಮಾಡಬೇಕಾದಂತಹ ಕೆಲಸ ವಿಪರೀತವಾಗಿದೆ. ಆದರೆ ಅದಕ್ಕೆ ಅಗತ್ಯವಾದ ಹಣ ಬಹಳ ಕಡಿಮೆ ಇದೆ ಅಂತಹ ನಂದರ್ಭದಲ್ಲಿ ಪ್ರಯಾರಿಟಿ ಲಿಸ್ಟ್ ಮಾಡತಕ್ಕದ್ದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಪ್ರಯಾರಿಟಿ ಲಿಸ್ಟ್‌ನಲ್ಲಿ ಬರದೇ ಇರತಕ್ಕ ಯಾವುದಾದರೂ ಒಂದು ಯೋಜನೆ ಯನ್ನು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಒಂದು ವ್ಯವಸ್ಥೆ ಇರಬೇಕೆನ್ನುವುದು ಈ ಮಸೂದೆಯ ಧ್ಯೇಯ. ಇದು ರಾಜಕೀ ಯಕ್ಕೆ ಎಡೆಮಾಡುತ್ತದೆ. ತಮಗೆ ಬೇಕಾದ್ದನ್ನೆಲ್ಲಾ ಕೇವಲ ಸರ್ಕಾರದ ಹಣದಿಂದಲೇ ಮಾಡಿ ತಮಗೆ ಬೇಡವಾದ್ದನ್ನು ಮಾಡುವುದಕ್ಕೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೇಳುವುದಕ್ಕಾಗಿ ಇದು ಉಪಯೋಗವಾಗತಕ್ಕ ಒಂದು ಅಸ್ತ್ರವಾಗಿ ಪರಿಣಾಮವಾಗುತ್ತದೆ ಎಂಬ ಶಂಕೆಯನ್ನು ವ್ಯಕ್ತ ಪಡಿಸಿದ್ದಾರೆ. ಇದಕ್ಕೆ ಆಧಾರ ಸ್ಪಷ್ಟಪಡುತ್ತಿಲ್ಲ. ಹಾಗೆ ಮಾಡತಕ್ಕದ್ದು ಸರ್ಕಾರದ ಉದ್ದೇಶ ಇದ್ದರೆ ಈ ಬಿಲ್ಲನ್ನು ತರದೇ ಕೂಡ ಮಾಡಲಕ್ಕೆ ಸಾಧ್ಯವಿದೆ. ಆದ್ದರಿಂದ ಸರ್ಕಾರ ಇವತ್ತು ಏನು ಮಾಡಿದೆ ಇದು ಸರಿಯಾಗಿದೆ. ಯಾವ ರೀತಿಯಲ್ಲಾದರೂ ಮಾಡಿ ಹಣವನ್ನು ನಂಪಾದನೆ ಮಾಡಲಕ್ಕೆ ಹಕ್ಕು ಇದೆ. ಈ ಬಿಲ್ಲು ತಂದು ಯಾವುದೋ ಕೆಲವು ಭಾಗಗಳನ್ನು, ಕೆಲವು ಜನರನ್ನು ಉದಾಸೀನ ಮಾಡಬೇಕೆನ್ನುವುದಕ್ಕೆ ಈ ಒಂದು ಹೊಸ ಅಸ್ತ್ರದ ಅವಶ್ಯಕತೆ ಇಲ್ಲ. ಸರ್ಕಾರ ನಿಜವಾಗಿಯೂ ಅವ್ಯಾಣಿಕವಾಗಿ ಪ್ರಯಾರಿಟಿ ನಿರ್ಧರಿಸುವುದಿಲ್ಲ, ಸಾರ್ವಜನಿಕ ಹಿತದೃಷ್ಟಿಯಿಂದ, ಎಲ್ಲಾ ಭಾಗ ಗಳೂ ಅಭಿವೃದ್ಧಿ ಹೊಂದಬೇಕು, ಶೀಘ್ರಗತಿಯಲ್ಲಿ ನೀರಾವರಿ ಯೋಜನೆಗಳು ಸಿದ್ಧವಾಗಬೇಕು, ಯಾವುದು ತಕ್ಷಣ ನಮಗೆ ಹೆಚ್ಚಿನ ಪ್ರತಿಫಲ ಕೊಡುತ್ತದೆ ಅಂತಹ ಯೋಜನೆಗಳಿಗೆ ಹೆಚ್ಚಾಗಿ ಕಾನ್‌ಸೆನ್‌ಟ್ರೇಟ್ ಮಾಡಬೇಕು, ಅಂತಹ ಒಂದು ಸಾರ್ವತ್ರಿಕವಾದ, ಉದಾರವಾದ ರಾಜ್ಯದ ಹಿತದೃಷ್ಟಿಯಿಂದ ಯೋಜನೆಗಳನ್ನು ಕೈಕೊಳ್ಳಬೇಕೆಂಬತಕ್ಕ ಒಂದು ಘೋರಣೆಯನ್ನು ಸರ್ಕಾರ ಅನುಸರಿಸದೆ ರಾಜಕೀಯ ದೃಷ್ಟಿಯಿಂದಲೇ ಕೆಲಸಮಾಡಿ ತನ್ನ ಜೀರ್ಣೋದ್ಧಾರ ಮಾಡಿಕೊಳ್ಳ ಬೇಕೆಂದರೆ ಇವತ್ತು ಈ ಬಿಲ್ಲು ತಂದು ಮಾಡಬೇಕಾದ ಅವಶ್ಯಕತೆ ಇಲ್ಲ, ಆದ್ದರಿಂದ ಈ ಬಿಲ್ಲು ತಂದ ಉದ್ದೇಶ ಹಾಗಾಗುತ್ತದೆ ಎಂದು ಶಂಕೆಪಡುವುದು ಅಮ್ಮ ಸರಿಯಲ್ಲ, ದೋಷದೋಷ ಇದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತರಬಹುದು, ಅಥವಾ ಅಕಸ್ಮಾತ್ ಪ್ರಯಾರಿಟಿ ಕೊಡುವಾಗ ಯಾವುದಾದರೂ ಸರ್ಕಾರದ ಗಮನಕ್ಕೆ ಬರದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕ ಹಲವಾರು ಅವಕಾಶಗಳು ಮಾನ್ಯ ಸದಸ್ಯರಿಗೂ ಇದೆ, ಸಾರ್ವಜನಿಕರಿಗೂ ಇದೆ. ಅದನ್ನು ಅವ ಲಂಬಿಸಬೇಕಾಗುತ್ತದೆಯೇ ಹೊರತು ಮಸೂದೆ ಮಾಡುವುದೇ ಸರಿಯಲ್ಲ, ಇಂತಹ ಒಂದು ಅಸ್ತ್ರ ವನ್ನು ನಂಪಾದನೆ ಮಾಡಿಕೊಂಡು ಕೆಲವೊಂದು ಭಾಗಗಳಿಗೆ ಅನ್ಯಾಯ ಮಾಡುತ್ತೀರಿ ಅಂತ ಹೇಳಿ ಶಂಕಿಸುವುದು ಅಷ್ಟೊಂದು ಸರಿಯಾದಂತಹ ಮಾತು ಆಗುವಿಕ್ಕಿಲ್ಲ ಎಂದು ಹೇಳಿ ನಾನು ಅಭಿಪ್ರಾಯ ಪಡುತ್ತೇನೆ. ಇಲ್ಲಿ ಇರತಕ್ಕ ಎಷ್ಟಿ ವಿಧಿಗಳನ್ನು ಸಾಮಾನ್ಯವಾಗಿ ನಾನು ಸ್ವಾಗತಿಸುತ್ತೇನೆ.

(ಶ್ರೀ ಕೆ. ಎಚ್. ಶ್ರೀನಿವಾಸ)

ಈಗಾಗಲೇ ಇದನ್ನು ಮಂಡಿಸಿರತಕ್ಕ ಕಾನೂನು ಮಂತ್ರಿಗಳು ಇದರಲ್ಲಿ ಯಾವುದಾದರೂ ಆದಚಣೆ ಬರುವುದು ರೈತರಿಗೆ ತೊಂದರೆಯಾಗುವುದು ಇದ್ದರೆ ಅದನ್ನು ಪರಿಶೀಲಸಲಕ್ಕೂ ಕೂಡ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ರೀತಿ ನೀರಾವರಿ ಅಭಿವೃದ್ಧಿ ಮಾಡಬೇಕೆಂದರೆ ಕಷ್ಟವಾಗಬಹುದು. ಯಾವುದಾವರೂ ಒಂದು ಪ್ರಾಜೆಕ್ಟ್‌ಗಾಗಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ತೆಗೆದುಕೊಂಡಾಗ ಅದಕ್ಕೆ ಬೇಕಾದ ಜಮೀನುಗಳನ್ನು ಮೊದಲು ಹಂಚಿಕೆ ಮಾಡುವುದು ಅಗತ್ಯ. ಇಲ್ಲಿ ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ಆ ಅವಕಾಶವನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ.

ಸೆಕ್ಷನ್ 3 (ಎ) ನಲ್ಲಿ :

"Advance contribution as provided hereunder is paid by the landholders of all lands which are capable of being benefited by the completion of the construction, restoration, expansion or alteration of a work it is not possible for it..... ....."

ಎಂದು ಇದೆ. ಮತ್ತೆ ಇದೇ 3 (ಎ) ಸೆಕ್ಷನ್ (2) ರಲ್ಲಿ ಈ ರೀತಿ ಇದೆ :

"When the landholders of not less than sixty-six per cent of *such lands* express their willingness in writing within the time specified therefor to make such advance contribution....."

ಒಂದು ಪ್ರಾಜೆಕ್ಟ್‌ನ, ನೀರಾವರಿ ಅನುಕೂಲತೆ ಇಷ್ಟು ಭೂಮಿಯವರೆಗೆ ವಿಸ್ತಾರವಾಗುತ್ತದೆ ಎಂದರೆ, ಅಲ್ಲೇ ಭೂಮಿಯ ಹಂಚುವಿಕೆ ವಿಚಾರ ಬರುತ್ತದೆ. ಯೋಜನೆ ಕೆಳಗಡೆ ಬರುವ ಭೂಮಿಗೆ ಎಂದರೆ ಯಾರು ಡಿಸ್‌ಪ್ಯೂಟ್ ಮಾಡುವುದಿಲ್ಲ. ಆದರೆ ಇಲ್ಲಿ ಶೇಕಡಾ 66ರಷ್ಟು ಎಂದು ಹೇಳಿದರೆ ಯಾವ ರೀತಿ ಲೆಕ್ಕ ಹಾಕಬೇಕು ? ಉಳಿಯತಕ್ಕ ಜಮೀನನ್ನು ಯಾವ ಯೋಜನೆಗೆ ಅನ್ವಯಿಸಬೇಕು? ಇಂತಹ ಎಲ್ಲ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಅವಶ್ಯ ಇದೆ. ಇದನ್ನು ಆದಷ್ಟು ಶೀಘ್ರಗತಿಯಿಂದ ಮಾಡಬೇಕು ಎಂದರೆ ಇದಕ್ಕೆ ಬೇಕಾಗುವ ಜಮೀನು ಸರಕಾರದ ವಶದಲ್ಲಿದ್ದರೆ ಆ ಭೂಮಿಯನ್ನು ಹಂಚುವ ವ್ಯವಸ್ಥೆ ಸರಕಾರ ಮಾಡಬೇಕು. ಯಾವ ರೀತಿ ಇದನ್ನು ಹಂಚಬೇಕಾಗುತ್ತದೆ ? ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಾಮರ್ಥ್ಯ ಇರುವಂಥವರಿಗೆ ಬೇಕಾದ ವರಮಾನ ಇರುವವರಿಗೆ ಮಾತ್ರ ಜಮೀನನ್ನು ಹಂಚುವುದಕ್ಕೆ ಸಾಧ್ಯ ಏಲ್ಲ. ಹೀಗೆ ಮಾಡಿ ಒಟ್ಟಿನಲ್ಲಿ ಜನರ ಹಿತಸಾಧನೆ ಮಾಡುವುದಾದರೆ ಸಮಾಜವಾದದ ವ್ಯವಸ್ಥೆಗೆ ಧಕ್ಕೆ ಬರಲು ಸಾಧ್ಯ ಇದೆ. ನನಗೇನೋ ಶಕ್ತಿ ಇದೆ. ನಾನು ಹತ್ತು ಎಕರೆ ಭೂಮಿ ಕೊಂಡು ಕೊಂಡು ಅದಕ್ಕೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಬಹುದು. ಇತರ ಜನರು ಶಕ್ತಿ ಇಲ್ಲದವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹೇಗೆ ಕೊಡುತ್ತಾರೆ ? ಅದರಲ್ಲಿ ಒಂದು ಪ್ರಶ್ನೆ ಬರುತ್ತದೆ. ಸರಕಾರದ ವಶದಲ್ಲೇ ಶೇಕಡಾ ಮೂವತ್ತರಷ್ಟು ಹಿಡುವಳಿ ಜಮೀನು ಇರುತ್ತದೆ. ಈ ಶೇಕಡಾ 30 ರಷ್ಟು ಭೂಮಿಯನ್ನು ವಿತರಣೆ ಮಾಡಬೇಕಾದರೆ, ಅದನ್ನು ಯಾವ ರೀತಿ ಮಾಡಬೇಕು ? ಇದನ್ನು ಶೀಘ್ರಗತಿಯಲ್ಲಿ ಪರಿಶೀಲನೆಮಾಡಿ ವಿತರಣೆ ಮಾಡುವ ಜವಾಬುದಾರಿಯನ್ನು ನಿರ್ವಹಣೆ ಮಾಡದೇ ಹೋದರೆ ಇದು ಸಾಧ್ಯವಾಗುವುದಿಲ್ಲ. ಉದಾಹರಣೆಯಾಗಿ ಹೇಳಬೇಕೆಂದರೆ, ನಮ್ಮ ಭಾಗದಲ್ಲಿರುವ ವರದಾ ನದಿ ಕೆಳಗಡೆ ಇದಕ್ಕೆ ಸಂಬಂಧಪಟ್ಟ ಹಾಗೆ 10—12 ನೀರಾವರಿ ಯೋಜನೆಗಳಿವೆ ಮತ್ತು ಸರಕಾರವೂ ಇದನ್ನು ಪರಿಶೀಲನೆ ಮಾಡುತ್ತಿದೆ. ಇದರಲ್ಲಿ ಮಾವಿನಕೆರೆ ಹೊಳೆ ಎನ್ನುವ ಒಂದು ನೀರಾವರಿ ಯೋಜನೆಯೂ ಇದೆ. ಇದರಿಂದ ಸುಮಾರು 3500 ಎಕರೆಯಷ್ಟು ಪ್ರದೇಶಕ್ಕೆ ನೀರಿನ ಆನರೆ ಸಿಕ್ಕಿ ನೀರಾವರಿಯಾಗುತ್ತದೆ. ಇದರಲ್ಲಿ ಬಹು ಭಾಗ ಸರಕಾರದ ವಶದಲ್ಲಿಯೇ ಇದೆ. ಹೀಗೆ ಇರತಕ್ಕ ಭೂಮಿಯನ್ನು ಹಂಚಬೇಕು. ಇದರ ಹಂಚಿಕೆ ಪೂರ್ತಿಯಾಗಿ ಮಾಡಬೇಕಾದರೆ ಸುಮಾರು ಇನ್ನೂ ಹತ್ತು, ಹದಿನೈದು ವರ್ಷವಾಗುತ್ತದೆ. ಈ ಜಮೀನುಗಳನ್ನು ಯಾರಿಗೆ ಕೊಡಬೇಕು ? ಇಂತಹ ಒಂದು ಪರಿಸ್ಥಿತಿಯನ್ನು ಸರಕಾರದವರು ಗಮನಿಸಬೇಕಾದರೆ ಇದಕ್ಕೆ ಕಾನೂನಿನಲ್ಲಿ ಮೊದಲೇ ಪ್ರೊವೈಡು ಮಾಡಬೇಕು. ಈ ಬಿಲ್ಲಿನಲ್ಲಿರುವಂತೆ ಆದರೆ, ಯಾರಿಗೆ ಜಮೀನನ್ನು ಕೊಂಡುಕೊಳ್ಳುವ ಶಕ್ತಿ ಇದೆಯೋ ಅವರು ಕಾಂಟ್ರಿಬ್ಯೂಷನ್‌ನ್ನು ಅಡ್ವಾನ್ಸ್ ಆಗಿ ಕೊಡಬಹುದು. ಯಾರಿಗೆ ಜಮೀನಿನ ಅವಶ್ಯಕತೆ ಇದೆಯೋ ಮತ್ತು ಭೂಮಿ ಸಿಗುತ್ತೆ ಎಂದು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೋ ಅಂತಹ ಜನರು ವಂಚಿತರಾಗಬಹುದು.

ಈ ಒಂದು ವಿಧೇಯಕವನ್ನು ತರುವುದರ ಹಾಂದಿಯಲ್ಲ ಜಮೀನುಗಳನ್ನು ಬ್ಯಾಂಕಿಗೆ ಒತ್ತೆ ಹಾಕಬೇಕು. ಸರಕಾರವೇ ಬ್ಯಾಂಕಿನವರಿಗೆ ಗ್ಯಾರಂಟಿಯಾಗಿ ನಿಲ್ಲಬೇಕಾಗುತ್ತದೆ. ಈಗಲೂ ಕೂಡ ಆದೇ ರೀತಿ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ವಿಧೇಯಕದಿಂದ ಬ್ಯಾಂಕಿನವರಿಗೆ ಅನುಕೂಲವಾಗುತ್ತದೆಯೇ ವಿನಾ ಜನರಿಗೆ ಇನ್ನೇನೂ ಹೆಚ್ಚಿಗೆ ಅನುಕೂಲ ಮಾಡಲು ಸಾಧ್ಯವಿಲ್ಲ. ಆದುದರಿಂದ ಯಾವ ಯಾವ ಬ್ಯಾಂಕುಗಳವರು ಇಂತಹ ಪರಿಸ್ಥಿತಿಯಲ್ಲಿ ಹಣಕೊಡುವುದಕ್ಕೆ ಮುಂದೆ ಬರುತ್ತಾರೆ ಎನ್ನುವುದನ್ನು ನಿಷ್ಕರ್ಷೆಮಾಡದೇ ಹೋದರೆ ಈ ವಿಧೇಯಕವನ್ನು ಜಾರಿಗೆ ತಂದರೂ ಇದರಿಂದೇನೂ ಪ್ರಯೋಜನವಾಗುವುದಿಲ್ಲ ಎನ್ನುವುದಕ್ಕಾಗಿ ಇವೆರಡು ಅಂಶಗಳನ್ನು ನಾನೂ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಎಲ್ಲಿ ನೀರಾವರಿ ಯೋಜನೆ ಆಗಬೇಕೆಂದು ತಂದು ಮಾಡುತ್ತಿದ್ದಾರೋ ಅದರ ಕೆಳಗಡೆ ಇರುವ ಜಮೀನುಗಳು ಮೊದಲು ವಿತರಣೆಯಾಗಬೇಕು ಮತ್ತು ಹಾಗೆ ವಿತರಣೆ ಮಾಡಲು ಸೂಕ್ತವಾದ ಒಂದು ಧೋರಣೆ ರೂಪಿತವಾಬೇಕು. ಅದಕ್ಕೆ ಈ ಕಾಯಿದೆಯಲ್ಲಿ ಸಾಕಷ್ಟು ಅನುಕೂಲ ಮಾಡಿಕೊಡಬೇಕು. ಈಗಿರುವಂತೆ ಕಾಯಿದೆ ತಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಭೂಮಿ ಅಧಾರದ ಮೇಲೆ ಸರಿಯಾಗಿ ಹಂಚುವ ವ್ಯವಸ್ಥೆ ಮಾಡಿದರೆ ಆಗ ಈ ವಿಧೇಯಕದ ಉದ್ದೇಶ ನೆರವೇರುತ್ತದೆ ಮತ್ತು ಜನಕ್ಕೂ ಅನುಕೂಲವಾಗುತ್ತದೆ ಎಂದು ಸರಕಾರದ ಗಮನಕ್ಕೆ ತಂದು ಈ ಮಸೂದೆಯನ್ನು ನಾನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರೂ ಸ್ವಾಗತಿಸಿದ್ದಾರೆ ಮತ್ತು ಶ್ರೀ ಶ್ರೀನಿವಾಸರವರೂ ಇದನ್ನು ಸ್ವಾಗತ ಮಾಡಿದ್ದಾರೆ. ನಾವು ಈ ತಿದ್ದುಪಡಿ ಮಸೂದೆಯನ್ನು ಕಟುವಾಗಿ ವಿರೋಧಿಸಬೇಕಾಗಿದೆ. ಇಡೀ ಮಸೂದೆಯ ಬಗ್ಗೆ ಮಾನ್ಯ ಸದಸ್ಯರು ಬಹಳ ದೂರ ದೃಷ್ಟಿ ಇಟ್ಟು ಅರೋಚನೆ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಲು ಅಪೇಕ್ಷೆ ಮಾಡುತ್ತೇನೆ. ಇಂತಹ ಮಸೂದೆ ತರಬೇಕಾದರೆ ಎರಡು ಕಾರಣಗಳು ಇರಬಹುದು, ಒಂದು ಸರಕಾರ ದಿವಾಳಿ ಎದ್ದಿದೆ ಎನ್ನುವುದರ ಅರಿವಾದಾಗ ಈ ಮಸೂದೆಗೆ ಒಪ್ಪಿಗೆ ಕೊಡಬಹುದು. ಇಲ್ಲ ಸರಕಾರ ದಿವಾಳಿ ಎದ್ದಿಲ್ಲ ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದರೆ ನಾವು ಇದನ್ನು ವಿರೋಧಮಾಡಬೇಕಾಗುತ್ತದೆ. ಅವರಿಗೆ ಹೇಗಿದ್ದರೂ ವೋಟುಗಳು ಬರುತ್ತವೆ ಮತ್ತು ಮಸೂದೆ ಪಾಸಾಗುತ್ತದೆ ಎನ್ನುವ ಒಂದು ಉದ್ದೇಶ ಇದ್ದರೆ ಇಂತಹ ಮಸೂದೆ ಮಂಡಿಸಬಹುದು. ಆದರೆ ಈ ಸಭೆಯ ಸದಸ್ಯರು ತಪ್ಪು ದಾರಿಯನ್ನು ಎಂದಿಗೂ ಹಿಡಿಯುವುದಿಲ್ಲ ಎನ್ನುವ ನಂಬಿಕೆಯನ್ನು ವ್ಯಕ್ತ ಮಾಡುತ್ತೇನೆ. ಈಗಾಗಲೇ ಕಾನೂನು ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಯವರು ಅಪ್ಪಣೆ ಕೊಡಿಸಿದರು. ಈ ಮಸೂದೆ ಮಂಡಿಸಿದ ಕಾಲದಲ್ಲಿ ಕೃಷ್ಣರಾಜನಗರದಿಂದ ಯಾರೋ ಕೆಲವರು ಬಂದು ನಭಾ ನಾಯಕರಾದ ಮುಖ್ಯ ಮಂತ್ರಿಗಳನ್ನು ಕಂಡು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಅವರು ತಯಾರಾಗಿದ್ದಾರೆ ಎಂದು ಹೇಳಿದರು ಮತ್ತು ರಾಜ್ಯದ ಜನರ ಮನೋಭಾವನೆಯನ್ನು ಪ್ರತಿಬಿಂಬಿಸುವಂತಹ ಜನ ಇಲ್ಲ ಹೇಳುವುದು ತಪ್ಪು ಎನ್ನುವ ಒಂದು ಶಂಕೆಯನ್ನು ಉತ್ಪನ್ನ ಮಾಡಿದರು. ಸರಕಾರಕ್ಕೆ ಬೇಕಾದಾಗ ಎರಡು ಜನ ಹೇಳಿದ ಹುಲ್ಲು ಕಡ್ಡಿಯೇ ಬೆಟ್ಟದ ಹಾಗೆ ಕಾಣುತ್ತದೆ. ಆದರೆ ಇಡೀ ದೇಶದ ಜನತೆ ಹೇಳಿರೂ ಅದು ಹುಲ್ಲು ಕಡ್ಡಿಗೆ ಸಮಾನ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಆದರೆ ಆ ಭಾಗದ ಜನತೆಯ ಅಭಿಪ್ರಾಯ ಇವರು ಹೇಳಿದ್ದಾರೆಂದು ಹೇಳಿದರೆ ಜನತೆಗೆ ಸಿಟ್ಟುಬರುತ್ತದೆ. ಈ ವಿಚಾರವನ್ನು ಒಬ್ಬ ಶಾಸನಸಭಾನದಸ್ಯನಾದ ನನಗೆ ಬಂದು ಹೇಳಲಲ್ಲ. ಯಾರೋ ಅಧಿಕಾರದ ಪತಿಯಲ್ಲಿ ಕೊಂಚ ಬಲವನ್ನು ಪಡೆದಂಥ ವ್ಯಕ್ತಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಈ ರೀತಿ ಮಾಡಿಸಿದ್ದಾರೆಂದು ಜನ ಮಾತನಾಡಿಕೊಳ್ಳುತ್ತಾರೆ. ಅಧಿಕಾರ ಅವರ ಕೈಲಿ ಇದೆ, ರಾಜಕೀಯ ಕಾರಣಗಳಿಗಾಗಿ ಅವರು ಆ ರೀತಿ ಮಾಡುತ್ತಾ ಇದ್ದಾರೆ. ರಾಜಕೀಯದ ಒತ್ತಾಯದಮೇರೆ ಈ ಬಿಲ್ಲನ್ನು ತಂದಿದ್ದೀರೆಂದು ನನಗೆ ಅರ್ಥವಾಗುತ್ತದೆ. ಬೆಟರ್‌ಮೆಂಟ್ ಲೆವಿ 500 ರೂಪಾಯಿಗಳೆಂದು ತೀರ್ಮಾನ ಮಾಡಿದರೆ, 4 ಇನ್‌ಸ್ಟಾರ್‌ಮೆಂಟ್ಸ್ ಕೊಡಬೇಕೆಂದು ತಿದ್ದುಪಡಿಯನ್ನು ತಂದಿದ್ದಾರೆ. 4 ಇನ್‌ಸ್ಟಾರ್‌ಮೆಂಟ್ ಅಂದರೆ 125 ರೂಪಾಯಿಗಳು ಆಯಿತು. ಇನ್ನು ಇದರಲ್ಲಿ 66 ಸಾವಿರ ಎಕರೆ ಪ್ರದೇಶಕ್ಕೆ ಅಂದರೆ ಒಂದು ಸಾವಿರ ಎಕರೆಗೆ ಒಂದು ಇನ್‌ಸ್ಟಾರ್‌ಮೆಂಟಿಗೆ 125 ರೂಪಾಯಿಗಳಂತೆ ಆದರೆ 22ಲಕ್ಷ 50ಸಾವಿರ ರೂಪಾಯಿಗಳು ಆಯಿತು. ಇದರಲ್ಲಿ 3/5 ಅಂದರೆ ರೈತರಿಗೆ 13ಲಕ್ಷ 60ಸಾವಿರ ರೂಪಾಯಿಗಳು ಬಂದರೆ ಅವರು ಆಯೋಜನೆಯನ್ನು ಪ್ರಾರಂಭ ಮಾಡಬಹುದು. 12ಕೋಟಿ ಯೋಜನೆಗೆ 13ಲಕ್ಷ 50ಸಾವಿರ ರೂಪಾಯಿಗಳು ರೈತರಿಂದ ಬಾರದೆ ಈ ಯೋಜನೆ ನಿಂತಿದೆ. ಬೆಟ್ಟ ಆಗೆಯಬೇಕು, ಆಗ ಇಲಿ ಸಿಗುತ್ತದೆ. 12ಕೋಟಿ ಯೋಜನೆಯನ್ನು ಪ್ರಾರಂಭಮಾಡುವುದಕ್ಕೆ ರೈತರಿಂದ 13ಲಕ್ಷ 50ಸಾವಿರ ರೂಪಾಯಿ

(ಶ್ರೀ ಎಚ್. ಎನ್. ನಂಜೇಗೌಡ)

ಗಳು ಬರಬೇಕು. ಅದಕ್ಕಾಗಿ ಇಲಯನ್ನು ಹಿಡಿಯಬೇಕಾದರೆ ಬೆಟ್ಟ ಆಗೆಯಬೇಕಾಗಿದೆ. ಏನೋ ಒಂದುಗಾದೆ ಹೇಳುತ್ತಾರೆ, ತೋಳ ಬಂತು, ತೋಳ ಬಂತು ಎಂದು. ಇದು ಹಾಗಾಗಿದೆ. ಇವರು ಒಂದು ನೋಟಿಫಿಕೇಷನ್, ಎಸ್ಟಿಮೇಟ್, ಪ್ಲಾನ್ ಹಾಕುತ್ತಾರೆ. ಆ ಪ್ಲಾನ್, ಎಸ್ಟಿಮೇಟ್ ಹಾಕುವಾಗ, ಹಾರಂಗಿಗೋಸ್ಕರ ಮೂರು ಸಾರಿ ಕಲ್ಲು ನೆಟ್ಟಿದ್ದಾರೆ. ಹೇಮಾವತಿ ಆಗಬೇಕಾದರೆ ಎರಡು ಸಾರಿ ಕಲ್ಲು ನೆಟ್ಟಿದ್ದಾರೆ. ಇದನ್ನು ವಿಶ್ವೇಶ್ವರಯ್ಯನವರ ಕಾಲದಲ್ಲಿ 2 ಸಾರಿ ಸರ್ವೆ ಮಾಡಿದ್ದರು. ಈಗ ಇವರೇ ಅದಕ್ಕೆ ಅಥಾರಿಟಿಯಾಗಿ ಹೇಳಿದ್ದಾರೆ. ಇವರಿಗೆ ಯಾವ ಹಕ್ಕು ಇದೆಯೆಂದು ನಾನು ಕೇಳುತ್ತೇನೆ. ಇವತ್ತು ಕಪಿನಿ ಪ್ರಾಜೆಕ್ಟ್ ಸ್ಥಳಾಂತರ ವಾಯಿತು. ಅಮೇಲೆ ಪುನಃ ಬದಲಾಯಿಸಿದರು. ಹೀಗೆ ದಿನಂಪ್ರತಿ ಬದಲಾವಣೆಗಳಾಗುತ್ತಿವೆ. ಹೀಗೆ ಹುಚ್ಚು ಸರ್ಕಾರದ ಮುಂದೆ ಯಾರಿಗೆ ನಂಬಿಕೆ ಇದೆ! ಇವರು ಮಾಡುವಂಥ ಹುಚ್ಚು ದರ್ಬಾರ್ ನಿಂದ ಏನೇನೋ ನೋಟಿಫಿಕೇಷನ್ ಮಾಡುತ್ತಾರೆ ಕಾನೂನು ಮಂತ್ರಿಗಳಿಗಾದರೂ ರೈತರ ಸಂಪರ್ಕ ಇದೆ. ಅವರು 13ಲಕ್ಷ 50ಸಾವಿರ ರೂಪಾಯಿಗಳಿಂಥ ಇಲಯನ್ನು ಹಿಡಿಯ ಬೇಕಾದರೆ ಬೆಟ್ಟ ಆಗೆಯಬೇಕು. ಈಗ ಪ್ರತಿಯೊಂದು ಮನೆಯಲ್ಲಿಯೂ ಕುರುಕ್ಷೇತ್ರವಾಗಿದೆ. ಅವರಿಗೆ ಕಮಿಟ್‌ಮೆಂಟ್, ಏನೇನೋ ಇರುತ್ತದೆ. ಪ್ರಾಪರ್ಟಿ ಟೈಟರ್ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ಟೈಟರ್ ಒಬ್ಬರಿಗೇ ಇರುವುದಿಲ್ಲ. ಎಲ್ಲರೂ ಒಪ್ಪಬೇಕಾಗುತ್ತದೆ. ಮೊದಲನೆಯದಾಗಿ ಯಾರೂ ಇದಕ್ಕೆ ಒಪ್ಪುವುದಿಲ್ಲ. ಯಾತಕ್ಕೆಂದರೆ ಅವನಿಗೆ ಮಕ್ಕಳ ಮದುವೆಗೆ ದುಡ್ಡು ಸಿಗುತ್ತದೋ ಇಲ್ಲವೋ ಎಂಬ ಭಯ ಇರುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮದುವೆ ಮಾಡಿಸುವ ಪ್ರಶ್ನೆಯಲ್ಲ. ಈಗಾಗಲೇ ರೈತರ ಜಮೀನು ಅನೇಕ ಹಂತಗಳಲ್ಲಿ ಸಾಲಸೋಲಕ್ಕೆ ಸಿಕ್ಕಿ ಸಾಲಸೋಲ ಅತಿಯಾಗಿ ಅವರು ಬದುಕುವುದೇ ಕಷ್ಟವಾಗಿದೆ. ಈಗ ಅವರಿಗೆ ಕೇವಲ ಸೇಕಡ 1 ಅಥವಾ 2 ರೂಪಾಯಿಗಳಷ್ಟು ಕೂಲಮಾತ್ರ ಸಿಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಶ್ರೀ ದೊಡ್ಡ ಬೋರೇಗೌಡರು ಹೇಳಿದ ಹಾಗೆ ಈಗಾಗಲೇ ಅವರು ಬಹಳ ಇಕ್ಕಟ್ಟಿಗೆ ಸಿಕ್ಕಿದ್ದಾರೆ. ಸರ್ಕಾರ 100ಕ್ಕೆ 100ರಷ್ಟು ಇದರಲ್ಲಿ ಪ್ರತಿಫಲವಿದೆಯೆಂಬ ಭಾವನೆಯನ್ನು ಅವರಲ್ಲಿ ಉಂಟುಮಾಡಿದರೆ ಆಗ ಇವರ ಕಾನೂನು ಜಾರಿಯಾಗುತ್ತದೆಂದು ನಂಬಿಕೆ ಬರುತ್ತದೆ. ಆ ಪ್ರಶ್ನೆ ಬೇರೆ. ಇಲ್ಲದಿದ್ದರೆ ಸಾಮಾನ್ಯ ಜನರಿಗೆರ್ಥಾ ಒಂದು ರೀತಿ ಅಪನಂಬಿಕೆ ಸರ್ಕಾರದ ಮೇಲೆ ಬರುತ್ತದೆ. ಯಾವುದೋ ಒಂದು ಕಾಮಗಾರಿಯನ್ನು ಮಾಡುತ್ತೇವೆಂದು ಭರವಸೆ ಕೊಟ್ಟರು. ಅದು ಇನ್ನೂ ಆಗಲೇ ಇಲ್ಲ. ಎನ್ನುವ ಒಂದು ಅಪನಂಬಿಕೆಯ ತಳಹದಿಯ ಮೇಲೆ ಈಗ ರೈತ ನಿಂತಿದ್ದಾನೆ. ಪ್ರಾಕ್ಟಿಕಲ್ಲಾಗಿ ರಚನಾತ್ಮಕವಾಗಿ ಏನೇನು ಸಾಧಿಸಿದ್ದೇವೆ, ಇನ್ನೂ ಏನೇನು ಸಾಧಿಸಬೇಕು, ಏನೇನು ಸಾಧಿಸಿಲ್ಲವೆಂಬುದನ್ನು ಮುಂಚೆಯೇ ಎಮರ್ಜಿಸಿ ನೋಡಿದರೆ, ಆಗ ರೈತನ ಇತಿಮಿತಿ ಗೊತ್ತಾಗುತ್ತದೆ. ಅದನ್ನೂ ಕೂಡ ಸರ್ಕಾರದವರು ಅನುಸರಿಸಬೇಕಾಗುತ್ತದೆ. ಅದ್ದರಿಂದ ರೈತರು ಅಡ್ವಾನ್ಸಾಗಿ ಬೆಟರ್‌ಮೆಂಟ್ ರೇಪಿ ಕೊಡ ಬೇಕೆಂದರೆ ಬಹಳ ಕಷ್ಟ. ಎಷ್ಟು ಜನ ಬಂದು ಬೆಟ್ಟ ಆಗೆದರೂ ಇಲಯನ್ನು ಹಿಡಿಯಬೇಕಾದರೆ ಸಾಧ್ಯವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಷೋಕೀದಾರ್ ಮನುಷ್ಯನ ಹಾಗೆ ಸರ್ಕಾರ ದವರು ಖರ್ಚುಮಾಡ್ಕವನ್ನು ಮಾಡುತ್ತಿದ್ದಾರೆ. ವರ್ಷಕ್ಕೆ ಎಂಟರ್‌ಟೇನ್‌ಮೆಂಟ್ ಚಾರ್ಜಸ್ 8 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವ ರಾಜ್ಯ 28—30 ಮಂತ್ರಿಗಳನ್ನು ಇಟ್ಟು ಕೊಳ್ಳುವು ದಕ್ಕೆ ಏನು ಕಾರಣ? ಜನತೆಯ ಪ್ರತಿನಿಧಿಗಳ ಬಾಯಿಗೆ ಬೀಗ ಹಾಕಬೇಕೆಂದು ಈ ರೀತಿಯಾಗಿ ಸರ್ಕಾರ ಮಾಡುತ್ತಿದೆ. ಶ್ರೀಮತಿ ನಾಗರತ್ನಮ್ಮನವರು ಮತ್ತು ನಂಜೇಗೌಡರೂ ಏನಾದರೂ ಚುನಾವಣೆಯಾಗಿ ಬರಬೇಕೆಂದರೆ, ಇನ್ನೊಂದು ಸಾರಿ ಅವರು ಗೆದ್ದು ಬರಬಾರದು ಎನ್ನುವ ರೀತಿ ಸರ್ಕಾರದವರು ಮಾಡುತ್ತಿದ್ದಾರೆ.

Mr. SPEAKER.—Hon. Member may conclude early.

Sri H. M. CHANNABASAPPA.—I have a submission, Sir. So far as Bills are concerned, I am afraid the Chair cannot put severe restriction on time. You have got to be a little lenient in these matters because these are matters which cannot be disposed of in a few minutes. Merely because there is limited time, are we to shut our mouths and

simply vote for the Bill ! The entire implication of the Bill will have to be made out and particularly those who oppose the Bill must be given full opportunity to expose all the loopholes in the Bill.

ಶ್ರೀ ಎಚ್. ಎನ್ ನಂಜೇಗೌಡ.—ನಾನು ಪ್ರಾಮುಖ್ಯವಾದ ಅಂಶವನ್ನು ಹೇಳುತ್ತೇನೆ. ಬೆಟ್ಟ ಅಗೆದು ಇಲಿಯನ್ನು ಹಿಡಿಯುತಕ್ಕ ಕಾರ್ಯವೆಂದು ಏಕೆ ಹೇಳುತ್ತಿದ್ದೇನೆಂದರೆ,

(*a*) to commence and complete the construction, restoration, expansion or alteration of any work which is capable of irrigating more than one hundred acres of land; or

(*b*) to proceed towards the completion with sufficient expedition in respect of the uncompleted part or stage of the work, the construction, restoration, expanstion or alteration of which the Government has already commenced and which is capable of irrigating more than one hundred acres of and.....

ಎಂದು ಹೇಳುತ್ತಿದ್ದಾರೆ. ಅಂದರೆ, ಹಾರಂಗಿ ಪ್ರಾರಂಭ ಮಾಡುವುದಕ್ಕಾಗಲು, ಕಂಬದಕಡ ಪ್ರಾರಂಭ ಮಾಡುವುದಕ್ಕಾಗಲು, ಅಪ್ಪರ್ ಕೃಷ್ಣ ಪ್ರಾರಂಭ ಮಾಡುವುದಕ್ಕಾಗಲು, ಅಥವಾ ಕಬಿನಿ ಮುಂದುವರಿಸುವುದಕ್ಕಾಗಲು, ಹೇಮಾವತಿ ಮುಂದುವರಿಸುವುದಕ್ಕಾಗಲೆ, ಘಟಪ್ರಭಾ ಮಲಪ್ರಭಾ ಮುಂದುವರಿಸುವುದಕ್ಕಾಗಲು ಎಲ್ಲಾ ಸರ್ಕಾರ ಇದರ ಪ್ರಕಾರ ಮಾಡಬೇಕಾಗುತ್ತದೆ. ಸಣ್ಣ ಸಣ್ಣ ಪ್ರೊಜೆಕ್ಟ್ ಮಾಡುವ ಉದ್ದೇಶ ಇಟ್ಟುಕೊಂಡಿದ್ದರೆ ಆಗುತ್ತಿತ್ತು. ಮೊನ್ನೆ ಮಂತ್ರಿಯವರು ಹೇಳಿದರೂ ದೊಡ್ಡದಕ್ಕೆ ಎಂದು. ಸರ್ಕಾರದ ಪತಿಯಿಂದ ಬಂದಿರತಕ್ಕ ಕಾರಣಗಳನ್ನು ನೆನೆದುಕೊಂಡಾಗ ಇದು ಒಂದು ನೆಪ ಎಂಬುದರಲ್ಲಿ ಸಂಶಯವಿಲ್ಲವೆಂಬುದನ್ನು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೆಪವೆಂದು ಹೇಳುತ್ತಿದ್ದೀರಿ, ಅಸ್ತ್ರ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅಸ್ತ್ರವೂ ಆಗುತ್ತದೆ. ನಿಮ್ಮ ಸರ್ಕಾರದಲ್ಲಿ ಹಗ್ಗವೆ ಹಾವಾಗುತ್ತದೆ. ಆ ಮೇಲೆ 3A(2) ಹೀಗೆ ಹೇಳಿದೆ :

"(2) The draft scheme referred to in sub section (1) shall specify the lands under the irrigable command of the work which in the opinion of the Government are capable of being benefited by the completion of such work, the approximate amount of advance contribution payable per acre and such other particulars as may be prescribed and state that when the landholders of not less than sixty per cent of such lands express their willingness in writing within the time specified therefor to make such advance contribution towards such work either in one lump sum or in four equal annual instalments etc....."

ಎಂದು. 13 ಲಕ್ಷದ 50 ಸಾವಿರ ಕೊಟ್ಟರು ಎಂದು ಹೇಳಿದರೆ ಅದಕ್ಕೆ ಈ ಸರ್ಕಾರದಿಂದ ನೋಟಿಫಿಕೇಶನ್ ಆಗಬೇಕು, ಅದು ಅಪ್ರೂವ್ ಆಗಬೇಕು, ಆ ಮೇಲೆ ಅಬ್ಜೆಕ್ಷನ್ಸ್ ಕಾಲ್ ಫಾರ್ ಮಾಡಬೇಕು. ಅದೆಲ್ಲಾ ಆಗಬೇಕಾದರೆ, 6 ತಿಂಗಳು, ಒಂದು ವರ್ಷ ಹೋಗುತ್ತದೆ. ಆ ಮೇಲೆ ಹಣ ವಸೂಲುಮಾಡಿ, ನೀವು ಕನ್ವಿದರ್‌ಮಾಡಿ 12 ಕೋಟಿಯ ಪ್ರೊಜೆಕ್ಟನ್ನು ಪ್ರಾರಂಭ ಮಾಡತಕ್ಕಂತಹ ಒಂದು ಘನವಾದ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆ ಮೇಲೆ 3 (ಎ) ಸಬ್ ಕ್ಲಾಸ್ 5 ರಲ್ಲಿ :

"(5) Whether the landholders of not less than sixty-six percent of the land specified in the scheme have not expressed their willingness to pay the advance contribution or where the amount contribution so paid is less than three fifths of the first

(ಶ್ರೀ ಎಚ್. ಎನ್. ನಂಜೇಗೌಡ)

instalment of the advance contribution, the Government shall not be bound to commence the execution of the work or to proceed towards the completion of the incompleted part or stage of the work as the case may be, etc....."

ಎಂದು ಹೇಳಿದ್ದಾರೆ. 12 ಕೋಟಿಯ ಹಾರಂಗಿ ಕಟ್ಟಬೇಕಾದರೆ, ಅವರು ಕೊಡುವುದಿಲ್ಲವೆಂದು ಹೇಳಿದರೆ ಗೌರ್ನಮೆಂಟ್ ಶರ್ ನಾಟ್ ಬಿ ಬೌಂಡ್ ಟು ಕಮೆನ್ಸ್ ದಿ ಎಗ್ಸಿಕ್ಯೂಶನ್ ಎಂದು ಹೇಳುತ್ತಾರೆ. ಅಂದರೆ 13 ಲಕ್ಷ 50 ಸಾವಿರ ಕೊಡದೆ ಹೋದರೆ, ದೆ ಆರ್ ನಾಟ್ ಬೌಂಡು ಟು ಕಮೆನ್ಸ್ ಹಾರಂಗಿ. ದೆ ಆರ್ ನಾಟ್ ಟು ಕಂಪ್ಲೀಟ್ ಹೇಗೂವತಿ. 76 ಕೋಟಿಯ ಅಪರ್ ಕೃಷ್ಣಾನನ್ನು ನಿಲ್ಲಿಸುವುದಕ್ಕೆ ಅವಕಾಶ ಇದೆ, ಘಟಪ್ರಭಾ, ಮಲಪ್ರಭಾ ಎರ್ಲಾ ಕೈಬಿಡುವುದಕ್ಕೆ ಹಕ್ಕು ಇದೆ. ನಿಮ್ಮ ಲೆಕ್ಕದ ಪ್ರಕಾರ 13 ಲಕ್ಷ 50 ಸಾವಿರದಲ್ಲಿ ಕಬಿನಿ ಪ್ರಾಜೆಕ್ಟ್ ಆಗುವುದಿಲ್ಲ.

ಇದು ಯಾವ ರೀತಿ ಇದೆಯೆಂದರೆ ಬೆಟ್ಟ ಅಗೆದು ಇಲಿ ದೊರಕಿಸಿಕೊಳ್ಳುವ ನೀತಿಯಂತಾಗಿದೆ. ನಿಮ್ಮ ಲೆಕ್ಕದ ಪ್ರಕಾರ 13 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಡದೇ ಹೋದರೆ ಯಾವ ಕಾಲದಲ್ಲಿ ಯಾವ ಅಣೆಕಟ್ಟೆ ಕಟ್ಟುವುದನ್ನು ನಿಲ್ಲಿಸಿದ್ದೀರಿ ಎಂಬುದನ್ನು ಪ್ರಾಮಾಣಿಕವಾಗಿ ಉತ್ತರ ಹೇಳಬೇಕು. ಯಾವುದೋ ಒಂದು ನೆಪ ಮಾಡಿಕೊಂಡು ನೀವು ಈ ರೀತಿ ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಈಗ ಯಾವುದೇ ಒಂದು ಪ್ರಾಜೆಕ್ಟ್ ಕಟ್ಟುವಾಗ ಈ ಕಾನೂನು ಪ್ರಕಾರ ಶೇಕಡಾ 60 ಜನ ತಮ್ಮ ಒಪ್ಪಿಗೆಯನ್ನು ಕೊಟ್ಟು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಇದೆ. ಈ ರೀತಿ ಕಾನೂನು ಇರುವಾಗ ಯಾವುದಾದರೂ ಒಂದು ಪ್ರಾಜೆಕ್ಟ್ ಕಟ್ಟತಕ್ಕ ಸಂದರ್ಭದಲ್ಲಿ ಕೆಲವರು ಅದಕ್ಕೆ ಒಪ್ಪಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಂದು ಕೆಲವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬಾರದೆ ಇದ್ದರೆ ಅಂಥಾ ಸಂದರ್ಭದಲ್ಲಿ ಸರ್ಕಾರದವರು ಆ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಕಾನೂನು ಪ್ರಕಾರ ಎಷ್ಟು ಜನಗಳು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಂದೆ ಬರಬೇಕೋ ಅಷ್ಟು ಜನ ಮುಂದೆ ಬಂದಿಲ್ಲ ಆದ್ದರಿಂದ ಅದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಏತಕ್ಕೆಂದರೆ ಈಗಿನ ಮುಖ್ಯಮಂತ್ರಿಗಳ ನಾಯಕತ್ವವನ್ನು ಜನ ಭಾರಿ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಇವರು ಭಾರಿ ಮುತ್ಸದ್ದಿತನದಿಂದ ನಡೆದುಕೊಳ್ಳುತ್ತಾರೆ ಎಂದು ನಾವು ತಿಳಿದುಕೊಂಡಿಲ್ಲ. ಅವರು ರಾಜಕೀಯವಾಗಿ ನಡೆದುಕೊಳ್ಳುತ್ತಾರೆಂದು ನಮಗೆ ಅರ್ಥವಾಗಿದೆ. ಇವೊತ್ತು ಇವರು ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದಾರೆಯೇ ಎಂದು ನಾವು ಕೇಳಬೇಕಾಗಿದೆ. ಈಗ ಸರ್ಕಾರದವರು ಒದಗಿಸಿಕೊಟ್ಟಿರತಕ್ಕ ನೀರಾವರಿ ಪ್ರಯೋಜನವನ್ನು ತುಂಗಭದ್ರಾ ಕೆನಾಲನ ಕೆಳಗಡೆ ಇರತಕ್ಕ ಕೆಲವು ರೈತರು ಪಡೆದುಕೊಂಡು 6-7 ಬೆಳೆಗಳನ್ನು ಬೆಳೆದಿದ್ದಾರೆ. ಅವರು ಬೆಟರ್‌ಮೆಂಟ್ ಲೆವಿ ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಇದೇ ರೀತಿ ನಮ್ಮ ರಾಜ್ಯದಲ್ಲಿ ಕೆಲವರು ಹೇಳಿದ ಹಾಗೆ ನುಮಾರು 12 ಕೋಟಿ ರೂಪಾಯಿಗಳು ಬೆಟರ್‌ಮೆಂಟ್ ಲೆವಿ ಬಾಕಿ ಇದೆಯೆಂದು ಗೊತ್ತಾಗಿದೆ. ಸರ್ಕಾರದವರು ಒದಗಿಸಿಕೊಟ್ಟ ನೀರಾವರಿ ಸೌಲಭ್ಯವನ್ನು ಉಪಯೋಗಿಸಿಕೊಂಡು 6-7 ಬೆಳೆಗಳನ್ನು ಬೆಳೆದು ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ಅಂಬಾಜಿದರ್ ಕಾರಿನಲ್ಲಿ ತಿರುಗಾಡತಕ್ಕ ಜನಗಳನ್ನು ಬೆಟರ್‌ಮೆಂಟ್ ಲೆವಿಯನ್ನು ಕೇಳುವವರೇ ಇಲ್ಲ. ಈಗಾಗಲೇ ಇರತಕ್ಕಂಥ ಕಾನೂನು ಪ್ರಕಾರ ಬಾಕಿ ಕೊಡಬೇಕಾಗಿರತಕ್ಕವರಿಂದ ಹಣವನ್ನು ವಸೂಲು ಮಾಡುವುದಕ್ಕೆ ನಮಗೆ ಶಕ್ತಿ ಇಲ್ಲ. ಈಗ ಮತ್ತೊಂದು ಕಾನೂನನ್ನು ತಂದು ಗ್ರಾಮಾಂತರ ಪ್ರದೇಶದಲ್ಲಿ ಹರುಕು ಬಟ್ಟೆಯನ್ನು ಹಾಕಿಕೊಂಡು ಮೈ ಕೈ ತೊಳೆಯಲಿಕ್ಕೆ ಬಾರದ ಜನಗಳಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡಿ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ ಎಂದು ಹೊರಟಿದ್ದೀರಿ. ಇದು ಸರಿಯೇ? ಇಂಥಹ ಒಂದು ಕಾನೂನನ್ನು ತರುವುದರಲ್ಲಿ ನ್ಯಾಯ ನೀತಿ ಧರ್ಮ ಏನಾದರೂ ಇದೆಯೇ ಎಂದು ನಾನು ಕೇಳಬೇಕಾಗಿದೆ. ನೀರಾವರಿ ಬೆಟರ್‌ಮೆಂಟ್ ತೆರಿಗೆ 12 ಕೋಟಿ ರೂಪಾಯಿಗಳು ಬಾಕಿ ಎಂತಿರುವುದನ್ನು ಗಮನದಲ್ಲಿಟ್ಟುಕೊಂಡು ಫೈನಾನ್ಸ್ ಕಮಿಷನ್ನಿನವರು 18 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಕಡಿಮೆ ಕೊಟ್ಟಿದ್ದಾರೆ ಎಂದು ನಮಗೆ ಖಚಿತವಾಗಿ ತಿಳಿದುಬಂದಿದೆ. ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು. ಯಾವ ಉದ್ದೇಶಕ್ಕಾಗಿ ಈ ಬಿಲ್ಲನ್ನು ನೀವು ತಂದಿದ್ದೀರಿ. ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಈ ಮಸೂದೆಯನ್ನೇ ನಾದರೂ ತಂದಿದ್ದೀರಾ? ಇದಕ್ಕೆ ಕಾನೂನು ಮಂತ್ರಿಗಳು ಉತ್ತರ ಕೊಡಬೇಕು. ನೀರಾವರಿ ಬೆಟರ್‌ಮೆಂಟ್ ಲೆವಿ ಬಾಕಿಗೆ ಸಂಬಂಧ ಪಟ್ಟಂತೆ 12 ಕೋಟಿ ರೂಪಾಯಿಗಳು ಬರುತ್ತದೆ ಎಂದೇ

ನಾದರೂ ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ 18 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದಾರೆಯೇ ಹೇಗೆ ಎಂಬುದನ್ನು ಈ ಮನಸೂದೆಯು ಪಾಸು ಆಗುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳು ಹೇಳಬೇಕು ಎಂದು ನಾನು ಅಗ್ರಹಪೂರ್ವಕವಾಗಿ ಕೇಳುತ್ತೇನೆ. ಇವೊತ್ತು ಈ ದೇಶದಲ್ಲಿ ಸಾಮಾನ್ಯ ರೈತ ಏನಿದ್ದಾರೆ ಅವನಿಗೆ ಈ ಸರ್ಕಾರ ಮಾಡತಕ್ಕಂಥ ಕಾನೂನಿಂದ ಬಹಳ ಕಷ್ಟವಾಗುತ್ತಿದೆ. ಇದರಿಂದ ನಾಳೆ ಒಂದು ಸಾಧ್ಯತೆ ಇದೆ. ಅದು ಏನೆಂದರೆ ಕಾವೇರಿ ಜರಾನಯನದಲ್ಲರತಕ್ಕ ಪ್ರಾಜೆಕ್ಟ್‌ಗಳಾಗಲೀ, ಕೃಷ್ಣಾ ಜರಾನಯನದರಲ್ಲರತಕ್ಕ ಪ್ರಾಜೆಕ್ಟ್‌ಗಳಾಗಲೀ ಅವುಗಳನ್ನು ತೆಗೆದುಕೊಳ್ಳುವಾಗ ಪ್ರಯಾರಿಟಿ ಬೇಸಿಸ್ ಮೇಲೆ ಕೆಲಸವನ್ನು ಪ್ರಾರಂಭ ಮಾಡ ಬಹುದು ಎಂದು ಕಾಣುತ್ತದೆ. ಈ ಕಾನೂನಿನ ಪ್ರಕಾರ ಇಂಥಾ ಒಂದು ನೋಟಿಫಿಕೇಷನ್ ಅನ್ನೂ ಎರ್ಲಾ ಕಡೆಗಳಲ್ಲೂ ಹಾಕಿರುತ್ತಾರೆ. ಆಗ ಪ್ರಯಾರಿಟಿ ಪ್ರಕಾರ ಯಾವ ಪ್ರಾಜೆಕ್ಟನ್ನು ಕಟ್ಟಬೇಕು ಎನ್ನುವ ಒಂದು ದೊಡ್ಡ ಸಮಸ್ಯೆ ಬರುತ್ತದೆ. ಯಾವುದಾದರೂ ಒಂದು ಪ್ರಾಜೆಕ್ಟನ್ನು ಕಟ್ಟ ಇನ್ನೊಂದು ಕಡೆ ನಿಲ್ಲಿಸುತ್ತೇವೆ ಎಂದು ಹೇಳಿದಾಗ ಅದರಿಂದ ತೊಂದರೆಯಾಗುತ್ತದೆ. ಏತ ಕ್ಕೆಂದರೆ ಈಗ ಕಾವೇರಿ ಬೇಸಿನ್‌ನಲ್ಲರಕ್ಕ ಪ್ರಾಜೆಕ್ಟ್‌ಗಳನ್ನು ಪ್ರಯಾರಿಟಿ ಬೇಸಿಸ್ ಮೇಲೆ ತೆಗೆದು ಕೊಳ್ಳುತ್ತೇವೆ ಎಂದರೆ 1974ನೇ ಇಸವಿ ಹತ್ತಿರ ಬಂತು. ಆದ್ದರಿಂದ ಅಗ್ರಿಮೆಂಟ್ ಪ್ರಕಾರ ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರತಕ್ಕಂಥ ಹಕ್ಕಿನ ನೀರನ್ನು 1974ನೇ ಇಸವಿಯ ಒಳಗಾಗಿ ಉಪಯೋಗ ಮಾಡಿಕೊಳ್ಳಲೇಬೇಕು. ಆದ್ದರಿಂದ ಆ ಪ್ರಾಜೆಕ್ಟ್‌ಗಳನ್ನು ಕಟ್ಟಲೇ ಬೇಕಾಗು ತ್ತದೆ. ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಆ ಯೋಜನೆಯ ಏರಿಯಾದಲ್ಲರತಕ್ಕ ರೈತರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಲಿಲ್ಲ ಎಂದು ಅದನ್ನು ಕಟ್ಟುವುದನ್ನು ನಿಲ್ಲಿಸುತ್ತೀರಾ? ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕತಕ್ಕಂಥ ಕೆಲಸವನ್ನು ಏತಕ್ಕೆ ಮಾಡುತ್ತೀರಿ ? ಇದರಿಂದ ಜನಮನದಲ್ಲಿ ಯಾವರೀತಿಯ ಪರಿಣಾಮವುಂಟಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕು. ರಾಜ್ಯ ಸರ್ಕಾರದ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡತಕ್ಕ ಅವಕಾಶಗಳನ್ನು ಕಲ್ಪನೆ ಮಾಡತಕ್ಕ ಕರಾಳ ಶಾಸನ ಇದು ಎಂದು ಹೇಳಬೇಕಾಗಿದೆ. ಇಂಥ ಒಂದು ಶಾಸನವನ್ನು ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಕೇಳಬೇಕಾಗಿದೆ. ಏಕೆಂದರೆ ಯಾವಾಗಲೂ ನಾವು ಮಾಡತಕ್ಕಂಥ ಕಾನೂನುಗಳೇ ಆಗಲೀ, ನಾವು ಕೈಕೊಳ್ಳ ತಕ್ಕಂಥ ಕ್ರಮಗಳೇ ಆಗಲೀ ಈ ರಾಜ್ಯದ ಜನತೆಯ ಮನಸ್ಸಿನ ಮೇಲೆ ತಳಮಳವನ್ನಾಗಲೀ ಅನುಮಾನವನ್ನಾಗಲೀ ಉಂಟುಮಾಡುವ ಸ್ಥಿತಿಯಲ್ಲ ಇರಬಾರದು. ಜನರಲ್ಲಿ ಭಾವೈಕ್ಯತೆ ಉಂಟುಮಾಡುವ ಶಾಸನವನ್ನು ನಾವು ಮಾಡಬೇಕು. ಜನರು ಸಿಡಿದೇಳುವಂತಹ ಕಾನೂನು ಮಾಡಬಾರದು. ಈಗ ತಂದಿರುವ ಶಾಸನವನ್ನು ನೋಡಿದರೆ ನನ್ನ ಮನಸ್ಸು ತಳಮಳಗುಟ್ಟುತ್ತಿದೆ.

5-00 P.M.

ಶ್ರೀ ಬಿ. ಪಿ. ಗಂಗಾಧರ.—ನಮ್ಮ ರಾಜ್ಯದಲ್ಲರತಕ್ಕಂಥ ಕೋಟ್ಯಾಂತರ ರೂಪಾಯಿಗಳ ನ್ಯಾಯವನ್ನು ಈಡು ಮಾಡುವುದಕ್ಕಾಗಿ ಈ ಒಂದು ಬಿಲ್ಲನ್ನು ತಂದಿದ್ದಾರೆ. ಈಗಾಗಲೇ ನಮ್ಮ ರಾಜ್ಯ ದಲ್ಲರತಕ್ಕಂಥ ಅನೇಕ ಸೊಸೈಟಿಗಳು ಲಿಕ್ವಿಡೇಟ್ ಆಗಿವೆ. ಕೆಲವು ಸಾರ್ವಲ್ ಸ್ಕೇರ್ ಇಂಡಸ್ಟ್ರೀಗಳು ಲಿಕ್ವಿಡೇಟ್ ಆಗುವ ಸ್ಟೇಜಿಗೆ ಬಂದಿವೆ. ಈಗ ಮತ್ತೆ ಈ ಒಂದು ಶಾಸನವನ್ನು ತಂದು ಜನರಲ್ಲರುವ ನ್ಯಾಯವನ್ನು ಈಡು ಮಾಡಿಸಿ ಆ ಮೂಲಕ ಬರತಕ್ಕಂಥ ಹಣವನ್ನು ದುಂದು ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಒಂದು ತಿದ್ದುಪಡಿಯನ್ನು ಸರ್ಕಾರದವರು ತಂದಿರುವ ಮುಖ್ಯ ಉದ್ದೇಶವೇನೆಂದರೆ ತಮ್ಮ ಒಂದು ಜವಾಬ್ದಾರಿಯನ್ನು ಹಾರಿಸಿಕೊಳ್ಳುವುದಕ್ಕಾಗಿ ಹೊರ ಟಿದ್ದಾರೆ ಎಂದು ಹೇಳಬಹುದು. ಈಗಾಗಲೇ ನಮ್ಮ ಸರ್ಕಾರದವರು ಅನೇಕ ನೀರಾವರಿ ಯೋಜ ನೆಗಳನ್ನು ಮಾಡಿ ಮುಗಿಸಿದ್ದಾರೆ. ಆ ಯೋಜನೆಗಳಿಂದ ಅನೇಕ ಜನ ಪ್ರಯೋಜನ ಹೊಂದು ತ್ತಿದ್ದಾರೆ. ಈಗ ಫಲ ಉಣ್ಣುತ್ತಿರುವ ನಮುದಾಯದಿಂದ ಎಷ್ಟು ಹಣವನ್ನು ಎಕರೆಗೆ 500 ರೂಪಾಯಿಗಳಂತೆ ವಸೂಲ ಮಾಡಿದ್ದಾರೆ ಎಂಬ ಲೆಕ್ಕವನ್ನು ಮೊದಲು ಕೊಡಲಿ. ಆ ಒಂದು ಲೆಕ್ಕವನ್ನು ಕೊಟ್ಟಮೇಲೆ ಈ ತಿದ್ದುಪಡಿಯನ್ನು ಬೇಕಾದರೆ ಪರಿಸೀಲನೆ ಮಾಡಬಹುದು. ಈ ಲೆಕ್ಕವನ್ನೇ ಕೊಡದೆ ಸರ್ಕಾರ ಮುಂದೆ ಈ ತಿದ್ದುಪಡಿ ಪ್ರಕಾರ ಮುಂಗಡ ಅಭಿವೃದ್ಧಿ ವಂತಿಗೆಯನ್ನು ವಸೂಲ ಮಾಡಿದ ಮೇಲೆ ನೀರಾವರಿ ಯೋಜನೆಗಳನ್ನು ಕೈಕೊಳ್ಳುತ್ತದೆ ಎಂಬ ನಂಬಿಕೆಯಾದರೂ ಏನು ? ಈಗಾಗಲೇ ನಾನು ಈ ಮನಸೂದೆಯ ಜೊತೆಗೆ ಒಂದು ಅಮೆಂಡ್‌ಮೆಂಟನ್ನು ಕಳಿಸಿದ್ದೇನೆ. ಒಂದು ಉದ್ದೇಶದಿಂದ ಅದನ್ನು ಕಳಿಸಬೇಕಾಯಿತು. ಈ ಮನಸೂದೆಯನ್ನು ಮಂಡಿಸುವುದಕ್ಕೆ ಮೊದಲು ನಾನು ಒಂದು ಕ್ರಿಯಾಲೋಪವನ್ನು ಎತ್ತಿದಾಗ, ಆ ಬಗ್ಗೆ ಕೇಳುವುದಕ್ಕೆ ನನಗೆ ಅಧಿಕಾರ

(ಶ್ರೀ ಎಚ್. ಎನ್. ನಂಜೇಗೌಡ)

ಇಲ್ಲ ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟರು. ಕಾನ್ಸ್‌ಟಿಟ್ಯೂಷನರ್ ಪ್ರಶ್ನೆ ಬಂದಾಗ. Whether a legislation is *ultra vires* or not the Chair shall not sit in judgment ಎಂದು ಹೇಳಿದರು. ಇದನ್ನು ಏತಕ್ಕೆ ಹೇಳಿದೆ ಎಂದರೆ, ಮಾನ್ಯ ಚೆನ್ನ ಬಸಪ್ಪನವರು ಆರ್ಟಿಕಲ್ 19(1) (ಎಫ್) ಪ್ರಕಾರ it becomes *ultra vires* we should not pass such a bill ಎಂಬ ಒಂದು ಅಬ್ಜೆಕ್ಷನ್ನನ್ನು ರೈಜ್ ಮಾಡಿದರು. ಆಗ ಅಧ್ಯಕ್ಷರು ಏನೋ ಒಂದು ತೀರ್ಮಾನ ಕೊಟ್ಟರು. ಕಾನ್ಸ್‌ಟಿಟ್ಯೂಷನರ್ ಪಾಯಿಂಟ್ ಬಂದಾಗ ಅಧ್ಯಕ್ಷರು ತಾವೇ ಒಂದು ತೀರ್ಮಾನ ಕೊಡುವುದು ಸರಿಯಲ್ಲ. ಏಕೆಂದರೆ ಈ ಒಂದು ತಿದ್ದುಪಡಿಯಿಂದ ನಾಳೆ ಹೆಚ್ಚು ಕಡಿಮೆಯಾಗಬಹುದು. ಇಂತಹ ಒಂದು ಕಾನೂನನ್ನು ತರುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಸರ್ಕಾರದವರು ಅತುರಾತುರವಾಗಿ ಇದನ್ನು ಪಾಸ್ ಮಾಡುವುದಕ್ಕೆ ಹೊರಟಿದ್ದಾರೆ. ಈ ತರಹದ ಮನೂದೆ ಬಂದಾಗ Though there are precedents that the Chair shall not sit in judgement on constitutional points ಎಂದು ಇದ್ದರೂ ಕೂಡ, ಸಭಾಧ್ಯಕ್ಷರು ತೀರ್ಮಾನ ಕೊಡುತ್ತಿದ್ದಾರೆ. ಅದು ಸರಿಯಲ್ಲ. ಈ ಒಂದು ಮನೂದೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ 3-12-69ರ ವರೆಗೆ ಕಳಿಸಬೇಕೆಂದು ನಾನು ಒಂದು ಅಮೆಂಡ್‌ಮೆಂಟನ್ನು ಕಳಿಸಿದ್ದೇನೆ. ಈ ಅಮೆಂಡ್‌ಮೆಂಟನ್ನು ಮಾನ್ಯ ಸಿಂಗಾರಿ ಗೌಡರು ಸಹ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವವರು ಎಲ್ಲಿಯೋ ಇದ್ದಾರೆ. ಆದರೆ ನಾವು ಬೆಟ್ಟ ಅಗೆಯುವುದಕ್ಕೆ ಹೊರಟಿದ್ದೇವೆ. ಈ ಒಂದು ಮನೂದೆಯನ್ನು ಸಾರ್ವಜನಿಕರು ಒಪ್ಪುವುದು ಸಹ ಕಷ್ಟವಾಗುತ್ತದೆ. ಇದನ್ನು ಪಾಸ್ ಮಾಡುವುದು ಸರಿಯೇ ಎಂದು ಅಡ್ವೊಕೇಟ್ ಜನರಲ್ ಅವರನ್ನು ಸಹ ಕೇಳುವುದು ಒಳ್ಳೆಯದು. ನಾನು ಕೇಳಿಕೊಳ್ಳುವುದು ಇಷ್ಟೆ, ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸುವುದಕ್ಕೆ ಒಪ್ಪಬೇಕು, ಇಲ್ಲದಿದ್ದರೆ ಈ ಒಂದು ಕರಾಳ ಶಾಸನವನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ವಾಪಸ್ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸಿ. ನಂತರ ಮಂತ್ರಿಗಳೆಲ್ಲರೂ ಕೂಡ ಎರ್ಲಾ ಕಡೆಗೂ ಪ್ರವಾಸ ಹೋದರೆ ಮುಖಕ್ಕೆ ಮಂಗಳಾರತಿ ಮಾಡುತ್ತಾರೆ. ಕಾರಿನ ಮುಂದೆ ಬಾವುಟ ಹಾಕಿಕೊಂಡು ಪ್ರವಾಸ ಹೋಗುವುದಕ್ಕೆ ಮೊದಲು 29 ಜನ ಮಂತ್ರಿಗಳೂ ಕೂಡ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಬೇಕು. ಏನೆಂದರೆ ಅಡ್ವಾನ್ಸ್ ಬೆಟರ್‌ಮೆಂಟ್ ರೆವಿ ಹಾಕುವುದಕ್ಕೆ ತಮ್ಮ ಅಭಿಪ್ರಾಯ ಕೇಳುವುದಕ್ಕೆ ಬರುತ್ತೇವೆ ಎಂದು. ಅನಂತರ ಎರ್ಲಾ ಮಂತ್ರಿಗಳೂ ಸಹ ಎರ್ಲಾ ಊರುಗಳಿಗೆ ಹೋಗಲಿ, ಜನಾಭಿಪ್ರಾಯವನ್ನು ಶೇಖರಣೆ ಮಾಡಲಿ. ಆಗ ಜನರು ಇವರ ಕಾರುಗಳಿಗೆ ಎಷ್ಟು ಕಲ್ಲು ಏಟು ಹೊಡೆದು ಕಾರುಗಳನ್ನು ಜಖಂ ಮಾಡುತ್ತಾರೋ ಮಾಡಲಿ. ಅನಂತರ ಬೇಕಾದರೆ ನಾವು ಅವರಿಗೆ ಆ ಕಾರುಗಳನ್ನು ರಿಪೇರಿ ಮಾಡಿಸಿಕೊಳ್ಳಲು ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿಕೊಡುತ್ತೇವೆ. ಹಾಗೆ ಪ್ರಜಾಭಿಪ್ರಾಯ ಪಡೆದನಂತರ ಈ ಬಿಲ್ಲನ್ನು ತರಲೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಂಸದೀಯ ಸಚಿವರು ಸಭೆಯಮುಂದೆ ಮುಂಡಿಸಿರತಕ್ಕಂತ ಮೈಸೂರು ಇರಿಗೇಷನ್ ರೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಅಂಡ್ ವಾಟರ್ ರೇಟ್ (ಅಮೆಂಡ್‌ಮೆಂಟ್) ಬಿಲ್-1969, ಇದನ್ನು ಬಹಳ ಕಟುವಾಗಿ ವಿರೋಧಿಸುತ್ತ ನಾಲ್ಕು ಮಾತುಗಳನ್ನಾಡಬೇಕೆಂದಿದ್ದೇನೆ.

ಸ್ವಾಮಿ, ರೈತರಮೇಲೆ ಒಂದು ಹೊಸ ತೆರಿಗೆಯನ್ನು ಹಾಕಬೇಕು ಎಂಬ ಒಂದು ಸೂಚನೆಯನ್ನು ವ್ಯಕ್ತಪಡಿಸತಕ್ಕ ಈ ಮನೂದೆಯನ್ನು ಜನರು ಬಹಳವಾಗಿ ವಿರೋಧಿಸುತ್ತಾರೆ. ಈ ಹಿಂದೆ ನೀರಾವರಿ ಕಾಮಗಾರಿಗಳ ಬಗ್ಗೆ ಬೆಟರ್‌ಮೆಂಟ್ ಲೇವಿಯನ್ನು ಹಾಕಬೇಕು ಎನ್ನತಕ್ಕ ವಿಚಾರದಲ್ಲಿ ಚರ್ಚೆ ನಡೆದ ಕಾಲದಲ್ಲಿ ನಾನೂ ಕೂಡ ಮಾತನಾಡಿದ್ದೇನೆ. ಜನರು ಹೆಚ್ಚು ಹೆಚ್ಚು ನೀರಾವರಿ ಸೌಕರ್ಯಗಳನ್ನು ಅಪೇಕ್ಷಿಸುವಾಗ ಅವರೂ ಕೂಡ ಕೆಲವು ಭಾಗವನ್ನು ಮುಂಗಡ ರೂಪದಲ್ಲಿ ಕಾಂಟ್ರಿಬ್ಯೂಷನ್ ಕೊಡುವ ಮೂಲಕ ಸಹಕಾರ ನೀಡಬೇಕೆಂದು ನಾನು ಕೂಡ ಹೇಳಿದ್ದುಂಟು. ಹಾಗೆ ಸಹಕಾರ ನೀಡಿದಿದ್ದರೆ ಸರ್ಕಾರದವರು ಈ ಕೆಲಸಕಾರ್ಯಗಳನ್ನು ತ್ವರಿತವಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದೂ ಉಂಟು. ಆದರೆ ಮಾನ್ಯನಭೆ ನಾವು ಆ ದಿವಸ ಅನುಮತಿ ಕೊಟ್ಟಂಥ ಒಂದು ಮನೂದೆಯೇನಿತ್ತು, ಅದನ್ನೇ ಈ ದಿವಸ ಒಂದು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಹೊರಟಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ಎರ್ಲಾ ಸ್ಥಳೀಯ ಮುಖಂಡರುಗಳ ಅಭಿಪ್ರಾಯವನ್ನು ತೆಗೆದುಕೊಂಡು ಅವರೆಲ್ಲರ ಅಭಿಪ್ರಾಯದಂತೆ

ಕೆಲಸವನ್ನು ಕೈಗೊಳ್ಳುವುದೊಳ್ಳೆಯದು. ರೈತನಿಗೆ ಸಂಬಂಧಪಟ್ಟ ಏನಾದರೂ ಇಂಥ ಒಂದು ನೀರಾವರಿ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಸರ್ಕಾರದವರನ್ನು ಕೇಳಿಕೊಂಡರೆ ರೈತರು ಆ ಕಾಮಗಾರಿಯ ಬಗ್ಗೆ ಖರ್ಚಾಗತಕ್ಕ ಒಟ್ಟು ಮೊಬಲಗೇನಿದೆ ಅದರಲ್ಲಿ ಇಂತಿಷ್ಟು ಹಣವನ್ನು ಮೊದಲು ಮುಂಗಡರೂಪದಲ್ಲಿ ಕೊಡಬೇಕು ಎಂದು ಏನು ಈ ದಿವಸ ಇಲ್ಲಿ ಒಂದು ಬಿಲ್ಲನ್ನು ತಂದಿದ್ದಾರೆ ಇದೇ ರೀತಿಯಾಗಿ ರಾಜ್ಯದಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಒಂದು ಸಾರ್ವ ಜನಿಕರಿಗಾಗಿ ಬಸ್ಸನ್ನು ಓಡಿಸತಕ್ಕ ಬೇಡಿಕೆ ಬಂದಾಗ ಆ ಬೇಡಿಕೆಯ ಖರ್ಚಿನಲ್ಲಿ ಇಂತಿಷ್ಟು ಮುಂಗಡ ಹಣ ಕೊಡಬೇಕೆಂದು ಕೇಳಿರತಕ್ಕ ನಿದರ್ಶನ ಎಲ್ಲಾದರೂ ಇದೆಯೇ ? ಬಸ್‌ರೌಟ್ಸ್ ಬಗ್ಗೆ ಕೇಳಿದಿದ್ದರೆ ಹೋಗಲಿ, ದೇಶದಲ್ಲಿ ಎಲ್ಲಾದರೂ ಹೊಸ ರೈಲ್ವೆರೌಟ್ಸ್‌ಗಳನ್ನು ಹಾಕತಕ್ಕ ಸಂದರ್ಭ ದಲ್ಲಿ ತಗುಲುವ ವೆಚ್ಚದ ಬಗ್ಗೆ ಎಲ್ಲಾದರೂ ಮುಂಗಡ ಹಣವನ್ನು ಕೊಡಬೇಕೆಂದು ಜನರನ್ನು ಒತ್ತಾಯಮಾಡಿದ ನಿದರ್ಶನಗಳಿವೆಯೇ !

ಅದೇರೀತಿ ಒಂದು ಆಸ್ಪತ್ರೆಯನ್ನು ಕಟ್ಟತಕ್ಕ ಸಂದರ್ಭದಲ್ಲಿ ಪ್ರಜೆಗಳು ಮುಂಗಡವಾಗಿ ಇಂತಿಷ್ಟು ಹಣವನ್ನು ಕೊಟ್ಟರೆ ಮಾತ್ರ ನಾವು ಜನರಿಗೆ ಔಷಧಿಯನ್ನು ಕೊಡುತ್ತೇವೆ, ಎಂದು ಹೇಳಿರ ತಕ್ಕ ನಿದರ್ಶನಗಳಿವೆಯೇ ? ಇಂಥ ಯಾವ ಒಂದು ಸಂದರ್ಭದಲ್ಲೂ ಸಾರ್ವಜನಿಕರನ್ನು ಪೀಡಿಸದೆ ಕೆಲಸಗಳನ್ನು ಮಾಡಿ ಬಡ ರೈತರ ವಿಷಯದಲ್ಲಿ ಹೀಗೆ ಮುಂಗಡ ಹಣ ಕೊಡಬೇಕೆಂದು ಒತ್ತಾಯ ಮಾಡುವುದು ನ್ಯಾಚುರಲ್ ಜಸ್ಟೀಸ್ ತತ್ವಕ್ಕೆ ಬಹಳ ವಿರೋಧವಾದದ್ದು. ನೀರಾವರಿ ಕಾಮಗಾರಿ ಗಳನ್ನು ರಾಜ್ಯದಲ್ಲಿ ಕೈಗೊಂಡರೆ ಅವುಗಳ ಉಪಯೋಗವೆಲ್ಲಾ ರೈತಾಪಿವರ್ಗ ಒಂದಕ್ಕೆ ಆಗುತ್ತ ದೆಯೆ ? ರೈತರು ಬೆಳೆದ ಅಕ್ಕಿ ರಾಗಿ ಇತ್ಯಾದಿ ದವಸಗಳನ್ನು ರಾಜ್ಯದಲ್ಲಿರತಕ್ಕ ಪ್ರಜೆಗಳೆಲ್ಲರೂ ಬಳಸುವುದಿಲ್ಲವೇ ? ರೈತರು ಉತ್ಪತ್ತಿ ಮಾಡಿದ ಹತ್ತಿಯಿಂದ ಮಾಡಿದ ಬಟ್ಟೆಗಳನ್ನು ಜನರೆಲ್ಲಾ ಉಪಯೋಗಮಾಡುವುದಿಲ್ಲವೇ ! ರೈತರು ಬೆಳೆದ ಕಬ್ಬಿನಿಂದ ತಯಾರಿಸಿದ ಸಕ್ಕರೆಯನ್ನು ದೇಶ ಪರದೇಶವರು ಬಳಸುವುದಿಲ್ಲವೇ ! ಹೀಗೆ ರೈತರು ಉತ್ಪಾದನೆ ಮಾಡತಕ್ಕ ವಿಶಿಷ್ಟ ವಸ್ತುಗಳು ದೇಶದ ಎಲ್ಲಾ ಜನರೂ ಬಳಸುತ್ತಿರುವಾಗ ಅತನೊಬ್ಬನೇ ಏಕೆ ಈ ನೀರಾವರಿ ಯೋಜನೆಗಳಿಗೆ ಮುಂಗಡವಾಗಿ ಹಣವನ್ನು ಕೊಡಬೇಕು ? ಇದರಲ್ಲಿ ಅಡಗಿರತಕ್ಕ ನೀತಿಯಾವರೂ ಏನು !

ಒಂದುನೂರು ಎಕರೆಗಳಿಗೆ ನೀರನ್ನು ಒದಗಿಸತಕ್ಕ ಕೆರೆಗಳನ್ನು ನಿರ್ಮಾಣ ಮಾಡತಕ್ಕ ಎಲ್ಲಾ ಸಂದರ್ಭಗಳಲ್ಲೂ ರೈತ ಆ ಖರ್ಚಿನಲ್ಲಿ ಇಂತಿಷ್ಟು ಮುಂಗಡವಾಗಿ ಕೊಡಬೇಕೆಂದು ಕೇಳತಕ್ಕದ್ದು ಎಷ್ಟು ಅನ್ಯಾಯ ? ಅಂದಾಜು ಒಂದು ಲಕ್ಷ ಇಪ್ಪತ್ತು ಸಾವಿರದಲ್ಲಿ ಒಂದು ಕೆರೆಯನ್ನು ಕಟ್ಟತಕ್ಕ ನನ್ನವೇಶದಲ್ಲಿ ರೈತರಿಂದ ಮುಂಗಡವಾಗಿ ಹಣವನ್ನು ಪಡೆದು ಕೆಲಸವನ್ನು ಮಾಡಬೇಕೆಂಬುದು ಸರ್ಕಾರದವರ ನಿಲುವಾದರೆ ಆ ಸರ್ಕಾರವರು ಇನ್ನು ಮಾಡತಕ್ಕ ಕೆಲಸವಾದರೂ ಏನು ! ಅಂಥ ಸರ್ಕಾರವಾದರು ಏತಕ್ಕಿರಬೇಕು ? ಮೊದಲು ಹೀಗೆ ಕೆರೆಗಳ ನಿರ್ಮಾಣಕ್ಕಾಗಿ ಮುಂಗಡವಾಗಿ ಹಣ ವನ್ನು ಪಡೆದು ಕೆರೆಗಳನ್ನು ಕಟ್ಟಿದಮೇಲೆ ಮತ್ತೆ ನೀರು ತೆರಿಗೆ ಹಾಕತಕ್ಕದ್ದು ಯಾವ ತತ್ವ ? ಯಾವ ನ್ಯಾಯ ? ಇಂಥ ಒಂದು ''ಅಸಮಾನ್ಯ ಅಭಿಪ್ರಾಯ''ವನ್ನು ಸರ್ಕಾರಕ್ಕೆ ಯಾವ ಮಹ ನೀಯ ಹೇಳಿಕೊಟ್ಟನೋ ನಾನು ಕಾಣೆ. ಆ ಅಭಿಪ್ರಾಯ ಹೇಳಿಕೊಟ್ಟ ಶಕುನಿ ಮಹನೀಯನಿಗೆ ನನ್ನ ಅನಂತ ನಮನಾರ್ಪಗಳು. ನಮ್ಮ ರಾಜ್ಯದಲ್ಲಿ ಈ ದಿವಸ ನುಮಾರು 29 ಸಾವಿರ ಮೇಜರ್ ಮೈನರ್ ಕೆರೆಗಳಿರುತ್ತವೆ. ಅವುಗಳನ್ನು ದುರಸ್ತಿಮಾಡಿ ಬಹಳ ಕಾಲವಾಯಿತು. ಆ ಕೆರೆಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಅದಕ್ಕಾಗಿ ರೈತರು ಮುಂಗಡವಾಗಿ ಹಣವನ್ನು ಕೊಡಲಿ ಎಂದು ಈ ಮನೂದೆಯ ಅಧಾರದಮೇರೆ ನಾಳೆ ಕೇಳೇ ಕೇಳುತ್ತಾರೆ. ಒಂದು ಕೆರೆಯ ಕೆಳಗೆ ಕೇವಲ 100 ಎಕರೆ ತರೀ ಭೂಮಿ ಇರಬಹುದು. ಅಲ್ಲಿ ಹೊಸದಾಗಿ ಅನುಕೂಲವಿದೆ ಇನ್ನೂ 50 ಎಕರೆ ತರಿ ಮಾಡಬಹುದು, ಅದಕ್ಕೆ ಅವಕಾಶ ಮಾಡಿಕೊಡಿ ಎಂದರೆ ಆಗಲೂ ಸರಕಾರ ಮುಂಗಡವಾಗಿ ಹಣ ವನ್ನು ಕೇಳಲೇಬೇಕಾಗುವುದು. ಇದು ಬಹಳ ವಿಚಿತ್ರವಾದ ಮನೂದೆ. ಅತ್ತಕಡೆಯಲ್ಲಿ ಮಾತ ನಾಡಿದ ಶ್ರೀ ಶ್ರೀನಿವಾಸ್‌ರವರು ಸರ್ಕಾರದವರು ಈ ಒಂದು ಹೊಸ ಮನೂದೆಯನ್ನು ತಂದು ಇವ ರಿಂದ ಅವರೇನೋ ಒಂದು ಹೊಸದಾಗಿ ರಕ್ಷಣೆ ಪಡೆದುಕೊಳ್ಳಬೇಕೆಂಬ ಉದ್ದೇಶ ಇಲ್ಲ. ಸರ್ಕಾರಕ್ಕೆ ಈಗಾಗಲೇ ಅನೇಕ ಕಡೆ ಬೇಕಾದಷ್ಟು ಜನ ಅನ್ಯಾಯ ಮಾಡಿದ್ದಾರೆ ಎಂದು ಹೇಳಿದರು. ಅದು ಅವರ ಅಭಿಪ್ರಾಯ. ನಾಳೆ ಮತ್ತೆ 1972 ಕ್ಕೆ ಜನರರ್ ಎಲೆಕ್ಷನ್ ಬರುತ್ತೆ. ಆಗ ಇವರು ಊರುಗಳಿಗೆ ಪ್ರಚಾರ ಕಾರ್ಯಕ್ಕೆ ಹೋದಾಗ ಅಲ್ಲಿ ಜನರು ನೀವು ಈ ಕಳೆದ ಐದುವರ್ಷಗಳಲ್ಲಿ ಎಷ್ಟು ಹೊಸದಾಗಿ ಕೆರೆಗಳನ್ನು ಕಟ್ಟಿಸಿದಿರಿ. ಎಷ್ಟು ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದಿರಿ ಎಂದು ಕೇಳಿದರೆ ಆಗ ಅಡಳಿತ ಪಕ್ಷದ ಜನರು ನಾವೇನುಮಾಡೋಣ ಶೇ 66 ರಷ್ಟು ಜಮೀನ್ದಾರರು ಮುಂಗಡವಾಗಿ ಹಣವನ್ನು ಕೊಟ್ಟಿದ್ದಾರೆ, ಇನ್ನುಳಿದ ಶೇ 33 ಮಂದಿ ಜಮೀನ್ದಾರರು ಅವರ ಮುಂಗಡವ ಹಣವನ್ನು ಕೊಡಲಿಲ್ಲ. ಅದಕ್ಕಾಗಿ ನಾವು ಆ ನೀರಾವರಿ ಕೆಲಸಗಳನ್ನು ನಡೆಸುವು

(ಶ್ರೀ ಎನ್. ಎ ಚನ್ನೇಗೌಡ)

ದಕ್ಕೆ ಆಗಲಿಲ್ಲ ಎಂದು ಹೇಳಿ ಇರುವ ಜನರಿಂದ ಸುಲಭವಾಗಿ ಪಾರಿಕೊಳ್ಳುವುದಕ್ಕೆ, ಈ ಮನೂದೆಯನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸುವುದಕ್ಕೆ ಹೊರಟಿದ್ದಾರೆಂದು ಕಾಣುತ್ತದೆ. ಅದ್ದರಿಂದ ಈಗ ಇರತಕ್ಕ ಈ ಸರ್ಕಾರವೇನಿದೆ ಇದು ರೈತನ ಹಿತವನ್ನು ರಕ್ಷಣೆಮಾಡತಕ್ಕ ಸರ್ಕಾರವಲ್ಲ, ಇದು ರೈತನಿಗೆ ದ್ರೋಹವೆಣಿಸತಕ್ಕ ಸರ್ಕಾರ ಎಂದು ಹೇಳಬೇಕಾಗುತ್ತದೆ.

ಈ ಉದ್ದೇಶ ಸಾಧನೆಗೆ ಜನರ ಆರ್ಥಿಕಸ್ಥಿತಿ ನೋಡಿಕೊಂಡು ಯಾರಲ್ಲಿ ಮುಂಗಡ ಹಣವನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂತಹವರ ಹತ್ತಿರ ಮಾತ್ರ ತೆಗೆದುಕೊಳ್ಳುವ ಏರ್ಪಾಡು ಮಾಡಿದರೆ ನನ್ನ ವಿರೋಧ ಇರುವುದಿಲ್ಲ. ಈ ಜಟಿಲ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿ ತೀರ್ಮಾನಕ್ಕೆ ಬರಲು ಒಂದು ಸೆಲೆಕ್ಟ್ ಸಮಿತಿ ಮಾಡಿ ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಅಧ್ಯಕ್ಷರೇ, ಪಾರ್ಲಿಮೆಂಟ್ ಆಫೇರ್ಸ್ ಸಚಿವರು ತಂದಿರತಕ್ಕಂಥ ಈ ಒಂದು ಮಸೂದೆಗೆ ನನ್ನ ಬೆಂಬಲ ಕೊಡುತ್ತೇನೆ. ಈ ಮಸೂದೆ ಬಹಳ ಪ್ರಾಮುಖ್ಯವಾದುದು ಎಂದು ಹೇಳುತ್ತೇನೆ. ಸರ್ಕಾರದವರು ಇದನ್ನು ತಂದಿರುವುದಕ್ಕೋಸ್ಕರ ಅವರನ್ನು ಅಭಿನಂದಿಸುತ್ತೇನೆ.

ನನಗೆ ಇದರಲ್ಲಿ ಆಶ್ಚರ್ಯವಾದ ವಿಷಯ ಏನೆಂದರೆ ಯಾರು ಈಪೊತ್ತಿನ ದಿವಸ ಕಾವೇರಿ ಪ್ರಾಜೆಕ್ಟ್ ಮತ್ತು ಕೃಷ್ಣಾ ಪ್ರಾಜೆಕ್ಟ್ ವಿಷಯದಲ್ಲಿ ಇದು ಬಹಳ ಆವಶ್ಯಕತೆ ಎಂದು ದೇಶಾಭಿಮಾನದಿಂದ, ಪಕ್ಷಾತೀತವಾದ ಭಾವನೆಯಿಂದ ಪ್ರೋತ್ಸಾಹಿಸಬೇಕೆಂದು ಹೆಣಗಾಡಿ ಮತ್ತು ಸಾಹಸಪಟ್ಟು ಅಧ್ಯಕ್ಷರಿಂದ ಈ ವಿಷಯವನ್ನು ಚರ್ಚಿಸಲು ಹೇಗೆ ಅವಕಾಶ ಕಲ್ಪಿಸಿಕೊಂಡರೋ ಅವರೇ ಈ ಒಂದು ಮಸೂದೆಯನ್ನು ವಿರೋಧಿಸತಕ್ಕಂಥಾದ್ದು ನೋಡಿದರೆ ತುಂಬಾ ವಿಷಾದವಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ತಾವು ಪಕ್ಷಾತೀತವಾಗಿ ದೇಶಾಭಿಮಾನದಿಂದ ಮನಸ್ಫೂರ್ತಿಯಾಗಿ ಮಾತನಾಡುತ್ತೀರಾ ಅಥವಾ ಕಾಂಗ್ರೆಸ್ಸಿನ ಪರವಾಗಿ ನಪೋರ್ಟ್ ಮಾಡಬೇಕೆಂದು ಮಾತನಾಡುತ್ತೀರಾ ?

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸ್ನೇಹಿತರು ಆ ರೀತಿ ಕೇಳುತ್ತಿದ್ದಾರೆ. ಆದರೆ ನನ್ನ ಮನಸ್ಸಿನಲ್ಲಿ ಏನು ಇದೆಯೋ ಅದನ್ನು ಖಂಡಿತವಾಗಿಯೂ ಮಾತನಾಡಿಬಿಡುತ್ತೇನೆ. ಈ ಮಾತನ್ನು ಅಧ್ಯಕ್ಷರ ಮೂಲಕ ತಿಳಿಸುತ್ತೇನೆ. ಈ ವಿಚಾರ ಶ್ರೀಮಾನ್ ಚೆನ್ನಬಸಪ್ಪನವರಿಗೂ ಗೊತ್ತಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಈಪೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಅದರಲ್ಲೂ ಮುಖ್ಯವಾದ ಸದಸ್ಯರುಗಳು ಮಂತ್ರಿಗಳಾಗಿದ್ದರು. ಅವರು ಯಾವ ಪಕ್ಷದಲ್ಲೇ ಇರಲಿ ಸಾಕಷ್ಟು ಅನುಭವ ಪಡೆದಿದ್ದಾರೆ. ಅಂತಹವರು ಈಪೊತ್ತಿನ ದಿವಸ ವಿರೋಧಿಸುತ್ತಿದ್ದಾರೆ. ನಾನಾದರೂ ಕೂಡ ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಈ ಸಮಸ್ಯೆಗಳನ್ನು ನಾವೆಲ್ಲರೂ, ಕರ್ನಾಟಕ ಪಕ್ಷಾತೀತ ಮನೋಭಾವನೆಯಿಂದ ಆರೋಡನೆ ಮಾಡೋಣ ಎಂದು. ಈಪೊತ್ತಿನ ದಿವಸ ನಮ್ಮ ಪರಿಸ್ಥಿತಿ ಹೇಗಿದೆ ಮತ್ತು ಕಾವೇರಿ ಬೇಸಿನ್, ಕೃಷ್ಣಾ ಪ್ರಾಜೆಕ್ಟ್ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಸ್ಪಷ್ಟವಾಗಿ ಯೋಚನೆ ಮಾಡಬೇಕು. 1974ನೇ ಇಸವಿ ತನಕ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಜಲಾಶಯುಗಳನ್ನು ಕಟ್ಟದೇಹೋದರೆ ನಮಗೆ ಖಂಡಿತವಾಗಿಯೂ ಒಂದು ತೊಟ್ಟು ನೀರು ಸಿಕ್ಕುವುದಿಲ್ಲ. ಇದು ನಿರ್ವಿವಾದ ವಿಚಾರ. ಈಗಾಗಲೇ ಹೇಮಾವತಿ ಪ್ರಾಜೆಕ್ಟಿಗೆ ಕ್ಲಿಯರೆನ್ಸ್ ಕೇಳಿದ್ದಕ್ಕೆ ಮದ್ರಾಸಿನ ಮುಖ್ಯ ಮಂತ್ರಿಗಳಾಗಿರುವ ಶ್ರೀ ಕರುಣಾನಿಧಿಯವರು ಆಕ್ಷೇಪಣೆ ಎತ್ತಿದ್ದಾರೆ. ಅವರು ದೆಲ್ಲಿಗೆ ಹೋಗಿ ಚರ್ಚೆ ಮಾಡುವುದಕ್ಕೆ ಹವಣಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೂಡ ಹೇಮಾವತಿ ಪ್ರಾಜೆಕ್ಟ್ ಪ್ರಾರಂಭ ಮಾಡಿಲ್ಲ.

ಇನ್ನು ಹಾರಂಗಿ ಪ್ರಾಜೆಕ್ಟ್ ಪ್ರಾರಂಭ ಮಾಡಬೇಕು, ಕಂಬದಕಡ ಪ್ರಾಜೆಕ್ಟ್ ಪ್ರಾರಂಭ ಮಾಡಬೇಕು, ಕಪಿನಿ ಪ್ರಾಜೆಕ್ಟ್ ಅಸ್ತಿತ್ವದಲ್ಲಿದೆ. ಕಾವೇರಿ ಯೋಜನೆ 30 ಕೋಟಿ ರೂಪಾಯಿ ಯೋಜನೆ, ಇವಕ್ಕೆಲ್ಲಾ ಎಷ್ಟು ಹಣ ಬೇಕಾಗುತ್ತದೆ ? ಸರ್ಕಾರದವರನ್ನು ಕೇಳಿದರೆ ಅವರ ಗ್ರಾಂಟಿನಿಂದ 10—20 ಲಕ್ಷ ರೂಪಾಯಿ ಹಣಕೊಡಬಹುದು, ಉಳಿದಿದ್ದನ್ನಾದರೂ ಯಾವ ಬಾಬು ನಿಂದಲಾದರೂ ಉಳಿಸಿ ಖರ್ಚು ಮಾಡಬೇಕು. ಇಲ್ಲದಿದ್ದರೆ ಆ ಕೆಲಸವೆಲ್ಲಾ ನಿಂತು ಹೋಗುತ್ತದೆ. ಇದೇ ರೀತಿಯಲ್ಲಿ ಕಪಿನಿ ಪ್ರಾಜೆಕ್ಟ್‌ಕೂಡ ಶೈಶವಾವಸ್ಥೆಯಲ್ಲಿದೆ. ಇದೇ ರೀತಿ ಮುಂದುವರಿಸಿದರೆ ಇನ್ನು 60—70 ವರ್ಷವಾದರೂ ಈ ಪ್ರಾಜೆಕ್ಟ್ ಮುಗಿಯುವಂತೆಯೇ ಕಾಣುವುದಿಲ್ಲ. ಹಾಗೆಯೇ

ಕಾವೇರಿ, ಕಂಬದಕಡ, ಹೇಮಾವತಿ, ಹಾರಂಗಿ ಈ ಪ್ರಾಜೆಕ್ಟ್‌ಗಳು ನಿಜವಾಗಿಯೂ ಪ್ರಾಜೆಕ್ಟ್ ಆಗುವ ಪರಿಸ್ಥಿತಿಯಲ್ಲವೆಯೇ ? ಇದಕ್ಕೆಲ್ಲಾ ಸರ್ಕಾರದವರು ಎಷ್ಟು ಹಣ ಎಂತ ಒದಗಿಸುವುದ ಕ್ಕಾಗುತ್ತದೆ, ಖಂಡಿತವಾಗಿಯೂ ಒದಗಿಸುವುದಕ್ಕಾಗುವುದಿಲ್ಲ ಎನ್ನುವುದು ನನ್ನ ಅಭಿ ಪ್ರಾಯ.

ಇನ್ನು ಕೃಷ್ಣಾ ಪ್ರಾಜೆಕ್ಟ ಕಡೆ ಹೋಗೋಣ. ಆಂಧ್ರದವರು ಈಗೊತ್ತಿನ ದಿವಸ ನಾಗಾರ್ಜುನ ಸಾಗರಕ್ಕೆ ಒಂದು ಕ್ರೆಸ್ಟ್‌ಗೇಟನ್ನು ಹಾಕುವುದಕ್ಕೆ ಈಗಾಗಲೇ ಸಿದ್ಧಮಾಡಿಕೊಂಡಿದ್ದಾರೆ. ಅಲ್ಲಿಗೆ ನಾವು 8–10ಜನ ಹೋಗಿದ್ದಾಗ ನೋಡಿಕೊಂಡು ಬಂದೆವು. ಬಹಳ ಸಂತೋಷವಾಯಿತು. ಆದರೆ ನಾವು ಕೃಷ್ಣಾಪ್ರಾಜೆಕ್ಟ್ ಕಟ್ಟಲಲ್ಲವಲ್ಲಾ ಎಂದು ಅಷ್ಟೇ ದುಃಖವಾಯಿತು. ಈಗೊತ್ತಿನ ದಿವಸ ಅಲ್ಲಿ 30ಲಕ್ಷ ಎಕರೆ ನೀರಾವರಿ ಆಗತಕ್ಕಂಥ ಪ್ರದೇಶ ಇದೆ. ಈಗ 5 ಲಕ್ಷ ಎಕರೆಗೆ ನೀರು ಕೊಟ್ಟಿದ್ದಾರೆ. ಅವರ ಸಾಹಸಶಕ್ತಿ ಅವರು ಯಾವ ರೀತಿ ಕಟ್ಟಿದರು ಎನ್ನುವುದನ್ನು ನೋಡಬೇಕು. ಅವರು ರಸ್ತೆ ಮಾಡುವುದನ್ನು ನಿಲ್ಲಿಸಿದರು, ಸೇತುವೆ ಕಟ್ಟುವುದನ್ನು ನಿಲ್ಲಿಸಿದರು, ಬಿಲ್ಡಿಂಗ್ ಕಟ್ಟುವುದನ್ನು ನಿಲ್ಲಿಸಿದರು. ಕೇಂದ್ರ ಸರ್ಕಾರದ ಸಹಾಯ ಪಡೆದರು, ಮತ್ತು ಅವರಿಂದ ಸಾಲ ತೆಗೆದು ಕೊಂಡರು ಇದರ ಜೊತೆಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಂಡರು. ಹೀಗೆ ಎಷ್ಟೆಷ್ಟೋ ರೀತಿಯಿಂದ ಹಣ ಒದಗಿಸಿಕೊಂಡು ಪ್ರಾಜೆಕ್ಟ್ ಕಟ್ಟಿದ್ದಾರೆ. ಆದುದರಿಂದ ನಾವು ಈವಾಗ ಅವರ ಮಾದರಿಯನ್ನು ಅನುಸರಿಸಬೇಕು. ನಾವು ಈಗೊತ್ತಿನ ದಿವಸ ಕೃಷ್ಣಾ ಪ್ರಾಜೆಕ್ಟನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ ; ಕಾವೇರಿ ಪ್ರಾಜೆಕ್ಟನ್ನು ಕಟ್ಟಬೇಕೆಂದಿದ್ದೇವೆ. ಇವೆಲ್ಲಾ 100—120 ಕೋಟಿ ರೂಪಾಯಿ ಯೋಜನೆಗಳು. ಅದಕ್ಕಿಂತ ಕಡಿಮೆ ಆಗುವುದಿಲ್ಲ. ಜೊತೆಗೆ ಇನ್ನೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇವೆ. ಅವೆಲ್ಲಾ 250—300 ಕೋಟಿ ರೂಪಾಯಿ ಪ್ರಾಜೆಕ್ಟ್‌ಗಳು, ಇವು ಗಳನ್ನೆಲ್ಲಾ ಕಾರ್ಯಗತ ಮಾಡಬೇಕಾದರೆ ಈಗೊತ್ತಿನ ಪರಿಸ್ಥಿತಿಯಲ್ಲಿ ನಾವು ಯಾವರೀತಿ ಇದ್ದೇವೆ, ಹೇಗೆ ಕಟ್ಟಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ರಿಸೋರ್ಸ್ ಕಮಿಟಿ ಎಂದು ಸರ್ಕಾರ ದವರು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದರಲ್ಲಿ ವಿರೋಧ ಪಕ್ಷದ ನಾಯಕರು ಗಳಾದ ಶ್ರೀಮಾನ್ ಚನ್ನಬಸಪ್ಪನವರು, ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ನಾನೂ ಇದ್ದೇನೆ. ಅವರಿಗೂ ಇವೆಲ್ಲಾ ಕಾಣುತ್ತದೆ. ಇವಕ್ಕೆಲ್ಲಾ ಹಣ ಹೇಗೆ ಒದಗಿಸಬೇಕೆಂದು ನಾವು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಈವೊತ್ತಿನ ದಿವಸ ವರ್ಷಕ್ಕೆ 10ಕೋಟಿ ರೂಪಾಯಿ ಉಳಿಸ ಬೇಕಾದರೂ ಕಷ್ಟ. ಅಷ್ಟನ್ನಾದರೂ ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ 10 ವರ್ಷಕ್ಕೋ ಅಥವಾ 20 ವರ್ಷಕ್ಕೋ ಒಂದು ಪ್ರಾಜೆಕ್ಟನ್ನು ಮಾಡಬಹುದು. ಇಲ್ಲದೇ ಹೋದರೆ ಕಾವೇರಿ ಪ್ರಾಜೆಕ್ಟ್ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಪೂರ್ಣವಾಗುತ್ತದೆ ಎನ್ನುವ ಆಸೆಯನ್ನು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ. ಇಲ್ಲಿಯವರೆಗೆ ನಮ್ಮಮೇಲೆ ಇರತಕ್ಕಂಥ ಕೇಂದ್ರ ಸರ್ಕಾರದ ದೃಷ್ಟಿ ನೋಡಿದರೆ ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ನಾವೇನು ಬದುಕಿ ದ್ದೇವೆಯೇ, ಸತ್ತಿದ್ದೇವೆಯೇ ಎಂದು ಅವರು ಕೇಳುತ್ತಾ ಇಲ್ಲ. ಮೈಸೂರಿನ ಮೇಲೆ ಕೇಂದ್ರ ಸರ್ಕಾರದ ಸಹಾನುಭೂತಿ ಇಲ್ಲ. ಮೈಸೂರು ರಾಜ್ಯದಲ್ಲಿ ಸರ್ಕಾರ ಇದೆಯೋ, ಇಲ್ಲವೋ ಎಂದು ತಿಳಿದುಕೊಂಡಿದ್ದಾರೆಯೋ, ತಿಳಿದುಕೊಂಡಿಲ್ಲವೊ ? ಎಂದು ಕೇಳಬೇಕಾಗಿದೆ. ಮೈಸೂರು ರಾಜ್ಯದ ಸ್ಥಿತಿ ಏನಾಗಿದೆ ಎಂಬುದನ್ನು ಅವರು ವಿಚಾರಿಸುತ್ತಾ ಇಲ್ಲ. ಆಂಧ್ರ, ಮದ್ರಾಸಿನವರಿಗೆ ಬೇಕಾ ದಷ್ಟು ಹಣ ಕೊಟ್ಟು ಒಬ್ಬೊಬ್ಬರಿಗೆ ಒಂದೊಂದು ರೀತಿ ತಾರತಮ್ಯ ತೋರಿಸಿದ್ದಾರೆ. ಇದು ಏನಾಗಿದೆ ಎಂದರೆ ಬೇರೆ ರಾಜ್ಯಗಳಲ್ಲಿ ನೀರಾವರಿ ಪ್ರದೇಶ 30—40 ಪರ್ಸೆಂಟು ಇದ್ದರೆ, ಇನ್ನೂ ಕೂಡ ನಮ್ಮಲ್ಲಿ 11 ಪರ್ಸೆಂಟು ಇದ್ದರೂ ಸಹ ನಮಗೆ ಏನೂ ಪ್ರೋತ್ಸಾಹ ಕೊಡುತ್ತಾ ಇಲ್ಲ. ಕೇಂದ್ರ ಸರ್ಕಾರ ಮೈಸೂರನ್ನು ಕಡೆಗಾಣಿಸಿರುವುದು ತುಂಬಾ ವಿಷಾದಕರ.

ಇನ್ನು ಕೃಷ್ಣಾ ನದಿ ವಿವಾದವನ್ನು ಟ್ರಿಬ್ಯೂನರ್‌ಗೆ ಹಾಕಬೇಕೆಂದು ನಾನು 6 ವರ್ಷದ ಹಿಂದೆಯೇ ಹೇಳಿದ್ದೆ. ಈವೊತ್ತು ನಿಜವಾಗಿಯೂ ಟ್ರಿಬ್ಯೂನರ್‌ಗೆ ಹೋಗಿದೆ 5—6 ವರ್ಷ ಗಳಿಂದಲೂ ಕೂಡ ನಮ್ಮಲ್ಲಿ ರಸ್ತೆಗಳನ್ನೂ, ಸೇತುವೆಗಳನ್ನೂ, ಬಿಲ್ಡಿಂಗ್‌ನ್ನೂ ಕಟ್ಟಿಸಿ ವರ್ಷೇ ವರ್ಷೇ ಸಾಲ ಮಾಡಿಕೊಂಡಿದ್ದೇವೆ. ಇದು ಏತಕ್ಕೆ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ. ಈವೊತ್ತು ಪ್ರಾಜೆಕ್ಟ್‌ಗಳನ್ನು ಬಾಯಿಮಾತಿನಲ್ಲಿ ಕಟ್ಟುವುದಕ್ಕಾಗುವುದಿಲ್ಲ, ನಿರ್ಣಯಮಾಡಿ ಕಟ್ಟು ವುದಕ್ಕಾಗುವುದಿಲ್ಲ, ಮನೆಯ ಪಾಸು ಮಾಡಿ ಕಟ್ಟುವುದಕ್ಕಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ಸ್ನೇಹಿತರು ಅರ್ಥಮಾಡಿಕೊಂಡಿರಬಹುದು. ಇದನ್ನು ಕಾಂಗ್ರೆಸ್ಸಿನ ಪಕ್ಷದ ಸದಸ್ಯರು ತಂದಿದ್ದಾರೆ, ಇದನ್ನು ವಿರೋಧಿಸಬೇಕು ಎನ್ನುವ ಮನೋಭಾವನೆ ಇದೆ; ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುವುದು ಏನೆಂದರೆ ಇದು ಪಕ್ಷಾತೀತವಾದ ವಿಷಯ. ಇದು 2½ ಕೋಟಿ ಕನ್ನಡಿಗರ ಪ್ರಶ್ನೆ. ಇದನ್ನು ಯಾರು ಮಾಡಿದರೂ ಮಹದುಪಕಾರ ಮಾಡಿದ ಹಾಗೆ ಆಗುತ್ತದೆ. ಇದು

(ಶ್ರೀ ಡಿ. ಎಂ. ಸಿದ್ದಯ್ಯ)

ದೇಶದ ಹಿತದೃಷ್ಟಿ ಎಂದು ಇಟ್ಟುಕೊಂಡು, ಕರ್ನಾಟಕ ಜನತೆ ಆಶೋತ್ತರಗಳು ಎಂಬುದನ್ನು ಅರಿತುಕೊಂಡು ನಮ್ಮ ನೀರಾವರಿ ಯೋಜನೆಗಳನ್ನು ನಿಯಮಿತ ಕಾಲದಲ್ಲಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ನಮಗೆ ಕೆಲಸದಲ್ಲಿ ಏನೇನು ಅಡ್ಡಿ ಆತಂಕಗಳು ಬಂದರೂ ಕೆಲಸ ಮಾಡಿಕೊಂಡು ಹೋಗುವ ಹಾಗೆ ನಮ್ಮ ತಂಡ ಬರಲಿ ಎಂದು ಸರ್ಕಾರವನ್ನೂ, ವಿರೋಧ ಪಕ್ಷದವರನ್ನೂ ಕೇಳಿಕೊಳ್ಳುತ್ತೇನೆ. ಇದು ಜೀವನ ಮರಣದ ಪ್ರಶ್ನೆ. ಒಂದು ಕಡೆ ಹಣದ ಅಭಾವವಿದ್ದರೆ ಮತ್ತೊಂದು ಕಡೆ ನೀರಿನ ಕೊರತೆ ಹಾಗೆಯೇ ಇದೆ ಎನ್ನುವುದು. ಕೃಷ್ಣ ಬೇಸಿನ್‌ನಲ್ಲಿ ಜಾಸ್ತಿ ಯಾಗಿದೆ, ಪೆನ್ನಾರ್ ಕಡೆಗೂ ಅವರ ಪ್ರಭಾವವನ್ನು ಹರಿಸಿದ್ದಾರೆ, ನೀರಿನ ಹಂಚಿಕೆಯಲ್ಲಿಯೂ ಕಡಮೆ ಮಾಡಿದ್ದಾರೆ. ಟ್ರಿಬ್ಯೂನರ್ ಮುಂದೆ ಕೇಸು ಇದೆ. ನೀರನ್ನೂ ಒದಗಿಸಿಕೊಳ್ಳಬೇಕು, ಹಣವನ್ನೂ ಒದಗಿಸಿಕೊಳ್ಳಬೇಕು. 1974ನೇ ಇಸವಿ ಮುಗಿಯುವುದರೊಳಗಾಗಿ ಕಾವೇರಿ ಬೇಸಿನ್‌ನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳದೆ ಇದ್ದ ಪಕ್ಷದಲ್ಲಿ ಒಂದು ತೊಟ್ಟು ನೀರು ನಮಗೆ ಸಿಕ್ಕುವುದಿಲ್ಲ ಎನ್ನುವುದು ನಿರ್ವಿವಾದವಾದ ವಿಚಾರ. ಕೇಂದ್ರದವರು ಕೊಟ್ಟರೆ ಎಷ್ಟು, ಬಿಟ್ಟರೆ ಎಷ್ಟು, 1974ರೊಳಗೆ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದೀರಾ ? ಕೇಂದ್ರದವರು ಕ್ಲಿಯರೆನ್ಸ್ ಕೊಡಲಿ ಬಿಡಲಿ ನಮ್ಮ ಕಾಲ ಮೇಲೆ ನಾವು ನಿಂತುಕೊಂಡು ಹಣವನ್ನು ಸರ್ವವಿಧ ದಿಂದಲೂ ಸಂಗ್ರಹ ಮಾಡಿ, ಯುದ್ಧಕಾಲದಲ್ಲಿ ಹೇಗೆ ಹಣವನ್ನು ಆ ಕಾರ್ಯಕ್ಕೆ ಒದಗಿಸಲಾಗುತ್ತದೆಯೋ ಅದೇ ರೀತಿಯಲ್ಲಿ ಹಣವನ್ನು ಒದಗಿಸಿಕೊಂಡು ಪ್ರಾಜೆಕ್ಟ್‌ಗಳನ್ನು ಪೂರ್ತಿಮಾಡಬೇಕು. ಕರ್ನಾಟಕ ರಾಜ್ಯವನ್ನು ನಾವು ರೂಪಿಸಬೇಕು, ನಾವು ಇದರ ಭವ್ಯತೆಯನ್ನು ಕಾಪಾಡಿಕೊಂಡು ಬರಬೇಕು, ಆದರ್ಶ ರಾಜ್ಯವನ್ನು ಕಟ್ಟಬೇಕು ಎನ್ನುವುದನ್ನು ಮುಂದಿನ ಪೀಳಿಗೆಗೆ ಕೃತಿಯಲ್ಲಿ ಮಾಡಿ ತೋರಿಸೋಣ. ಈ ಮನೂದೆಯನ್ನು ವಿರೋಧಿಸಿದ ಮಾನ್ಯ ಮಿತ್ರರನ್ನು ನಾನು ಕೇಳುತ್ತೇನೆ, ಹಣವನ್ನು ಹೇಗೆ ಹೊಂದಿಸಿಕೊಳ್ಳಬೇಕು ! ಸುಮ್ಮನೆ ಟೀಕೆ ಮಾಡುವುದರಿಂದ ಹಣ ಒದಗುವುದಾದರೆ, ಹಣ ಬರುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ.

5-30 P.M.

ನಾನು ಈ ಸಮಸ್ಯೆಯನ್ನು ಎಂದೆಂದಿಗೂ ಪಕ್ಷದ ದೃಷ್ಟಿಯಿಂದ ನೋಡುವವನಲ್ಲ, ಪಕ್ಷಾತೀತವಾಗಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ, ಇಡೀ ಶಾಸನ ಸಭೆ ಸಾಮೂಹಿಕವಾಗಿ ಸಮಾಜವನ್ನು ಬದಲಾಯಿಸುವುದಕ್ಕೆ ಪ್ರಯತ್ನಪಟ್ಟರೆ ಆಗುತ್ತದೆ. ರಿಸೋರ್ಸಸ್ ಕಮಿಟಿಯಿಂದ ಎಷ್ಟು ಹಣವನ್ನು ಕೂಡಿ ಹಾಕುವುದು ಸಾಧ್ಯ ? ಐದನೇ ಏತ್ತಿನೀಯ ಅಯೋಗ ಏನು ಕೊಟ್ಟಿತು? ರಿಸೋರ್ಸಸ್ ಕಮಿಟಿಯಲ್ಲಿ ಹೇಳಿದರು, ಐದನೆ ಏತ್ತಿನೀಯ ಆಯೋಗ ಏನು ಕೊಡುತ್ತದೆ ನೋಡೋಣ ಎಂದು ನಭೆಯನ್ನು ಎರಡು ತಿಂಗಳು ಮುಂದಕ್ಕೆ ಹಾಕಿದರು. ಐದನೆ ಆಯೋಗದಿಂದ ನಮಗೆ 18 ಕೋಟಿ ರೂಪಾಯಿ ಕಡಮೆಯಾಯಿತು. ಮಾನ್ಯ ಮುಖ್ಯ ಮಂತ್ರಿಯವರು ಮಹಾಪ್ರಧಾನಿಯವರನ್ನು ಕೇಳಿದಾಗ ಮೈಸೂರನ್ನು ಏಕೆ ಸಿಂಗರ್ ಔಟ್ ಮಾಡಿದ್ದಾರೆ. ನೋಡುತ್ತೇನೆ ಎಂದು ಹೇಳಿದರು. ಅವರು 18 ಕೋಟಿ ರೂಪಾಯಿಗಳನ್ನು ಒದಗಿಸಿಕೊಡುತ್ತಾರೆ ಎನ್ನುವ ಆಸೆ ನನಗೆ ಕಾಣುಬರುತ್ತಿಲ್ಲ. ಹತ್ತು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ವೆಚ್ಚವಾಗುವ ಎಲ್ಲ ಪ್ರಾಜೆಕ್ಟ್‌ಗಳನ್ನೂ ನ್ಯಾಷನಲ್ ಪ್ರಾಜೆಕ್ಟ್‌ಗಳೆಂದು ಮಾಡಿ ಎಂದು ಎಷ್ಟು ಕೇಳಿದರೂ ಅದಕ್ಕೆ ಕಡೆಗಣ್ಣನ್ನೂ ತೋರಿಸಿಲ್ಲ, ಒಂದು ಕಾಸನ್ನೂ ಕೊಟ್ಟಿಲ್ಲ. ಅಭಾವಪರಿಸ್ಥಿತಿ ಇದೆ ಎಂದು ಹೇಳಿದಾಗ ಪ್ರಾಣ ಉಳಿಸಿಕೊಳ್ಳುವುದಕ್ಕೆ ಸ್ವಲ್ಪ ಹಣವನ್ನು ಚೆಲ್ಲಿದ್ದಾರೆ. ಊಟ ಮಾಡಿ ಶ್ರೀಮಂತರಾದವರು ಎಂಜಲು ಬಿಸಾಕುವ ಹಾಗೆ, ಅಂಥದೃಷ್ಟಿಯಲ್ಲಿ ನಮ್ಮನ್ನು ಕೇಂದ್ರ ಸರ್ಕಾರ ನೋಡುತ್ತಿದೆ. ಕೇಂದ್ರದ ವರಿಗೆ ಚಾಲೆಂಜ್ ಮಾಡಬೇಕು. ಬೇಕಾದರೆ ಸರ್ಕಾರವನ್ನು ನೀವೇ ನಡೆಸಿಕೊಳ್ಳಿ, ನಾವೆಲ್ಲ ರಾಜೀನಾಮೆ ಕೊಡುತ್ತೇವೆಂದು ಹೇಳಬೇಕು. ಮಲತಾಯಿ ಧೋರಣೆಯನ್ನು ಅವರು ತೋರಿಸುವುದಕ್ಕೆ ಆಗುವುದಿಲ್ಲ. ಮೈಸೂರು ರಾಜ್ಯ ಇಂಡಿಯಾದಲ್ಲಿದೆ. ರಾಜಕೀಯವನ್ನು ತಂದು ರಾಜ್ಯದ ಎರಡೂವರೆ ಕೋಟಿ ಜನರನ್ನು ಕೊಂದುಹಾಕುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಯಾವರೀತಿಯು ನೆರವೂ ಸಿಕ್ಕುವುದಿಲ್ಲ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ. ನಮ್ಮ ಕಾಲಮೇಲೆ ನಾವು ನಿಂತುಕೊಂಡು ನಮ್ಮ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿ ಪ್ರೊಗ್ರೆಸ್ ತೋರಿಸಿದರೆ ಮಾತ್ರ ಅವರು ಕಣ್ಣು ಬಿಡುತ್ತಾರೆ. ಈಗಿನ ಕಾಲದಲ್ಲಿ ಶಕ್ತಿ ಇದ್ದವರನ್ನು ಮಾತ್ರ ಮಾತನಾಡಿಸುತ್ತಾರೆ ಇಲ್ಲದೆ ಹೋದರೆ ಯಾರೂ ಕೂಡ ಕೇಳುವುದಿಲ್ಲ ಯಾವ ದೇವರ ಒಕ್ಕಲು ಎಂದು ಕೂಡ ಕೇಳುವುದಿಲ್ಲ. ನಾನು ಸರ್ಕಾರಕ್ಕೆ ಈ ನಂದರ್ಭದಲ್ಲಿ ಬಿನ್ನವಿಸಿ

ಕೊಳ್ಳುವುದೇನೆಂದರೆ ಪ್ರತಿಯಾಬ್ಬ ಮಾನ್ಯ ಮಂತ್ರಿಗಳೂ ಅವರವರ ಇರಾಖೆಯಲ್ಲಿ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿರುವುದು ಯಾವುದು, ಅನಾವಶ್ಯಕವಾಗಿ ಖರ್ಚಾಗುತ್ತಿರುವುದು ಯಾವುದು ಎನ್ನುವುದನ್ನು ಬಹಳ ಖಡಾಖಂಡಿತವಾಗಿ ನೋಡಿ, ಯುದ್ಧಕಾಲದಲ್ಲಿ ಹೇಗೆ ಹೊಟ್ಟೆ ಬಟ್ಟೆ ಕಟ್ಟಿಕೊಂಡು ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಬೇಕೋ ಅದಕಿಂತಲೂ ಬಹಳ ಸೀರಿಯಸ್ಸಾಗಿ ಈ ಸಮಸ್ಯೆಯನ್ನು ಬಿಡಿಸಿ, ಪ್ರತಿಯೊಬ್ಬರೂ ಎಷ್ಟೆಷ್ಟು ಹಣವನ್ನು ಕೂಡಿಸಿ ಕೊಡಬಹುದೋ ಅಷ್ಟನ್ನೂ ಕೊಟ್ಟು ಮಹಾ ಯೋಜನೆಗಳನ್ನು ಮಾಡುವುದಕ್ಕೆ ನೆರವಾಗಬೇಕು.

ರಿಸೋರ್ಸಸ್ ಕಮಿಟಿಯಲ್ಲಿ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಹಾಕಿ ಎಂದು ಹೇಳಿದ್ದೇವೆ. ಬೇಕಾದಷ್ಟು ಜನ ಬೇಕಾದ ರೀತಿಯಲ್ಲಿ, ಒಂದು ದೃಷ್ಟಿಯಿಂದ ಹೇಳುವುದಾದರೆ ಮಾಡಬಾರದ ರೀತಿಯಲ್ಲಿ ಬೇಕಾದಷ್ಟು ಹಣವನ್ನು ಗಳಿಸಿದ್ದಾರೆ. ಅದನ್ನೆಲ್ಲ ಕಿತ್ತುಕೊಂಡು, ಸಾಲವೆತ್ತಿ, ಬಹಳ ಪ್ರಾಮುಖ್ಯವಾದ ಈ ಮನೂದೆಯಲ್ಲಿ ಸೂಚಿಸಿರುವಂತೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳಬೇಕು ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಕಮಿಟಿಯ ಮುಂದೆ ಹೇಳಿದ್ದೇನೆ. ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮ ಜಿಲ್ಲೆಯಲ್ಲಿ ಹಾರಂಗಿ ಭಾಗದ ಜನರು, ನಂಜರಾಜ್ ಅರಸ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎನ್ನುವುದನ್ನು ಕರಪತ್ರಗಳ ಮೂಲಕ ಪಬ್ಲಿಷ್ ಮಾಡಿದ್ದಾರೆ. ಕಬಿನಿ ಜಲಾಶಯದಿಂದ ನೀರಾವರಿ ಸೌಲಭ್ಯವನ್ನು ಪಡೆಯುವ ಜನರೂ ಸಹ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ರೈತರಿಗೆ ಹೊಟ್ಟೆ ಬಟ್ಟೆಗೆ ಆಗಿ ಅವರು ಅನುಕೂಲವಾಗಿದ್ದಾರೆ, ಅದರಿಂದ ವ್ಯವಸಾಯ ಮಾಡುತ್ತಿದ್ದಾರೆ, ಅದಕ್ಕಾಗಿ ಮುಂಗಡವಾಗಿ ಹಣ ಕೊಡುತ್ತಾರೆಂದು ಯಾರೂ ಭಾವಿಸಬೇಕಾಗಿಲ್ಲ. ಅವರು ಜಮೀನನ್ನು ಬ್ಯಾಂಕುಗಳಿಗೆ ಅಡವೀಟ್ಟು, ಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಆಗ ಅವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತಾರೆ. ನೀರಾವರಿ ಯೋಜನೆಗಳನ್ನು ಪಡೆದು, ಅದರಿಂದ ಬೇಕಾದಷ್ಟು ಶ್ರೀಮಂತರಾಗಿರುವವರು ಎಷ್ಟೋ ಕಡೆ ಬೆಟರ್‌ಮೆಂಟ್ ಲೆವಿಯನ್ನು ಕೊಟ್ಟಿಲ್ಲ. ಹಾಗಿರುವಾಗ ಬಡ ರೈತರು ಎಲ್ಲಿಂದ ಕೊಡುತ್ತಾರೆ? ಆದ್ದರಿಂದ ಅವರ ಭೂಮಿಯನ್ನು ಬ್ಯಾಂಕಿಗೆ ಅಡವಾಗಿಟ್ಟುಕೊಂಡು ಸರ್ಕಾರ ಮಧ್ಯೆ ನಿಂತು ಹಣವನ್ನು ಜೋಡಿಸಿಕೊಡಬೇಕು ಎನ್ನುವುದು ಈ ಮನೂದೆಯ ಮುಖ್ಯ ಉದ್ದೇಶ.

ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಈ ವಿಷಯದಲ್ಲಿ ಪ್ರಧಾನಿಯವರನ್ನು ಅಭಿನಂದಿಸಬೇಕು. ಸಮಾಜವಾದದ ತತ್ವವನ್ನು ಜಾರಿಗೆ ತರುತ್ತೇವೆ ಎಂದು ಭಾರಿ ನಿರ್ಣಯಗಳನ್ನು ಪಾಸು ಮಾಡಿದೆವು, ಈ ಸಂಬಂಧದಲ್ಲಿ ಬೆಂಗಳೂರು ಒಂದು ಚರಿತ್ರೆಯನ್ನು ಬರೆಯಿತು. ಶ್ರೀಮತಿ ಗಾಂಧಿ ಅವರು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಹಿಂದೂಸ್ಥಾನದಲ್ಲಿ ಕೀರ್ತಿಯನ್ನು ಗಳಿಸಿರುವ ವಿಚಾರದಲ್ಲಿ ಹೆಮ್ಮೆ ಪಡಬೇಕು. ಬ್ಯಾಂಕುಗಳಲ್ಲಿ ನಾಲ್ಕು ಸಾವಿರಕೋಟಿ ರೂಪಾಯಿ ಗಳಷ್ಟು ಹಣ ಡಿಪಾಜಿಟ್ ರೂಪದಲ್ಲಿದೆ. ಇದನ್ನು ಯಾವ ರೀತಿ ಸಣ್ಣ ಕೈಗಾರಿಕೆಗಳಿಗೆ ಹಾಗೂ ರೈತರಿಗೆ ಸಹಾಯ ಮಾಡುವುದರ ಜೊತೆಗೆ ಇಂಬ್ಯಾಲೆನ್ಸಸ್ ಎಲ್ಲೆಲ್ಲಿದೆ, ಯಾವ ಯಾವ ರಾಜ್ಯಗಳು ಹಿಂದುಳಿದಿದ್ದು ಆ ರಾಜ್ಯಗಳ ಉದ್ಧಾರಕ್ಕೆ ಖರ್ಚು ಮಾಡಬೇಕೆಂಬ ನಿಯಮವನ್ನು ಹಾಕಿದ್ದಾರೆ. ರಾಷ್ಟ್ರೀಕರಣವಾಗಿರುವುದರಿಂದ ಬ್ಯಾಂಕುಗಳಿಂದ ನಮಗೆ ನೂರಾರು ಕೋಟಿ ರೂಪಾಯಿಗಳ ನೆರವು ದೊರೆಯಬಹುದು. ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಯಾರೇ ಆಗಿರಲಿ ತಮ್ಮ ಪಕ್ಷ ಅಥವಾ ರಾಜಕೀಯ ಜಂಜಾಟ ಅಥವಾ ವೈಯಕ್ತಿಕ ಪ್ರತಿಷ್ಠೆಯನ್ನು ಬಿಟ್ಟು ಇಡೀ ಪ್ರಕರಣವನ್ನು ಸಮತೆಯ ದೃಷ್ಟಿಯಿಂದ ನೋಡಿ, ನ್ಯಾಯವಾಗಿ ಮಾಡಬೇಕು ಎನ್ನುವುದು ನಿಜವಾದರೆ ಕೇಂದ್ರ ಸರ್ಕಾರ ನಮಗೆ ನೂರಾರು ಕೋಟಿ ರೂಪಾಯಿಗಳನ್ನು ಕೊಡಬೇಕು. ಅದಕ್ಕೆ ನಾವು ದಿಟ್ಟತನದಿಂದ ನಮ್ಮ ಸಮಸ್ಯೆಗಳನ್ನು ಎಳೆಎಳೆಯಾಗಿ ತಿಳಿಸಿ, ರಾಜಕೀಯ ಕಾರಣವನ್ನು ತಂದು ಹಾಕದೆ ಈ ಸಮಸ್ಯೆಯನ್ನು ಬಿಡಿಸುವಂತೆ ನಾವು ಕೂಡ ನಡೆದುಕೊಳ್ಳಬೇಕು, ಅವರೂ ಕೂಡ ನಡೆದುಕೊಳ್ಳುವ ಹಾಗೆ ಪ್ರೇರೇಪಿಸಬೇಕು. ರಾಷ್ಟ್ರೀಕರಣದಿಂದ ಹಣ ಕೇವಲ ಕೆಲವು ಪ್ರಾಂತಗಳಿಗೆ ಸೇರುವುದಲ್ಲ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಮೈಸೂರು ದೇಶಕ್ಕೆ ಸಂಬಂಧಪಟ್ಟ ಹಾಗೆ ರಾಜಕೀಯ ಭಿನ್ನಾಭಿಪ್ರಾಯಗಳು ಉನ್ನತ ಮಟ್ಟದಲ್ಲಿರುವವರಲ್ಲದ್ದರೂ ಕೂಡ ಯಾರೂ ಶಾಶ್ವತವಾಗಿ ಬೆಣ್ಣೆ ಹೊಡೆಸಿಕೊಂಡಿರುವುದಿಲ್ಲ. ಮುಂದಿನ ಪೀಳಿಗೆಯನ್ನು ನಾವು ನೋಡಬೇಕು. ಪ್ರಜಾಪ್ರಭುತ್ವದಲ್ಲಿ ಎಷ್ಟೋ ಬಂದು ಹೋಗಿದೆ. ಪ್ರಜಾಪ್ರಭುತ್ವದಲ್ಲಿ ಉಳಿಯಬೇಕು, ದೇಶದ ಜನತೆಯ ಕಲ್ಯಾಣವಾಗಬೇಕು, ಯಾವ ದೇಶ ಬಡತನದಲ್ಲಿರುತ್ತದೆ, ಎಲ್ಲಿ ಜಟಿಲ ಸಮಸ್ಯೆಗಳಿರುತ್ತವೆ, ಅಂಥ ಸಂದರ್ಭಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಘನತೆಯಿಂದ ವರ್ತಿಸಬೇಕು. ಇಲ್ಲದೆ ಹೋದರೆ ಆ ಸ್ಥಾನವನ್ನು ಬಿಟ್ಟು ಬರಬೇಕು. ಪ್ರಜಾಪ್ರಭುತ್ವದಲ್ಲಿ ಸ್ಥಾನಮಾನಗಳು ಯಾರಿಗೂ

(ಶ್ರೀ ಡಿ. ಎಂ. ನಿದ್ದಯ್ಯ)

ಶಾಶ್ವತವಲ್ಲ. ಡಿಕ್ಟೇಟರಷಿಪ್ ರೀತಿಯಲ್ಲಿ ಆ ಸ್ಥಾನವನ್ನು ಯಾರೂ ಗಳಿಸಿಲ್ಲ. ಯಾವ ವ್ಯಕ್ತಿಯೇ ಆಗಲೀ ತಾನು ದೇಶಕ್ಕೆ ಸೇವೆ ಮಾಡಬೇಕು. ಆದಕಾರಣ ಸೇವೆ ಮಾಡುವುದಕ್ಕೆ ನಿಷ್ಠೆ, ದೇಶಾಭಿಮಾನ ಇಲ್ಲದೆ ಇದ್ದರೆ ಯಾರೂ ತಮ್ಮ ಸ್ಥಾನದಲ್ಲಿ ಇರಕೂಡದು ಎನ್ನುವುದು ಪ್ರಜಾಪ್ರಭುತ್ವದ ಧರ್ಮ. ಈ ದೃಷ್ಟಿಯಿಂದ ಅಡ್ವಾನ್ಸ್ ಕಾಂಪ್ರಿಬ್ಯೂಷನ್ ಕೇಳಲಾಗುತ್ತಿದೆ. ಅಡ್ವಾನ್ಸ್ ಇಲ್ಲದೆ ಮಹಾ ಯೋಜನೆಗಳೇನಿವೆ ಅವನ್ನು 74ನೆಯ ಇಸವಿಯೊಳಗಾಗಿ ಮಾಡುವುದಕ್ಕೆ ಸಾಧ್ಯವೇ? ಕಾವೇರಿ ಬೇಸಿನ್‌ನಲ್ಲಿ ಇರುವ ಯೋಜನೆಗಳನ್ನು ಪೂರ್ಣಮಾಡಲು ಅಡ್ವಾನ್ಸ್ ಹಣ ದೊರೆಯದಿದ್ದರೆ ಅಸಾಧ್ಯ. ಸರಕಾರವೂ ಪ್ರಯತ್ನಮಾಡಬೇಕು, ಕೇಂದ್ರ ಸರಕಾರದ ನೆರವೂ ಬೇಕು. ನಾವು ಬ್ಯಾಂಕುಗಳ ರಾಷ್ಟ್ರೀಕರಣದ ಫಲವನ್ನೂ ಪಡೆಯಬೇಕು. ಅನುಭವಿಗಳ ಸಹಾಯವನ್ನೂ ಉಪಯೋಗಿಸಿಕೊಳ್ಳಬೇಕು, ಸರಕಾರ ಪಕ್ಷಾತೀತವಾಗಿ ಈ ಮಸೂದೆಯನ್ನು ನೋಡಿ ಇರುವ ಬೃಹತ್ ಸಮಸ್ಯೆಯನ್ನು ಬಗೆಹರಿಸಲು ಎಲ್ಲರ ಸಹಾಯ ಸಹಕಾರ ಪಡೆದು ಮುಂದುವರೆಯಬೇಕು. ಇಂದು ಈ ಬಿಲ್ಲು ಮಹತ್ವಪೂರಿತವಾದುದು. ಇಂದು ನಮ್ಮ ಇರಿಗೇಷನ್ ಪೊಟೆನ್‌ಷಿಯಾಲಿಟಿ ಸೇಕಡ 11 ಇದೆ, ಅದು 25ಕ್ಕೆ ಬರುವುದು ಕಷ್ಟ. ಕಾವೇರಿ ಮತ್ತು ಕೃಷ್ಣ ಬೇಸಿನ ವಿಚಾರ ಬಂದಾಗ ಭಿನ್ನಭಾವನೆ ಇಲ್ಲ ಎಂದು ಕೆಲವರು ಹೇಳಿದರು. ಕೃಷ್ಣ ಬೇಸಿನ್ ತುಮಕೂರಿನವರೆಗೂ ಬಂದಿದೆ. ಸುಮಾರು 4 –5 ಜಿಲ್ಲೆಗಳನ್ನು ಬಿಟ್ಟು ಎಲ್ಲಾ ಜಿಲ್ಲೆಗಳನ್ನೂ ಅದು ಆವರಿಸಿದೆ. ಕೃಷ್ಣ ಬೇಸಿನ್ ಮತ್ತು ಕಾವೇರಿ ಬೇಸಿನ್ ಎಂದು ಭಿನ್ನಾಭಿಪ್ರಾಯವಿಲ್ಲ. ಎಲ್ಲಾ ಪ್ರಾಜೆಕ್ಟುಗಳೂ ಆಗಬೇಕು. ಈ ಎಲ್ಲಾ ಆಗಬೇಕಾದರೆ ಜವಾಬ್ದಾರಿ ಇರುವವರು, ಮುಖ್ಯ ಮಂತ್ರಿಗಳು, ಮಂತ್ರಿಮಂಡಲ ಅಥವ ಇಡೀ ಸಭೆ ಒಬ್ಬ ಮನುಷ್ಯನ ಹಾಗೆ ಪ್ರಯತ್ನ ಪಟ್ಟರೆ 1974 ರೊಳಗೆ ಕಾವೇರಿ ಬೇಸಿನ್‌ನ ಪ್ರಾಜೆಕ್ಟುಗಳನ್ನು ಮುಗಿಸಬಹುದು. ಹಾಗೆಯೇ ಕೃಷ್ಣ ಬೇಸಿನ್‌ನ ಯೋಜನೆಗಳನ್ನೂ ತೆಗೆದು ಕೊಳ್ಳಬಹುದು. ಆದುದರಿಂದ ಪಕ್ಷ ಜೇದವಿಲ್ಲದೆ ಎಲ್ಲರೂ ಕೂಡ ಈ ಮಸೂದೆಯನ್ನ ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಮಸೂದೆಯನ್ನು ಮಂಡಿಸುವಾಗ ನಮ್ಮ ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿಗಳು ತಮ್ಮ ವಾಕ್‌ಚಾತುರ್ಯದಿಂದ ಇದರ ಮಹತ್ವ ಬಹಳವಿದೆ, ಇದಕ್ಕೆ ತಮ್ಮ ಸಹಕಾರ ಬೇಕು ಎಂದು ಹೇಳಿದರು. ಅವರ ಮಾತನ್ನು ಕೇಳಿದವರು ಎಷ್ಟು ಸೊಗಸಾಗಿದೆ, ಬಹಳ ಉಪಯುಕ್ತವಾದ ಬಿಲ್ಲು, ಇದಕ್ಕೆ ವಿರೋಧ ಎಲ್ಲಿಂದ ಬರುತ್ತದೆ ಎಂದು ಭಾವಿಸಿರಬಹುದು. ಈಗ ಮಾತನಾಡಿದ ಯುವಕ ಮಿತ್ರರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಅವರ ವಾಗ್ಮೈವಾವ ಭಾಷಣ ಕೇಳಿದಾಗ ನಾನು ವಿರೋಧ ಮಾಡುವುದು ಸರಿಯೇ ಎಂದು ನನಗನ್ನಿಸಿತು ನೋಡುವುದಕ್ಕೆ ಬಹಳ ಸುಂದರವಾಗಿದೆ ಹಣ್ಣು, ಆದರೆ ಒಳಗೆ ಹುಳ ತುಂಬಿದೆ, ಈಗ ನುಮಾರು ಏಳೆಂಟು ವರ್ಷಗಳಿಂದೇನು ನಡೆದಿದೆ ಎಂಬುದನ್ನು ವಿವರವಾಗಿ ಹೇಳಿದರು ಅವರಿಗೆ ಶಕ್ತಿಯಿಲ್ಲ, ಇದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅಡಳಿತ ಸೂತ್ರ ವಹಿಸಿರುವವರಿಗೆ, ದೇಶದ ಭವಿಷ್ಯ ನಿರ್ಮಾಣ ಮಾಡುವವರಿಗೆ ಶಕ್ತಿಯಿದ್ದರೆ ಹೀಗೆ ನಮ್ಮನ್ನು ಮಾತನಾಡಿಸುವುದಕ್ಕೆ ಬರುತ್ತಿರಲಿಲ್ಲ. ಒಂದು ಸಂತೋಷದ ಸಂಗತಿಯೇನೆಂದರೆ ಸತ್ಯ ನುಡಿದರು, ನಾನು ಅಧಿಕಾರದಲ್ಲಿದ್ದರೆ ಇಷ್ಟು ಹೊತ್ತಿಗೆ ಹಾರಂಗಿ, ಕಂಬದಕಡ ಯೋಜನೆಗಳು ಇದುವರೆಗೆ ಕಾರ್ಯಗತವಾಗದೆ ಇರುತ್ತಿರಲಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಪರ ರಾಜ್ಯದ ಪಿತೂರಿಯಿಂದ ಕೈಬಿಡಬೇಕಾಯಿತೆಂದು ಹೇಳಿದರು. ಈಗ ನಿಜಾಂಶ ಹೇಳುತ್ತೇನೆ. ಇದು ಹಾಗಲ್ಲ; ನಮ್ಮ ರಾಷ್ಟ್ರದ ಮುಖಂಡರ ಪಿತೂರಿಯಿಂದಲೇ ಆಗಿರುವುದು. ಇದಕ್ಕೆ ಅವಕಾಶ ಕೊಟ್ಟಿದ್ದೇಕೆ? ಇದು ಅತ್ಯಂತ ಕಡೆಯ ಮಾತು. ಈಗ ನಿಮಗೆ ಬೇಕಾಗಿರುವುದೇನು? ಪರಮಾವಧಿ ಎಂದರೆ ಒಂದು ಎಕರೆಗೆ 500 ರೂಪಾಯಿ ಹಾಕಬಹುದು, ಇಲ್ಲದಿದ್ದರೆ 300 ಅಥವಾ 200 ರೂಪಾಯಿ ಹಾಕಬಹುದು. ಮೈಸೂರು ರಾಜ್ಯದಲ್ಲಿ ಕಾವೇರಿ ಬೇಸಿನ್‌ನಲ್ಲಿ ಎಲ್ಲಾ ಪ್ರಾಜೆಕ್ಟುಗಳನ್ನೂ ತೆಗೆದುಕೊಂಡರೆ 6 ಲಕ್ಷ ಎಕರೆಯಮೇಲೆ ನೀರಾವರಿಯಾಗುವುದಿಲ್ಲ, 6 ಲಕ್ಷ ಎಕರೆಗೆ ಪರಮಾವಧಿ 500 ರೂಪಾಯಿ ಪ್ರಕಾರ ಹಾಕಿದರೆ 30 ಕೋಟಿ ಆಯಿತು. ನಮಗೆ ಬೇಕಾಗಿರುವುದು 120 ಕೋಟಿ. ಪ್ರಾಜೆಕ್ಟುಗಳನ್ನು ಮಾಡಿ 4 ವರ್ಷವಾಯಿತು. ಈಗ ಸಂಬಂಧಪಟ್ಟ ರೈತರನ್ನು ನದೆಬಡಿದು ವಸೂಲುಮಾಡೋಣ, ಸಹಕಾರ ಮಾಡಿ ಎಂದು ಹೇಳುವಾಗ ಆ ಸಹಕಾರಕ್ಕೆ ಅರ್ಹರಾಗಬೇಕು, ನಂಬಿಕೆಗೆ ಅರ್ಹರಾಗಬೇಕು ಅರ್ಹತೆ ಮತ್ತು ನಂಬಿಕೆ ಇಲ್ಲದೆ ಸಹಕಾರ ಕೊಡುವುದು ಹೇಗೆ? ವಸೂಲುಮಾಡುವುದಿಲ್ಲ, ಆಸ್ತಿ ಜಪ್ತಿಮಾಡಿ ನಾವು ಸಾಲ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದು ಸರಿಯೇ ಎಂದು ಕೇಳುವುದು. ಇಂದು ಎಲ್ಲಾ ಸೇರಿ 30 ಕೋಟಿ

ಬರಬಹುದು. ಅಷ್ಟು ಬಂದರೆ ಇನ್ನು ನಾಲ್ಕೂವರೆ ವರ್ಷಗಳಲ್ಲಿ 6 ಲಕ್ಷ ಎಕರೆಗೆ ನೀರು ಕೊಡುತ್ತೇವೆಂದು ಜನರಿಗೆ ಭರವಸೆ ಕೊಡಬೇಕು. ಇಲ್ಲಿ ಹಾಗೆ ಮಾಡುತ್ತೇವೆ, ಮೈನೂರು ಹಕ್ಕನ್ನು ಕಾಪಾಡುತ್ತೇವೆ ಎಂದು ಆಶ್ವಾಸನೆ ಕೊಡುವವರು ಯಾರು ?

Sri H. SIDDAVEERAPPA.—Here is a challenge thrown. If the Union Government gives that assurance we will agree to this Bill. Is there no Government here to agree to it ?

Sri H. M. CHANNABASAPPA.—Absolutely there is no Government.

Sri K. H. SRINIVASA.—The Government is not run by challenges. It is here to meet the real challenges.

Sri H. M. CHANNABASAPPA.—Ten years ago I had forecast what will happen. I had told the Hon. Member's Leader and the Chief Minister three years ago. ನೋಡಿ ಕಾಂಟ್ರ್ಯಾಕ್ಟ್ ಕರೆದಿದ್ದೇವೆ, ನಾಳೆ ಬೆಳಿಗ್ಗೆ ಮಾಡುತ್ತೇವೆ, ಅಷ್ಟರ್ ಕೃಷ್ಣ ಆಯಿತು, ನಂಬಿ ಎಂದು ಹೇಳಿದರು. ನಂಬಿ ಕೆಟ್ಟೆವು. ಈ ಅಪದ್ಧ ನುಡಿಯುವುದರಿಂದ ರೈತರಿಗೆ ನಿಮ್ಮಲ್ಲಿ ನಂಬಿಕೆ ಇಲ್ಲವಾಗಿದೆ. ಜನರಿಗೆ ನಿಮ್ಮಲ್ಲಿ ನಂಬಿಕೆಯಿಲ್ಲ. ಒಂದು ತೊಟ್ಟು ನೀರೂ ಕೂಡ ಕೃಷ್ಣ ಬೇಸಿನ್‌ನಿಂದ ಬಿಡುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದರು. ನಾಗಾರ್ಜುನ ಸಾಗರದ ಕೆಲಸ ಮುಗಿದು ಆಗಲೇ ನೀರು ಪೆನ್ನಾರ್ ಮತ್ತು ಗೋದಾವರಿ ಪ್ರಾಂತದಲ್ಲಿ ಹರಿಯಿತು. ಅವರು ಇನ್ನೂ ಹೇಳುತ್ತಿದ್ದಾರೆ—ಬಿದ್ದರೂ ಮಾಸೆ ಮಣ್ಣಾಗಿಲ್ಲ ಎಂದು. ಈ ರೀತಿ ಪದೇಪದೇ ನಿರಾಧಾರವಾದ, ಅನತ್ಯವಾದ ಆಶ್ವಾಸನೆ ಕೊಟ್ಟರೆ ಪ್ರಯೋಜನವಿಲ್ಲ.

ಆದ್ದರಿಂದ ತಾವು ಸ್ವಲ್ಪ ತಮ್ಮ ಹೃದಯವನ್ನು ನೋಡಿಕೊಳ್ಳಬೇಕು, ಪಕ್ಷಾತೀತವಾಗಿ ನಡೆಯಬೇಕೆನ್ನುವುದನ್ನು ನಾನು ಖಂಡಿತ ಒಪ್ಪುತ್ತೇನೆ. ಇದು ಒಂದು ಪಕ್ಷ, ಪರಪಕ್ಷಗಳ ಮೇಲೆ ಮಾತನಾಡುವುದು ಅಲ್ಲ, ದೇಶದ ಭವಿಷ್ಯವನ್ನು ನಿರ್ಮಾಣ ಮಾಡುವುದು. ಪಕ್ಷ, ಪರಪಕ್ಷಗಳ ಆಧಾರವನ್ನು ಇಟ್ಟುಕೊಂಡು ಇವತ್ತಿನವರೆಗೂ ಕೆಲಸ ಮಾಡಿ ಮಾಡಿ ನೀವು ನಂಬಿಕೆಗೆ ಪಾತ್ರರಾಗಿಲ್ಲ, ಇದೇ ಕಾವೇರಿ ನದಿ ನೀರಿನ ವಿಷಯವನ್ನು 5 ವರ್ಷಗಳ ಹಿಂದೆ ಮಾತನಾಡುವಾಗ ಏನು ಹೇಳಿದ್ದಿರಿ ? ಒಂದು ತೊಟ್ಟು ನೀರನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಿರಿ. ಆಗಲೇ ಎಷ್ಟೋ ವರ್ಷಗಳು ಉರುಳಿ ಹೋದವು. ಏಕೆ ಈ ಹೆನ್ನೆಲೆಯನ್ನು ಕೊಚ್ಚೆನಂದರೆ ನಮ್ಮಿಂದ ಸಹಕಾರ ಕೇಳುತ್ತಾ ಇದ್ದೀರಿ, ಅದಕ್ಕೆ ನಿಮಗೆ ಅರ್ಹತೆ ಇದೆಯೇ ಎಂಬುದನ್ನು ನೀವೇ ತುಲನೆ ಮಾಡಿರಿ. ಬಹುಶಃ ಈ ಅಸೆಂಬ್ಲಿ ಪ್ರಾರಂಭವಾದಂದಿನಿಂದಲೂ, ಹೋದ ಅಸೆಂಬ್ಲಿಯಿಂದಲೂ ಕೂಡ ಹೇಳುತ್ತಾ ಇದ್ದೇನೆ :'ಹೋಯಿತು, ಹೋಯಿತು, ಕಾವೇರಿ ನೀರು ಹೋಯಿತು, ಎಚ್ಚರಿಕೆ ಎಚ್ಚರಿಕೆ'' ಅಂತ ಮುಖ್ಯಮಂತ್ರಿಗಳ ಒಂದು ರೋಮವೂ ಅಲ್ಲಾಡಲಿಲ್ಲ. ಹಣ ಕೊಡ್ರಿ, ಹಣ ಕೊಡ್ರಿ, ಎಲ್ಲಿಂದ ಕೊಡುವುದು ! ಏಕೆ ಕೊಡುವುದು ! ಮುಳುಗಿ ಹೋಗಿರತಕ್ಕ ಕೈಗಾರಿಕೆಗೆ ಶ್ರೀಮಾನ್ ರಾಜಶೇಖರ ಮೂರ್ತಿಗಳಿಗೆ ನಿನ್ನೆ 46 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಿರಿ ಎಂದು ಕೊಟ್ಟು ಬಿಟ್ಟೆವು. ರೆಂಕೊನಲ್ಲಿ ಪ್ರತಿವರ್ಷ ನಷ್ಟವಾಗುತ್ತಾ ಇದೆ. ಬಡ ಬೋರೇಗೌಡನ ಹಣವನ್ನು ಈ ಕೈಗಾರಿಕೆಗಳಿಗಾಗಿ ಹಾಳು ಮಾಡಿ ಇವತ್ತು ನೀರಿನ ಸಂಖ್ಯಲಭ್ಯ ಮಾಡಿಕೊಡುವುದಕ್ಕೆ ಹಣಕೊಡಿ ಎಂದು ಕೇಳುವುದಕ್ಕೆ ತಮಗೆ ಯಾವ ಮಾರಲ್ ರೈಟ್ ಇದೆ ? ಎಂದು ಕೇಳುತ್ತಾ ಇದ್ದೇನೆ. 90 ಕೋಟಿ ರೂಪಾಯಿ ಸರ್ಕಾರ ಒದಗಿಸಬೇಕು, 30 ಕೋಟಿ ರೂಪಾಯಿ ರೈತರಿಂದ ಕೇಳುತ್ತಾ ಇದ್ದೀರಿ. ಮೊದಲು ನಾಲ್ಕೂವರೆ ವರ್ಷದಲ್ಲಿ ನೀವು ಖರ್ಚುಮಾಡಬೇಕಾಗಿರುವ 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಂತರ 30 ಕೋಟಿ ರೂಪಾಯಿ ಬರಬೇಕಾದ್ದಕ್ಕೆ ನೀವೆಲ್ಲ ತ್ಯಾಗ ಮಾಡಿರಿ ಎಂದರೆ ಎಲ್ಲರೂ ಸಂತೋಷದಿಂದ ಕೊಡುತ್ತಾರೆ, ಅದು ಬಿಟ್ಟು ಆ ಬಡಪಾಯಿಗಳನ್ನು ನೀವೆ ಕೊಟ್ಟರೇ ಕೆಲಸ ಪ್ರಾರಂಭ ಮಾಡುವುದು ಅಂತ ಯಾವ ಬಾಯಿಂದ ಹೇಳುತ್ತೀರಿ ? ನೀವು ಮಾಡುತ್ತೀರಿ ಎಂಬ ನಂಬಿಕೆಯಾದರೂ ಏನು ಇದೆ ? ಈ ವಿಷಯವನ್ನು ತಮಗೆ ಹೇಳುವಾಗ ಬಹಳ ದುಃಖವಾಗುತ್ತದೆ. ನಮ್ಮ ದೇಶದಲ್ಲಿ ಬಡ ಬೋರೇಗೌಡ ತನ್ನ ಆಸ್ತಿಯನ್ನು ಈಡುಮಾಡಿ ಅದರಿಂದ ಹಣ ತಂದುಕೊಟ್ಟರೆ ಅಣೆಗಳನ್ನು ಕಟ್ಟುತ್ತೇವೆ ಎಂದರೆ ಇದಕ್ಕಿಂತಲ್ಲೂ ದುಃಖದ ವಿಷಯ ಬೇರೊಂದಿಲ್ಲ. ಪ್ರಥಮ ಜವಾಬ್ದಾರಿ ನಿಮ್ಮದು. ಪ್ರತಿದಿನ ಅನ್ನ ಬಟ್ಟೆ ಒದಗಿನತಕ್ಕ ಅನ್ನದಾತ ಅವನು, ಅವನ ಹತ್ತಿರ ಹಣ ಕೇಳಬೇಕಾದ್ದು ಅನಾವಶ್ಯಕ, ಒಂದು ವೇಳೆ ಅವನೇ ತ್ಯಾಗ ಮಾಡುತ್ತೇನೆ ಎಂದರೆ ಮಾಡಲಿ. ಅವನ ತ್ಯಾಗಕ್ಕೆ ನ್ಯಾಯಾದಂತಹ ಪ್ರತಿಫಲ ಅವನಿಗೆ ದೊರಕುತ್ತದೆಯೇ ಎಂಬುದನ್ನು ಇವತ್ತು ನಾವು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ತಮ್ಮಲ್ಲಿ ಅರಿಕೆ

(SRI H. M. CHANNABASAPPA)

ಮಾಡುವುದು ಇಷ್ಟೆ, ಬೆಂಗಳೂರು ಪಟ್ಟಣದ ಜನರೆಲ್ಲಾ ಸುಖವಾಗಿ ಇರಲಿ ಅಂತ ಹೇಳಿ ರಾಜ್ಯದ ಬೊಕ್ಕಸದಿಂದ ಹಣ ತೆಗೆದು ಮನೆಗಳನ್ನು ಕಟ್ಟಿ ರೈತಾಪಿ ಜನರ ಸುಖವನ್ನುಂಟುಮಾಡಲು ಅವರಿಂದ ಹಣವನ್ನು ಸಾಲವಾಗಿ ಕೇಳುತ್ತಾ ಇರುವುದು ಸರ್ವಥಾ ನ್ಯಾಯವಾದುದಲ್ಲ. ನೀರು ಕೊಡುತ್ತೇವೆ, ಅಡ್ವಾನ್ಸ್ ಕೊಡಿ ಎಂದು ಕೇಳುತ್ತಾ ಇರುವುದು ಯಾವ ಧರ್ಮ! ನಾಚಿಕೆ ಯಾಗುವುದಿಲ್ಲವೇ ಎಂದು ಕೇಳುತ್ತಾ ಇದ್ದೇನೆ. ಈಗಾಗಲೇ 450 ಕೋಟಿ ರೂಪಾಯಿಗಳ ಸಾಲಗಾರರಾಗಿದ್ದೇವೆ, 15 ಕೋಟಿ ರೂಪಾಯಿ ಬಡ್ಡಿ ಕೊಡುತ್ತಾ ಇದ್ದೇವೆ. ಈಗ ಕೇಳುತ್ತಾ ಇದ್ದೀರಿ, ನಮ್ಮ ಸಾಲ ತೆಗೆದುಕೊಳ್ಳತಕ್ಕ ಶಕ್ತಿ ಮುಗಿದು ಹೋಯಿತು, ಯಾರೂ ದುಡ್ಡು ಕೊಡುವಲ್ಲ, ನಿಮ್ಮ ಆಸ್ತಿ ಈಡುಮಾಡಿ ಕೊಡಿ ಎಂದು ಕೇಳತಕ್ಕ ಸ್ಥಿತಿಗೆ ಬಂದಿದ್ದೀರಿ. 30 ಕೋಟಿ ರೂಪಾಯಿಗಳ ಡಿಬೆಂಚರ್ ಸಾಲ ಕೇಳಿದರೆ ಕೊಡುವುದಿಲ್ಲ ಎಂದು ಯಾರಾದರೂ ದೇಶದಲ್ಲಿ ಹೇಳಿದರೆ ನೀವು ಈ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ರಾಯುಕಲ್ಲು.

ಹಣವಿಲ್ಲದೇ ಕೆಲಸವಾಗಬೇಕೆಂದು

6.00 P.M.

ಹೇಳುವವನು ನಾನಲ್ಲ. ಹಣ ಬೇಕು. 120 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಾಲ್ಕೂವರೆ ವರ್ಷಗಳಲ್ಲಿ 6 ಲಕ್ಷ ಎಕರೆ ಜಮೀನನ್ನು ತರೀ ಬೇಸಾಯಕ್ಕೆ ಅಳವಡಿಸಬೇಕಾಗಿದ್ದರೆ ಇಷ್ಟು ಹಣ ಬೇಕೆಂದು ಹೇಳುತ್ತಿದ್ದಾರೆ. ಇಷ್ಟು ಪ್ರೊಗ್ರೆಸ್ ಮಾಡಬೇಕಾದರೆ ಸರ್ಕಾರದವರು 90 ಕೋಟಿ ರೂಪಾಯಿಗಳನ್ನೂ ರೈತರು 30 ಕೋಟಿ ರೂಪಾಯಿಗಳನ್ನೂ ಒದಗಿಸಿಕೊಳ್ಳಬೇಕು, ಈ 30 ಕೋಟಿ ರೂಪಾಯಿಗಳನ್ನು ಒದಗಿಸಲು ರೈತರು ತಮ್ಮ ಜಮೀನುಗಳನ್ನು ಆಧಾರಮಾಡಿ ಸಾರಾಸೋಲ ಮಾಡಿ 30 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಆದರೆ ಇದು ಸರಿಯಾದ ಪ್ರಪೋಜಲ್ ಅಲ್ಲ. ಅದಕ್ಕೆ ನಾನು ಹೇಳುತ್ತೇನೆ—ಸರ್ಕಾರದವರು ಮೊದಲು ಅವರಲ್ಲಿರತಕ್ಕ 90 ಕೋಟಿ ರೂಪಾಯಿ ಗಳನ್ನು ಖರ್ಚುಮಾಡಲಿ, ಕೆಲಸವನ್ನು ಪ್ರಾರಂಭಮಾಡಿ ಅವರಲ್ಲಿರತಕ್ಕ ಆ ಹಣವೆಲ್ಲಾ ಮುಗಿಯಲಿ. ಆನಂತರ ಅವರು ನಾವಿಷ್ಟು ಕೆಲಸಮಾಡಿದ್ದೇವೆ, ಅದನ್ನು ಮುಂದುವರಿಸಿ ಪೂರ್ಣಮಾಡುವುದಕ್ಕೆ ಇನ್ನಿಷ್ಟು ಹಣಬೇಕು ಅದನ್ನು ನೀವು ಕೊಡಬೇಕೆಂದು ಅವರು ಕೇಳಲಿ. ಆಗ ನಾನೇ ಈ ಸಭೆಯಲ್ಲಿ ಎಲ್ಲರ ಕೈಕಾಲುಗಳನ್ನು ಹಿಡಿದು ಸರ್ಕಾರದವರ ಡಿಮ್ಯಾಂಡಿಗೆ ಅವರ ಒಪ್ಪಿಗೆಯನ್ನು ಕೊಡಿಸು ತ್ತೇನೆ. ಹಾಗೆ ಅವರು ಇನ್ನೂ ಕೆಲಸವನ್ನು ಪ್ರಾರಂಭವನ್ನೇ ಮಾಡದೆ ರೈತರು ಮೊದಲು ಅವರಲ್ಲಿರತಕ್ಕ ಆಸ್ತಿಯನ್ನು ಪರಭಾರೆ ಮಾಡಿ 30 ಕೋಟಿ ಕೊಡಲಿ ಎಂದು ಕೇಳತಕ್ಕದ್ದು ಧರ್ಮ ವಾದ್ದಲ್ಲ. ಇವರ ಕೈಗೆ ಮೊದಲು ದುಡ್ಡನ್ನು ಕೊಟ್ಟರೆ ಇವರು ನಾಳೆ ಕೆಲಸವನ್ನು ಪ್ರಾರಂಭ ಮಾಡುತ್ತಾರೆಂಬ ಭರವಸೆಯಾರಿಗಿದೆ? ಇವರ ಕೈಗೆ ಹೇಗೆ ದುಡ್ಡನ್ನು ಕೊಡುವುದು ಎಂಬ ಅಪನಂಬಿಕೆ ಜನರಲ್ಲಿ ಬಾರದಿರಲಿ. ಹಾಗೆ ಇವರು ಕೆಲಸಗಳನ್ನು ನಡೆಸಬೇಕು. ಸರ್ಕಾರದವರು ನಡೆಸತಕ್ಕ ಕೆಲಸಗಳೆಲ್ಲ ಬಹಳ ಅಸಮರ್ಪಕವಾಗಿವೆ. ಆದ್ದರಿಂದ ನಮ್ಮ ಕೈಗೆ ಹಣವನ್ನು ಕೊಡುವುದಕ್ಕೆ ನಮಗೆ ಅನುಮಾನವಿವೆ. ಹಾರಂಗಿ ಪ್ರಾಜೆಕ್ಟ್‌ನ್ನು ಕೈಗೊಳ್ಳುತ್ತೇವೆಂದು ಜನರಿಗೆ ಭರವಸೆಯನ್ನು ಕೊಟ್ಟು ಇಲ್ಲಿಗೆಷ್ಟು ವರ್ಷಗಳಾಯಿತು? ಸರ್ಕಾರದವರೇನಾದರೂ ಇಷ್ಟು ವರ್ಷಗಳು ಕಳೆದಿದ್ದರೂ ಒಂದು ಹೆಜ್ಜೆಯನ್ನೇನಾದರೂ ಮುಂದಕ್ಕಿಟ್ಟಿದ್ದಾರೆಯೇ? ಹೇಮಾವತಿ ಪ್ರಾಜೆಕ್ಟ್ ಪ್ರಾರಂಭವಾಗುವುದು ಇನ್ನೂ ಎಂದೋ. ಇನ್ನು ಕಬಿನೀ ಪ್ರಾಜೆಕ್ಟಿನ ವಿಷಯ ಬಹಳ ದುಸ್ತರವಾಗೇ ಇದೆ. ಶ್ರೀಮಾನ್ ನಂಜೇಗೌಡರು ಹೇಳಿದರು. ಆದರೆ ಈ ಸರ್ಕಾರಕ್ಕೆ ಹಿಂದೆ ಫೈನಲೈಜಾಗಿದ್ದಂಥ ಕಾರ್ಯಗಳನ್ನು ಕೈಗೊಳ್ಳುವುದಕ್ಕೇ ಶಕ್ತಿಯಿಲ್ಲದಿರುವಾಗ ಇವರಿನ್ನು ಬಾಕಿ ಕಾರ್ಯಗಳನ್ನು ಮಾಡತಕ್ಕ ಅವಕಾಶವೆಲ್ಲಿ ಬಂತು? ಹಿಂದೆ ಮಂಜೂರಾಗಿದ್ದಂಥ 8—10 ಕೆಲಸಗಳೇ ಇನ್ನೂ ಆಗಿಲ್ಲ. ಇನ್ನು ಹೊಸವಾಗಿ ಕೆಲಸಗಳನ್ನು ಮಾಡತಕ್ಕ ಅಸಕ್ತಿ ಇವರಿಗೆಲ್ಲಿಂದ ಬರಬೇಕು? ಇನ್ನು ಒಂದೆರಡು ವರ್ಷಗಳು ಕಳೆಯುವುದರೊಳಗೇ ಶ್ರೀ ವೀರೇಂದ್ರಪಾಟೀಲರು ಗುಲ್ಬರ್ಗದಲ್ಲಿ ಇರುತ್ತಾರೆ ಅಥವಾ ರಾಯುಚೂರಲ್ಲಿ ಇರುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಆಗ ನೀವೆಲ್ಲಾ ಎಲ್ಲಿರುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಈ ದಿವಸ ಈ ಸಭೆಯಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ ಇಲ್ಲಿಗೆ 9 ವರ್ಷಗಳ ಕೆಳಗೆ ಒಂದು ಸಣ್ಣ ಕೆರೆಯನ್ನು ಕಟ್ಟಿಸಲು ಅದಕ್ಕೆ ಮಂಜೂ ರಾತಿ ದೊರೆತಿತ್ತು. ಅದನ್ನು ಹೈಕೋರ್ಟಿನವರೂ ಕೂಡ ಮಂಜೂರು ಮಾಡಿದ್ದರು. ಆ ಕೆಲಸ ಇನ್ನೂ ಈ ಘಳಿಗೆಯವರೆಗೂ ಆಗಿಲ್ಲ. ಅದನ್ನು ಪ್ರಾರಂಭ ಮಾಡಿಲ್ಲ. ಇನ್ನು ಹಾರಂಗಿ ಪ್ರಾಜೆಕ್ಟಿನ ವಿಷಯಕ್ಕೆ ಬಂದರೆ ಅದು ಮೇಲಾಗಬೇಕು, ಅದು ಕೆಳಗಾಗಬೇಕು. ಅದು ಅಲ್ಲಿ

ಆಗಬೇಕು, ಅದು ಇಲ್ಲಿ ಆಗಬೇಕು; ಎನ್ನತಕ್ಕ ಆ ರಾಜಕೀಯದಲ್ಲೇ ಅದನ್ನು ಮೂರೆ ಗೊತ್ತಾಗಿದೆ. ಸರ್ಕಾರದವರಲ್ಲಿ ಹಣವಿರಲಿಲ್ಲ ಎಂದರೆ ಏತಕ್ಕೆ ಇವರು ಚೆಂಡರನ್ನು ಕಾರ್ ಪಾರ್ ಮಾಡಿದರು? ಚೆಂಡರನ್ನು ಕರೆದು, ಅದು ಬಂದ ನಂತರ ಹಣವಿಲ್ಲ ಎಂದು ಚೆಂಡರನ್ನು ಕ್ಯಾನ್‌ಸಲ್ ಮಾಡಿದ್ದಾರೆ. ಹೀಗೆರ್ಲಾ ಇವರು ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಇವರಿಗೆ ಆಗರೇಬೇಕು. ಇವರು ಮಾಡಿದಂಥ ಪಾಪ ಕರ್ಮಗಳು ಇವರನ್ನು ಬಿಡುವುದಿಲ್ಲ. ಪ್ರಾಯಶ್ಚಿತ್ತವಾದ ನಂತರ ಆಗ ಇವರು ಸರಿಹೋಗಬಹುದು. ಈಗತಾನೇ ಒಬ್ಬ ಮಾನ್ಯ ಸದಸ್ಯರು ಹೇಳಿದರು ಕೆ. ಆರ್. ನಗರದಲ್ಲಿ ಒಂದು ಭಾರಿ ನಭೆಯನ್ನು ಮಾಡಿದ್ದರೆಂದೂ ಅಲ್ಲಂತಕ್ಕ ಜನರೆರ್ಲಾ ನೀವು ಹಾರಂಗಿ ಪ್ರಾಜೆಕ್ಟನ್ನು ನಿರ್ಮಿಸಿಕೊಡಿ ಸರ್ಕಾರಕ್ಕೆ ಎಷ್ಟು ದುಡ್ಡು ಬೇಕಾದರೂ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳಿದರೆಂದು ಎಂದು ತಿಳಿಸಿದರು. ನನಗೂ ಕೆ. ಆರ್. ನಗರದ ಮೂಲೆ ಮೂಲೆಗಳೆಲ್ಲಾ ಗೊತ್ತು. ಈ ದಿವಸ ಅಧ್ಯಕ್ಷರು ಅವರ ವೇಷವನ್ನು ಮರೆಸಿಕೊಂಡು ನನ್ನ ಜೊತೆಯಲ್ಲಿ ಬರಲಿ, ನಾನು ವೇಷವನ್ನು ಮರೆಸಿಕೊಂಡು ತಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ತಾವೇ ೨ ಜನರನ್ನು ಈ ವಿಚಾರದಲ್ಲಿ ಸ್ಪಾಂಡ್ ಮಾಡಿನೋಡಿ. ಆಗ ಅವರೇನು ಹೇಳುತ್ತಾರೆಂಬುದು ತಮಗೆ ವೇದ್ಯವಾಗುತ್ತದೆ. ಅಲ್ಲಿ ಒಬ್ಬರೇನಾದರೂ ಹಣಕೊಡುತ್ತೇವೆಂದು ಹೇಳಿದ ಪಕ್ಷದಲ್ಲಿ ನಾನು ತಾವು ಹೇಳತಕ್ಕ ಯಾವ ಶಿಕ್ಷೆಗೂ ಸಿದ್ಧ; ಇಂಥ ನಾಟಕವನ್ನೆರ್ಲಾ ಏಕೆ ಆಡುತ್ತಿದ್ದಾರೋ ತಿಳಿಯದು. ಅಲ್ಲಿರತಕ್ಕ ಜನರ ಬಾಳೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಒಂದಾವರ್ತಿ ನಾನು ಅಲ್ಲಿದ್ದಾಗ ಕೆಲವು ಜನರು ಒಂದು ಪ್ರಿಂಟ್ ಮಾಡಿದ್ದ ಕಾಗದವನ್ನು ತಂದು ನನಗೂ ತೋರಿಸಿದ್ದರು. ಕೆರೆಕಟ್ಟುವುದಕ್ಕೆ ಹಣವನ್ನು ಕಲೆಕ್ಟ್ ಮಾಡಬೇಕೆಂದು ಅದರಲ್ಲಿತ್ತು. ಆದರೆ ನಾನು ಅವಕ್ಕೆರ್ಲಾ ಒಪ್ಪಲಿಲ್ಲ. ಆಗ ನಾನು ಆ ಜನರಿಗೆ ಹೇಳಿದೆ ಇಂಥ ವಿಚಾರಗಳಲ್ಲಿ ಹೀಗೆ ರಾಜಕೀಯವನ್ನು ಬೆರಸಬೇಡಿ ಎಂದು. ಸರ್ಕಾರದವರು ತಮ್ಮ ಬಾಬತು ಹಣವನ್ನು ಮೊದಲು ಖರ್ಚುಮಾಡಬೇಕು. ಅಲ್ಲಿ ಮುಕ್ಕಾಲು ಕೆಲಸವಾದರೆ ಆ ನಂತರ ಇನ್ನುಳಿಯತಕ್ಕ ಕಾಲುಭಾಗದ ಕೆಲಸಕ್ಕೆ ಜನರ ದುಡ್ಡನ್ನು ನಾನು ವಸೂಲ್ಮಾಡಿ ಕೊಡುತ್ತೇನೆ. ಇದಕ್ಕೇಕೆ ಇಷ್ಟೆರ್ಲಾ ನಾಟಕ? ಸರ್ಕಾರದವರು ಮುಕ್ಕಾಲು ಭಾಗದ ಕೆಲಸವನ್ನು ಮಾಡಿದ ನಂತರ ನಾವು ನಮ್ಮ ಭಾಗದ ಹಣವನ್ನು ಕೊಡುವುದಿಲ್ಲವೆಂದರೆ ಅದಕ್ಕಿಂತ ದೊಡ್ಡ ದೇಶದ್ರೋಹ ಮತ್ತೊಂದಿಲ್ಲ. ಆದರೆ ಹಾಗೆ ಕೆಲಸವನ್ನು ಮಾಡುವುದಕ್ಕೆ ಮುನ್ನ ಸರ್ಕಾರದವರ ಕೈಗೆ ದುಡ್ಡನ್ನು ಕೊಡುವುದಕ್ಕೆ ನಮಗೆ ನಂಬಿಕೆಯಿಲ್ಲ. ಇಲ್ಲಿಯವರೆಗೂ ಆಗಿರತಕ್ಕ ಡೇಂಜರೇ ಸಾಕು. ಯಾವುದೇ ಒಂದು ಪ್ರದೇಶದಲ್ಲಿ ನೂರಕ್ಕೆ 66 ಜನರು ಒಂದು ಕಾಮಗಾರಿಯನ್ನು ಪ್ರಾರಂಭಮಾಡುವುದಕ್ಕೆ ಒಪ್ಪಿದ್ದಾರೆ ಎಂದರೆ ಹಾಗೆ ಸರ್ಕಾರದವರು ಒಂದು ನೋಟಿಫಿಕೇಷನ್ ಹೊರಡಿಸಿಬಿಟ್ಟರೆ ಇನ್ನು ಆ ಭಾಗದಲ್ಲಿರತಕ್ಕ ಶೇಕಡ 33 ಭಾಗದ ಜನರು ಒಪ್ಪಲಿ—ಒಪ್ಪದೆ ಇರಲಿ, ಆ ಶೇಕಡ 66 ರಷ್ಟು ಜನ ಒಪ್ಪಿರುವಾಗ ಇವರೇಕೆ ಆ ಕೆಲಸವನ್ನು ಪ್ರಾರಂಭ ಮಾಡಬಾರದು! ಆದರೆ ಇಲ್ಲದ ಸಲ್ಲದ ವಿಷಯಗಳನ್ನು ಏಕೆ ಹೇಳಬೇಕು? ನಿಮಗೆ ಬೇಕು ಎಂದರೆ ಬ್ಯಾಂಕಿನವರು ಸಾಲ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂದು ಜನರನ್ನು ಏಕೆ ವಂಚನೆ ಮಾಡುತ್ತಿದ್ದಾರೋ ಕಾಣೆ. ಈ ಮಸೂದೆಯಲ್ಲಿ ಎಲ್ಲಿ ಬ್ಯಾಂಕಿನವರು ಸಾಲ ಕೊಡುತ್ತಾರೆ ಎಂದು ತಿಳಿಸಿದೆ ಹೇಳಲಿ? ಈ ಬಿಲ್ ಪಾಸಾದ ಕೂಡಲೆ ಒಂದು ನೋಟಿಫಿಕೇಷನ್ ಹೊರಡಿಸಿ ಬಿಡುತ್ತಾರೆ. ಆದರೆ ಈಗಾಗಲೇ ಅನೇಕ ರೈತರು ತಮ್ಮ ತಮ್ಮ ಭೂಮಿಕಾಣಿಗಳನ್ನು ಆಧಾರ ಮಾಡಿದ್ದಾರೆ. ಸಾಲ ಎತ್ತಿದ್ದಾರೆ. ಹಾಗೆ ಸಾಲ ಎತ್ತಿರತಕ್ಕ ಭೂಮಿಯ ಮೇಲೆ ಮತ್ತೆ ಯಾರು ಸಾಲ ಕೊಡುತ್ತಾರೆ! ಹಾಗೆ ತಮ್ಮ ಆಸ್ತಿಗಳನ್ನು ಬೇರೆಯವರಿಗೆ ಅಡವಾನ ಮಾಡದಿರುವ ಜನರು ನೂರಕ್ಕೆ 5—6 ಇದ್ದರೆ ಪುಣ್ಯವಾಯಿತು. ಈ ದಿವಸ ರೂರಲ್ ಇಂಡೆಬೆಡ್ ಆಕ್ಟ್ ನೋಡಲಿ. ಅವರು ಆಧಾರ ಮಾಡಿಕೊಂಡಿರತಕ್ಕ ಭೂಮಿಯ ಮೇಲೆ ಯಾರು ಸಾಲ ಕೊಡುತ್ತಾರೆ! ಈ ರೂರಲ್ ಇಂಡೆಬೆಡ್ ಸಾಲ ಎಷ್ಟಿದೆ ಎಂಬುದನ್ನೇನಾದರೂ ಸರ್ವೆ ಮಾಡಿಸಿದ್ದಾರೆಯೇ! ಇಂಥಾ ಜಮೀನುಗಳ ಮೇಲೆ ಯಾರೂ ಸಾಲ ಕೊಡುವುದಿಲ್ಲ. ಮತ್ತೆ ಈ ಕಾನೂನು ಪ್ರಕಾರ ಪ್ರಯತ್ನಮಾಡುವುದು, ಕೆಲವು ಯೋಜನೆಗಳನ್ನು ಎಕ್ಸ್‌ಪ್ಯಾನ್‌ಷನ್ ಮಾಡುವುದು, ಅದು ಆರ್ಥ ಆಗಿರುವುದು—ಇವೆಲ್ಲವೂ ಇದರಲ್ಲಿ ಬರುತ್ತದೆ. ಕಪಿನಿ ಪ್ರಾಜೆಕ್ಟ್ ಆರ್ಥ ಆಗಿದೆಯೆಂದು ಹೇಳುತ್ತೀರಿ. ನಾಳೆ ನೀವೇ ಬರುತ್ತೀರಿ. ಕಾನೂನು ಪಾಸ್ ಮಾಡಿದ್ದೇವೆ. ನಾವು ಅದನ್ನು ನೋಟಿಫೈ ಮಾಡಿದ್ದೇವೆ. ಸೇಕಡ 66ರಷ್ಟು ಜನರೂ ದುಡ್ಡು ಕೊಡುವುದಕ್ಕೆ ಮುಂದೆ ಬರಲಲ್ಲ, ಆದ್ದರಿಂದ ಅದರ ಬಗ್ಗೆ ಮುಂದಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಲ್ಲವೆಂದು ಹೇಳುತ್ತೀರಿ. ಇದು ನಿಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಕುಹಕ ಮಾರ್ಗವೆಂದು ನಾನು ಹೇಳ ಬಯಸುತ್ತೇನೆ. ಈ ಜವಾಬ್ದಾರಿ ನಿಮ್ಮ ತಲೆಯ ಮೇರೆ ಇದೆ. ನಿಮ್ಮ ಭಾಗದ ಕೆಲಸವನ್ನು ಮಾಡಿ. ಸಾಲದೆ ಇರುವ ಕಾಲದಲ್ಲಿ ನಮ್ಮ ಮನಸ್ಸನ್ನು ಒಲಿಸಿಕೊಳ್ಳುವುದು ಯೋಗ್ಯ. ಅಷ್ಟು ಏನಹ ಈಗ ಬಂದು

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ಅಂಗೈಯಲ್ಲಿ ಕೊಡಿ ಎಂದು ಹೇಳಿದರೆ ನಮ್ಮನ್ನು ಆ ರೀತಿ ಕೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಪ್ರಾಜೆಕ್ಟುಗಳು ಆಗುವುದಿಲ್ಲ. ಕಾವೇರಿನದಿ ಪಾತ್ರದಲ್ಲಿ ಏನೇನು ಕಟ್ಟಬೇಕಾಗಿದೆ, ಕೃಷ್ಣಾನದಿ ಪಾತ್ರದಲ್ಲಿ ಏನೇನು ಕಟ್ಟಬೇಕಾಗಿದೆ ಎಂಬುದಕ್ಕೆ ಯಾವುದಾದರೂ ನಿಮ್ಮಲ್ಲಿ ಯೋಜನೆಗಳಿವೆಯೇ, ನೋಡೋಣ, ತೋರಿಸಿ. ಸುಮ್ಮನೆ ರೈತರು ಯಾರೂ ಮುಂದೆ ಬರಲಿಲ್ಲ, ಹಣವಿದ್ದಷ್ಟು ಮಾಡುತ್ತೇವೆಂದು ಹೇಳುತ್ತೀರಿ. ನೀವು ಖರ್ಚುಮಾಡುವ ಹಣವನ್ನು ಖರ್ಚುಮಾಡಿ. ನೇಕಡ 95ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಪೂರೈಸಿ. ಆಮೇಲೆ ಎಷ್ಟು ಹಣ ನಿಂತಿದೆ, ಎಷ್ಟು ಕೆಲಸ ಬಾಕಿ ಇದೆಯೆಂದು ಗೊತ್ತಾದಮೇಲೆ ಆಗ ನಿಮಗೆ ಸಹಕಾರ ಕೊಡುತ್ತೇವೆ. ಅದನ್ನು ಬಿಟ್ಟು ಇವತ್ತು ನಮ್ಮ ಸಹಕಾರ ಕೇಳುವುದು ಸಾಧುವಾದುದಲ್ಲ. ಇದನ್ನು ಮಾನ್ಯ ಶ್ರೀ ಸಿದ್ಧಯ್ಯನವರೂ ಸಹ ಒಪ್ಪುತ್ತಾರೆ. He is a realist; he is a man, who always goes by his conscience.

ಮತ್ತೊಂದು ವಿಷಯ. ಈ ದೇಶದಲ್ಲಿರತಕ್ಕ ಮುಕ್ಕಾಲುಪಾಲು ಜನರ ಆಗು ಹೋಗುಗಳನ್ನು ಅವಲಂಬಿಸಿರತಕ್ಕದ್ದು ಇದು. ಇವತ್ತು ನಾವು ನಿಮಗೆ ಪುರಸ್ಕಾರ ಕೊಟ್ಟು ನಾವು ಶಾಸನ ಮಾಡಿದ್ದೇವೆಂದು ತಿಳಿಸಿದರೆ ವಾಸ್ತವವಾಗಿ ನಿಮಗೆ ಪುರಸ್ಕಾರ ಬರಲಿಕ್ಕಿಲ್ಲ. ನನಗೆ ಗೊತ್ತಿರುವ ಹಾಗೆ ಪಾರ್ಟಿಯಲ್ಲಿಯೂ ಕೂಡ ಈ ವಿಷಯವನ್ನು ಚರ್ಚೆಮಾಡಿಲ್ಲ. ಏನೋ ಅವಸರದಲ್ಲಿ ತಂದು ಈ ಸಭೆಯಲ್ಲಿ ಮಂಡಿಸಿದ್ದಾರೆ. ಇಡೀ ದೇಶಕ್ಕೆ ಮಹತ್ವವಾದಂಥ ಕಾನೂನನ್ನು ಪಾರ್ಟಿಯಲ್ಲಿ ಕೂತು ಅದರ ಆಗುಹೋಗುಗಳನ್ನು ಮೊದಲೇ ಚರ್ಚೆಮಾಡಿದ್ದರೆ ಬಹಳ ಚೆನ್ನಾಗಿತ್ತು.

Sri K. H. SRINIVASA.—It has been discussed and we have taken a decision.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈಗ ಬ್ಯಾಂಕಿನಿಂದ ಹಣ ಕೊಡಿಸುತ್ತೇವೆಂದು ಹೇಳಿದ ಬಗ್ಗೆ ಒಂದು ಅಕ್ಷರವೂ ಇವರಲ್ಲಿ ಹೇಳಲಿಲ್ಲ. ಬ್ಯಾಂಕಿಗೆ ನನ್ನನ್ನು ಕರೆದುಕೊಂಡು ಹೋಗಿ. ಈಗಾಗಲೇ ಎಷ್ಟೋ ಜನ ರೈತರು ಸಾಲ ಮಾಡಿದ್ದಾರೆಂಬುದನ್ನು ತೋರಿಸುತ್ತೇನೆ. ನೀವು ಆ ಸಾಲವನ್ನು ವಜಾ ಮಾಡಿಸಿ ಬೇರೆ ಸಾಲ ಕೊಡಿಸುತ್ತೀರಾ? ಎರಡನೆಯದಾಗಿ ಅವರಿಗೆ ಆಗಿರುವ ಸಾಲದ ಜೊತೆಗೆ ನೀವು 20–30 ವರ್ಷಗಳ ಸಾಲ ತೋರಿಸಿದರೆ, ಅಲ್ಲಯುವರೆಗೂ ಅವರು ಖರ್ಚು ಪೆಚ್ಚುಗಳಿಗೆ ಹೋಗುವ ಹಾಗಿಲ್ಲ. ಅದಕ್ಕೂ ಹಣ ಕೊಡಿಸುತ್ತೀರಾ? ಈಗ ಒಂದು ಕಡೆ ಸೊಕ್ಕೆಟ್ಟಿಗಳು ಹಾಳಾಗುತ್ತಿವೆ. ಅಂದಮೇಲೆ ಅಲ್ಲಿಂದ ಏನು ಹಣ ಕೊಡಿಸುತ್ತೀರಿ! ಪಾರ್ಲಮೆಂಟರಿ ಅಫೇರ್ಸ್ ಮಿನಿಸ್ಟರ್ ಯಾವುದಾದರೂ ಕನ್‌ಸ್ಟ್ರಕ್ಟಿವ್ ಸಜೆಷನ್ ಕೊಟ್ಟರೆ ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ನಮ್ಮ ಹತ್ತಿರ ಭಿಕ್ಷೆ ಬೇಡಬೇಡಿ. ಕೆಲಸಗಳನ್ನು ಪ್ರಾರಂಭ ಮಾಡಿ. ಒಟ್ಟು 150 ಕೋಟಿ ರೂಪಾಯಿಗಳಲ್ಲಿ 30 ಕೋಟಿ ರೂಪಾಯಿಗಳನ್ನು ನಾವು ಕೊಡಲಿಕ್ಕೆ ಸಿದ್ಧ. ಸೇಕಡ 95 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಾವೇರಿ ಪಾತ್ರದಲ್ಲಿರತಕ್ಕ ಹಲವಾರು ಪ್ರಾಜೆಕ್ಟ್‌ಗಳನ್ನು ಒಂದು ಸ್ಟೇಜಿಗೆ ತೆಗೆದುಕೊಂಡು ಬನ್ನಿ. ಆಗ ಅದನ್ನು ನಾವು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಎರಡನೆಯದಾಗಿ, ಇನ್ನು ಬೆಟರ್‌ಮೆಂಟ್ ಲೆವಿ ಏನಿದೆಯೋ ಇವನ್ನು ಬೆಂಗಳೂರು ಪಟ್ಟಣವಲ್ಲ ವಿಧಿಸಿದ್ದಿರಾ? ಇಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹಣವನ್ನು ಹಾಕಿರುತ್ತೀರಿ. ಪಟ್ಟಣದ ಪಕ್ಕದಲ್ಲಿರುವ ಭೂಮಿಗೆ ಒಂದಕ್ಕೆ ನೂರರಷ್ಟು ಬೆಲೆ ಇರುವಾಗ ಯಾವ ರೀತಿ ಅದರ ಬಗ್ಗೆ ಸರ್ಕಾರದ ಬೊಕ್ಕಸಕ್ಕಾಗಿ ಹಣ ಕೂಡಿಸಲು ಬೆಟರ್‌ಮೆಂಟ್ ಲೆವಿಯನ್ನು ಹಾಕಿದ್ದೀರಿ! ಸರ್ಕಾರದ ಬೊಕ್ಕಸದಿಂದ ಖರ್ಚುಮಾಡಿ ಅನೇಕ ಸೌಧಗಳನ್ನು ಕಟ್ಟುತ್ತೀರಿ. ಅಂದಮೇಲೆ ಬೆಂಗಳೂರು ಪಟ್ಟಣದ ಪಕ್ಕದಲ್ಲಿರುವ ಜಮೀನುಗಳಿಗೆ ಒಂದು ಎಕರೆಗೆ ಮೂರು—ನಾಲ್ಕು ಸಾವಿರ ರೂಪಾಯಿಗಳಷ್ಟು ಬೆಲೆ ಇದೆ. ಏತಕ್ಕೋಸ್ಕರ ಅವೇ ರೀತಿ ಬೆಟರ್‌ಮೆಂಟ್ ಲೆವಿ ಹಾಕಬಾರದು?

Sri K. PUTTASWAMY.—It is really a constructive suggestion and it will be considered.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದನ್ನು ಮೊದಲು ಮಾಡಿ ನಮ್ಮ ಹತ್ತಿರ ಬನ್ನಿ. ಆಮೇಲೆ ಯಾರು ನಿಮಗೆ ಫೇರಾವೋ ಮಾಡುತ್ತಾರೆ, ಯಾರು ಪ್ರಪರ್ ಮಾಡುತ್ತಾರೆ, ನೋಡೋಣ.

ಆದ್ದರಿಂದ ನಾನು ಆರಿಕೆ ಮಾಡಿಕೊಳ್ಳುವುದೇನೆಂದರೆ, ಈ ಬೆಟರ್‌ಮೆಂಟ್ ಲೆವಿಯನ್ನು ಬೆಂಗಳೂರು ಪಟ್ಟಣದಲ್ಲಿ ಸೈಟುಗಳನ್ನು ಮಾಡಿಕೊಂಡು ಯಾರು ಕುಬೇರರಾಗಿದ್ದಾರೋ, ಅವರಿಂದ

ವಸೂಲು ಮಾಡಬೇಕು. ಎರ್ಲ್ಲೋ ಕೆರೆ ಕಟ್ಟಿಕೊಂಡು, ಬೆಳೆಯನ್ನು ಬೆಳೆಯತಕ್ಕ ರೈತನಿಗೆ ಹಾಕ ಬೇಡಿ. ಅವನು ಕಷ್ಟಪಟ್ಟು ಹೆಚ್ಚು ಬೆಳೆ ಬೆಳೆಯುತ್ತಿದ್ದಾನೆ. ತಾವು ಹಾರಂಗಿಯನ್ನು ಪ್ರಾರಂಭ ಮಾಡಿದ್ದೀರಿ. ಎಷ್ಟು ವರ್ಷದ ಕಾಲದ ಮೇಲೆ ಅದನ್ನು ಬದರಾವಣೆ ಮಾಡಿದ್ದೀರಿ, ಏನು ಕಾರಣ ಅದಕ್ಕೆ? I refuse to mortgage my land. What is it that you are going to do? ಮತ್ತೆ ಇವನು ಹಣ ಕೊಡದೆ ಹೋದರೆ ನೀವು ಮಾತಕ್ಕದ್ದು ಏನು? 66 ಜನರು ಬರೆದು ಕೊಡುತ್ತಾರೆ, ನೀವು ಪ್ರಾರಂಭ ಮಾಡುತ್ತೀರಿ. ನಿಮ್ಮ ನೀತಿ ಇವತ್ತು ಸರಿಯಾಗಿಲ್ಲ. Let the hon. Revenue Minister tomorrow declare that we have nationalised the lands. 66 ಜನರು ಬರೆದು ಕೊಡುತ್ತಾರೆ. ಇನ್ನು 33 ಜನರ ಮೇರೆ ಏನು ಮಾಡುತ್ತೀರಿ? ನಾನು ಹೇಳುತ್ತೇನೆ ಬೇಡ ಎಂದು. ಆಬಾದು ಮಾಡದೆ ಹೋದರೆ ಏನು ಮಾಡುತ್ತೀರಿ ಎಂದು ಹೇಳುವ ಪ್ರೊವಿಜನ್ ಇಲ್ಲ ಇಲ್ಲ. ಮತ್ತು ಅವನನ್ನು ಫೋರ್ಸ್ ಮಾಡುವುದಕ್ಕೆ ಅಧಿಕಾರ ಎಲ್ಲ. ನನ್ನ ಭೂಮಿಯನ್ನು ಹ್ಲೆಜ್ ಮಾಡುತ್ತೇನೆ. ಮತ್ತೆ ಕೇಳುವುದಕ್ಕೆ ಯಾವ ಅಧಿಕಾರ ಇದೆ? ಇವತ್ತು ಒಂದು ನಾಲ್ಕು ಎಕರೆ ಭೂಮಿ ಒಬ್ಬನಿಗೆ ಇರುತ್ತದೆ. ಅದು ಖುಷ್ಕಿ ಭೂಮಿ. ಅದನ್ನೆಲ್ಲಾ ಆಧಾರವಾಗಿ ಕೊಟ್ಟು ಬಿಟ್ಟು, ನಾಳೆ ಅವನು 50 ರೂಪಾಯಿ ಸಾಲ ಬೇಕಾದರೂ ಯಾರ ಹತ್ತಿರ ಹೋಗಬೇಕು?

ಶ್ರೀ ಕೆ. ಪುಟ್ಟಸ್ವಾಮಿ.—ನಿಮ್ಮ ತಾಲ್ಲೂಕಿನವರೇ ಹೇಳಿದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮಗೆ ಏನು ವರದಿ ಬಂದಿದೆಯೋ ಅದು ದೂರವಾದ ಮಾತು. ಇದು ಯಾವ ಕಡೆಯಿಂದ ಬಂತು ಎಂಬುದನ್ನು ನಾನು ಬಲ್ಲೆ. ಯಾರೋ, ಏನೋ ಹೇಳಿದರಂತೆ, ಇದನ್ನು ಕಾನೂನು ಮಾಡಿಬಿಡಿರಿ ಎಂದು. ಆದ್ದರಿಂದ ಈ ಕಷ್ಟಪರಂಪರೆಗಳಿಗೆ ರೈತನನ್ನು ಈಡು ಮಾಡಬೇಡಿ. ಈಗ ಇರತಕ್ಕ ಸಾಲದ ಹೊರೆಯೇ ಅವನಿಗೆ ಸಾಕು. ನಿಮಗೆ ವಾಸ್ತವವಾಗಿ ಕಷ್ಟ ಬಂದಾಗ ನಮ್ಮ ಹತ್ತಿರ ಬನ್ನಿ, ನಾವು ಸಹಕಾರ ಕೊಡುತ್ತೇವೆ. ನಿಮಗೆ ನಮ್ಮ ನಂಬಿಕೆ ಇಲ್ಲ. ಇದರ ಬಗ್ಗೆ ಅನೇಕರು ನಿನ್ನೆಯ ದಿನ ಕೂಡ ಹೇಳಿದ್ದಾರೆ. ನೀವು ಅನೇಕ ದುರ್ವ್ಯಯಗಳನ್ನು ಮಾಡುತ್ತಿದ್ದೀರಿ. ಅದನ್ನೆಲ್ಲಾ ಶೇಖರಣೆ ಮಾಡಬೇಕು. ಮತ್ತು ಇಂಥ ಕೆಲಸಗಳಿಗೆ ಉಪಯೋಗಿಸಬೇಕು. ನಮ್ಮ ಪಿತ್ರರು ಏನು ಸೂಚನೆ ತಂದಿದ್ದಾರೆ, ಇದನ್ನು ಸಾರ್ವಜನಿಕ ತಿಳಿವಳಿಕೆಗೆ ಹಾಕಬೇಕೆಂದು, ಅದು ಹಾಗೆಯೇ ಆಗಬೇಕು. ಇವತ್ತು ರೈತರಿಗೆ ಏನೂ ಗೊತ್ತಿರುವುದಿಲ್ಲ. ಇದು ಸಾರ್ವಜನಿಕ ತಿಳಿವಳಿಕೆಗೋಸ್ಕರ ಅವರ ಅಭಿಪ್ರಾಯವನ್ನು ಕ್ರೋಢೀಕರಿಸುವುದಕ್ಕೋಸ್ಕರವಾಗಿ, ಮೂರು ತಿಂಗಳ ಅವಕಾಶ ಕೊಟ್ಟು, ಪಬ್ಲಿಷ್ ಮಾಡಿ, ಆಗ ಅವರ ಅಭಿಪ್ರಾಯ ಏನು ಬರುತ್ತದೆ, ಅದನ್ನು ಮುಂದಿಟ್ಟುಕೊಂಡು ರಚನಾತ್ಮಕವಾದ ಕೆಲಸ ವನ್ನು ಮಾಡೋಣ. ಅದಲ್ಲದೆ ಸುಮ್ಮನೆ ಹಣವನ್ನು ಕೊಡಬೇಕು ಎಂದು ಹೇಳಿದರೆ ಸರಿಯಾಗಿರು ವುದಿಲ್ಲ. ಮಾನ್ಯ ಸಿದ್ದಯ್ಯನವರೂ ಇದನ್ನು ಒಪ್ಪಿಕೊಂಡರು. ಎಲ್ಲರೂ ಸಹಕರಿಸಿ, ಈ ತೊಂದರೆ ಗಳನ್ನು ನಿವಾರಣೆ ಮಾಡುವುದಕ್ಕೆ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿ, ಆ ಮೇಲೆ ವಾಸ್ತವವಾಗಿ ತೊಂದರೆ ಇಲ್ಲವೆಂದು ಕಂಡುಬಂದರೆ, ಆಮೇರೆ ಯೋಚನೆ ಮಾಡೋಣ. ಆದ್ದರಿಂದ ಇಲ್ಲಿರತಕ್ಕ ಎರ್ಲಾ ನದಸ್ಯರಿಗೂ ನನ್ನ ವಿನಂತಿ ಏನೆಂದರೆ, ಇವತ್ತು ಬಡ ಜನರಿಗೆ ಸರ್ಕಾರದವರು ಬಹಳ ತೊಂದರೆ ಕೊಟ್ಟಿದ್ದಾರೆ, ಮತ್ತು ಅನೇಕ ಕಾನೂನುಗಳನ್ನು ಇದರ ಬಗ್ಗೆ ಮಾಡಿದ್ದಾರೆ; ಇದರಿಂದ ಇದನ್ನು ಮೂರು ತಿಂಗಳು ಅವಧಿಗೆ ಸಾರ್ವಜನಿಕ ತಿಳಿವಳಿಕೆಗೋಸ್ಕರ ಕಳಿಸಬೇಕು ಮತ್ತು ಈಗ ಇರತಕ್ಕಂತಹ ರೀತಿಯಲ್ಲಿ ಒಪ್ಪುವುದಕ್ಕಾಗುವುದಿಲ್ಲವೆಂದು ರೈತಾಪಿ ಜನರ ಪರವಾಗಿ ಹೇಳು ತ್ತೇನೆ, ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-30 P.M.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದೆ ತಂದಿರತಕ್ಕ ಮೈಸೂರು ಇರಿಗೇಷನ್ ರೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿ ಬ್ಯೂಷನ್ ಅಂಡ್ ವಾಟರ್ ರೇಟ್ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದನ್ನು ನಾನು ಪ್ರಬಲವಾಗಿ ವಿರೋಧಿಸುವುದಲ್ಲದೆ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ಆಶೆ ಪಡುತ್ತೇನೆ. ಸರ್ಕಾರದವರು ಮೊನ್ನೆ ತಾನೆ 39 ಕೋಟಿ 42 ಲಕ್ಷ ರೂಪಾಯಿಗಳ ನಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನ್ನು ಈ ಸಭೆಯ ಮುಂದೆ ತಂದು ಅವ್ಯವಸ್ಥೆಯಲ್ಲರತಕ್ಕ ಸಹಕಾರ ಸಂಘಗಳಿಗೂ, ಶಿಥಿಲವಾಗಿರತಕ್ಕ ಕೈಗಾರಿಕೆಗಳಿಗೂ ಎರಡೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇವೊತ್ತು ಈ ವಸೂಲಿಯನ್ನು ತಂದು ರೈತನ ಜಮಾನನ್ನು ಬ್ಯಾಂಕಿಗೆ ಗಿರವಿ ಮಾಡುತ್ತೇವೆ, ಹಣವನ್ನು ತೆಗೆದುಕೊಂಡು ಪ್ರಾಜೆಕ್ಟನ್ನು ಕಟ್ಟುತ್ತೇವೆ ಎಂದರೆ ಅದು ಎಷ್ಟರಮಟ್ಟಿಗೆ ನಮಂಜಸ

(ಶ್ರೀ ಬಿ. ದೊಡ್ಡಬೋರೇಗೌಡ)

ವಾಗುತ್ತದೆಯೋ ಗೊತ್ತಿಲ್ಲ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರ ಜಮೀನು, ಆಸ್ತಿಪಾಸ್ತಿಗಳು ಶೇಕಡಾ 90 ರಷ್ಟು ಜಿರ್ಗಾ ಬ್ಯಾಂಕುಗಳಿಗೆ, ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಮತ್ತು ಖಾಸಗೀ ಲೇವಾದೇವಿ ಮಾಡತಕ್ಕ ಸಾಹುಕಾರರಿಗೆ ಆಧಾರ ಮತ್ತು ಭೋಗ್ಯ ಆಗಿವೆ. ಇಂಥಾ ಒಂದು ಸಂದರ್ಭದಲ್ಲಿ ಸರ್ಕಾರದವರು ಈ ಒಂದು ಮನೂದೆಯನ್ನು ತಂದಿದ್ದಾರಲ್ಲಾ ಎಂದು ನಾನು ಪ್ರಥೆ ಪಡಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಸುಮಾರು 4—5 ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ತಿನ್ನುವುದಕ್ಕೆ ಅನ್ನವಿಲ್ಲ. ಜನಗಳು ತಮ್ಮ ದನಕರುಗಳನ್ನೂ ಮತ್ತು ಕುರಿಗಳನ್ನೂ ಮಾರಿಕೊಂಡಿದ್ದಾರೆ. ಆಳುವ ಪಕ್ಷದವರೂ ಸಹ ಗ್ರಾಮಾಂತರ ಪ್ರದೇಶಗಳ ಜನತೆಯ ಕಷ್ಟಸುಖಗಳನ್ನು ನೋಡಿದ್ದರೂ ಕೂಡ ಇಂಥಾ ಒಂದು ಮನೂದೆಯನ್ನು ಈ ಸಭೆಯುಮುಂದೆ ತರುವುದಕ್ಕೆ ನಲಕೆ ಮಾಡಿರುವುದು ಜನತೆಯ ದುರ್ದೈವ ಎಂದು ನಾನು ಹೇಳುತ್ತೇನೆ. ಇದು ಕೂಸು ಹುಟ್ಟುವುದಕ್ಕಿಂತ ಮುಂಚೆಯೇ ಕುಲಾವಿಯನ್ನು ಹೊಲಿಸಿಕೊಂಡಂತಾಗಿದೆ. ಈಗಾಗಲೇ ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್‌ಗಳಾದ ಹಾರಂಗಿ, ಕಂಬದಕಡ, ಹೇಮಾವತಿ, ಲಕ್ಷ್ಮಣತೀರ್ಥ, ಮಂಚನಬೆಲೆ, ಕಪಿನಿ ಮುಂತಾದುವುಗಳ ಎಸ್ಟಿಮೇಟುಗಳನ್ನು ಏನಾದರೂ ಮಾಡಿದ್ದಾರೆಯೇ! ಆ ಪ್ರಾಜೆಕ್ಟುಗಳಲ್ಲಿ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ. ಎಷ್ಟು ಗ್ರಾಮಗಳಿಗೆ ನೀರು ಒದಗಿಸಬಹುದು, ಎಷ್ಟು ಕೋಟಿ ರೂಪಾಯಿಗಳು ಆ ಪ್ರಾಜೆಕ್ಟಗಳಿಗೆ ಬೇಕಾಗುತ್ತದೆ, ಎಷ್ಟು ವರ್ಷಗಳಲ್ಲಿ ಆ ಪ್ರಾಜೆಕ್ಟುಗಳನ್ನು ಮುಗಿಸುತ್ತಾರೆ ಎನ್ನತಕ್ಕಂಥ ಯೋಜನೆಗಳನ್ನು ಸರ್ಕಾರದವರು ಇದುವರೆಗೂ ತಯಾರು ಮಾಡಿಲ್ಲ. ಈ ಪ್ರಾಜೆಕ್ಟುಗಳಿಗೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಸರ್ಟಿಫಿಕೇಟ್ ತೆಗೆದು ಕೊಂಡಿಲ್ಲ. ಈಗ 15 ತಿಂಗಳಿಂದ ಮಂಚನಬೆಲೆ ಪ್ರಾಜೆಕ್ಟಿಗೆ ಕಲ್ಲು ಹಾಕಿಸುವ ಕೆಲಸವನ್ನು ಮಾತ್ರ ಮಾಡಿದ್ದೀರಿ. ಈಗ ಒಂದು ಪ್ರಾಜೆಕ್ಟನ್ನು ಕಟ್ಟುವುದಕ್ಕೆ 66 ಜನ ದುಡ್ಡು ಕೊಡುತ್ತೇವೆಂದು ಹೇಳಿ, ಅದರಲ್ಲಿ 64 ಜನ ದುಡ್ಡು ಕೊಟ್ಟು ಇನ್ನು ಇಬ್ಬರು ದುಡ್ಡು ಕೊಡುವುದಕ್ಕೆ ಒಪ್ಪಿಕೊಳ್ಳದಿದ್ದರೆ ಪ್ರಾಜೆಕ್ಟ್ ಮಾಡುವುದಿಲ್ಲ ಎಂದು ಈ ಮನೂದೆಯ ಪ್ರಕಾರ ಇದೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳಿ 65 ಜನ ರುಜು ಹಾಕಿ ಇನ್ನು ಇಬ್ಬರು ರುಜು ಹಾಕದಿದ್ದರೆ ಅಂಥಾ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ತಯಾರು ಇಲ್ಲ. ಈಗ ಉತ್ತರ ಕರ್ನಾಟಕಕ್ಕೆ ಸಂಭಂಧಪಟ್ಟಹಾಗೆ ಮಲಪ್ರಭಾ, ಘಟಪ್ರಭಾ, ಕಾಳಿ, ತುಂಗಭದ್ರಾ, ಕೃಷ್ಣಾ ಮೇಲ್ದಂಡೆ, ಗೋದಾವರಿ ಈ ಪ್ರಾಜೆಕ್ಟುಗಳ ಎಸ್ಟಿಮೇಟು ಆಗಿವೆಯೇ? ಆ ಯೋಜನೆಗಳಿಂದ ಎಷ್ಟು ಎಕರೆ ನೀರಾವರಿಯಾಗುತ್ತದೆ? ಅವುಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಎಷ್ಟು ಹಣ ಖರ್ಚಾಗುತ್ತದೆ, ಆ ಯೋಜನೆಗಳಿಗೆ ಕೇಂದ್ರದಿಂದ ಮಂಜೂರಾತಿ ದೊರಕಿದೆಯೇ? ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ನೀರಾವರಿ ಯೋಜನೆಯನ್ನೂ ಕಾರ್ಯಗತ ಮಾಡುತ್ತೀರಾ! ಈಗ ಸರ್ಕಾರದವರು ಏನೊಂದು ಮನೂದೆಯನ್ನು ಇಲ್ಲಿ ತಂದಿದ್ದಾರೆಯೋ ಇದು ಅವಿವೇಕದ ಕೆಲಸ ಎಂದು ಹೇಳಿದರೆ ತಪ್ಪಾಗಲಾರದು. ನಿಮಗೆ ಅಧಿಕಾರಮದ ಧನಮದ ಜಾಸ್ತಿಯಾಗಿದೆಯೋ ಏನೋ ಕಾಣುವುದಿಲ್ಲ. ಇವರಿಗೆ ಜನತೆಯ ಕಷ್ಟಸುಖಗಳು ಏನು ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಜನತೆಯ ಕಷ್ಟಸುಖಗಳನ್ನು ಸ್ವಲ್ಪ ಕಣ್ಣು ಬಿಟ್ಟು ನೋಡಬೇಕೆಂದು ನಾನು ಹೇಳುತ್ತೇನೆ. ಈಗ 10 ವರ್ಷಗಳಿಂದ ಪ್ರಯತ್ನ ಮಾಡಿ ಕಪಿನಿ ಪ್ರಾಜೆಕ್ಟ್ ಅನ್ನು ಪ್ರಾರಂಭ ಮಾಡಿದರು. ಅದಕ್ಕೆ ಈ ಶಾಸನ ಸಭೆಯವರು 320 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡುವ ಪ್ರಯತ್ನವನ್ನು ಸರ್ಕಾರದವರು ಮಾಡಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಈ ಕಪಿನಿ ಯೋಜನೆಯನ್ನು ತಯಾರು ಮಾಡಿದಂತಹ ತಜ್ಞರು, ಇಂಜಿನಿಯರು ಈ ಯೋಜನೆಯಿಂದ 16 ಟಿ. ಎಂ. ಸಿ. ಎಫ್. ಟಿ. ನೀರು ಸಿಕ್ಕುತ್ತದೆ, ಒಂದು ಲಕ್ಷ 20 ಸಾವಿರ ಎಕರೆ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ; ಮತ್ತು ಈ ಯೋಜನೆಗೆ 21¼ ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಈಗ 2-3 ಮೂರು ವರ್ಷಗಳಿಂದಲೂ ಈ ಯೋಜನೆಗೆ ವರ್ಷಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದರಲ್ಲಿ 5 ಲಕ್ಷ ಕಲ್ಲು ಹಾಕುವುದಕ್ಕೆ ಹೋಗುತ್ತಿದೆ. ಇನ್ನು 20 ಲಕ್ಷ ರೂಪಾಯಿಗಳು ಕಂಟ್ರಾಕ್ಟರಿಗೆ ಹೋಗುತ್ತದೆ. ಇದೇರೀತಿ ಈ ಪ್ರಾಜೆಕ್ಟಿಗೆ ಹಣವನ್ನು ಒದಗಿಸಿದರೆ ಇನ್ನು 80 ವರ್ಷಗಳಾದರೂ ಈ ಯೋಜನೆಯು ಮುಗಿಯುವುದಿಲ್ಲ. ಈ ಯೋಜನೆಯನ್ನು ಅದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೇವೆ ಎಂದು ಹೇಳತಕ್ಕ ಧೈರ್ಯ ನಿಮಗೆ ಇದೆಯೇ? ಈಗ ಇವರು ಯಾವ ಯಾವ ಪ್ರಾಜೆಕ್ಟುಗಳಿಗೆ ಕಲ್ಲು ಹಾಕಿದ್ದಾರೆಯೋ ಅವು ಅಲ್ಲಯೇ ಹಾಗೆಯೇ ಉಳಿದಿವೆ. ನಿಮ್ಮ ಜೀವಮಾನದಲ್ಲಿಯೇ ಈ ಪ್ರಾಜೆಕ್ಟುಗಳನ್ನೆಲ್ಲಾ ಕಾರ್ಯಗತ ಮಾಡುವುದಿಲ್ಲ. ಮುಂದಿನ ಪೀಳಿಗೆ ನಿಮಗೆ ಶಾಪ ಹಾಕುತ್ತದೆ. ಈ

ಸರ್ಕಾರ ದಿವಾಳಿಯಾಗಿದೆ ರೈತರು ಸಹಾಯ ಮಾಡಿ ನಿಮ್ಮ ಜಮೀನನ್ನು ಬ್ಯಾಂಕುಗಳಿಗೆ ಆಧಾರ ಥೋರ್ಯ ಮಾಡಿ ಪ್ರಾಜೆಕ್ಟ್ ಕಟ್ಟುವುದಕ್ಕೆ ಸರ್ಕಾರಕ್ಕೆ ಹಣ ಕೊಡಿ ಎಂದು ಕೇಳಿದರೆ ಇದು ಯಾವ ನೀತಿ? ಇವೊತ್ತು ಎಲ್ಲಾ ಮಕ್ಕಳಿಗೂ ಹೈಸ್ಕೂಲುವರೆಗೆ ಮುಫತ್ತಾದ ವಿದ್ಯಾಭ್ಯಾಸವನ್ನು ಒದಗಿಸುತ್ತೇವೆಂದು ಹೇಳುತ್ತೀರಿ, ಒಬ್ಬ ಹುಡುಗನನ್ನು, ಒಬ್ಬ ಮಗಳನ್ನು ಹೈಸ್ಕೂಲಿಗೆ ಕಾನ್‌ವೆಂಟಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕಾದರೆ ಒಂದು ತಿಂಗಳಿಗೆ 9 ರೂಪಾಯಿ ಮತ್ತು 7 ರೂಪಾಯಿ ಫೀಜು ಕೊಡಬೇಕು. ಈ ರೀತಿಯಿಂದ ರೈತ ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಎಷ್ಟೋ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸಹಕಾರ ಸಂಘಗಳಿಂದ ರೈತರ ಅಭ್ಯುದಯ ಮತ್ತು ದೇಶದ ಕಲ್ಯಾಣವಾಗುತ್ತದೆ ಎಂದು ಸರ್ಕಾರದವರು ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ನಿಜವಾಗಿಯೂ ಈ ಸಹಕಾರ ಸಂಘಗಳಿಂದ ದೇಶದ ಅಭ್ಯುದಯವಾಗುವುದಿಲ್ಲ. ಸಹಕಾರ ಸಂಘಗಳಲ್ಲಿ ಪಾರ್ಟಿ ವೈಷಮ್ಯಗಳು ಬಂದು ಶೇಕಡಾ 30 ರಷ್ಟು ಸಹಕಾರ ಸಂಘಗಳು ದಿವಾಳಿಯಾಗಿವೆ. ಶೇಕಡಾ 35 ರಷ್ಟು ಮಾತ್ರ ಸರಿಯಾಗಿ ನಡೆಯುತ್ತಿವೆ. ಶೇಕಡಾ 35 ರಷ್ಟು ಅವ್ಯವಸ್ಥೆಯಾಗಿವೆ. ಎಂಬುವುದಾಗಿ ಹಿಂದೆ ಸಹಕಾರ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಈ ಸಹಕಾರ ಸಂಘಗಳು ಸಾಲಕೊಡುವ ವ್ಯವಸ್ಥೆಯನ್ನು ನೋಡಿದರೆ ನಾಚಿಕೆಗೇಡಿನ ಪ್ರಸಂಗವಾಗಿದೆ. ದೊಡ್ಡ ದೊಡ್ಡ ವರ್ತಕರು, ದೊಡ್ಡ ದೊಡ್ಡ ವ್ಯಾಪಾರಗಳನ್ನು ಮಾಡುವುದಕ್ಕೆ ರೈಸೆನ್ಸ್ ಪಡೆದಿರತಕ್ಕವರು, ಸರ್ಕಾರದ ಆಶ್ರಯ ಪಡೆದಿರತಕ್ಕ ಶ್ರೀಮಂತರು ಏನಿದ್ದಾರೆ ಅವರಲ್ಲಿರತಕ್ಕ ಕಪ್ಪು ಹಣವನ್ನು ಬಿಳಿಸೂಲು ಮಾಡಿ. ಬಡ ರೈತನಿಗೆ ಖತಕ್ಕೆ ಈ ಭಾರವನ್ನು ಹೊರಿಸುತ್ತೀರಿ. ಕಂಟ್ರಾಕ್ಟುರುಗಳಲ್ಲಿ ಮೊದಲನೆಯ ವರ್ಗದ ಕಂಟ್ರಾಕ್ಟರು, ಎರಡನೆಯ ವರ್ಗದ ಕಂಟ್ರಾಕ್ಟರು ಎಂದು ವಿಂಗಡಿಸಿ ಯಾವ ಯಾವ ಪ್ರಾಜೆಕ್ಟು ಕಟ್ಟುವಾಗ ಯಾವ ಯಾವ ಕಂಟ್ರಾಕ್ಟಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ, ಅವರ ಹತ್ತಿರ ಹಣವನ್ನು ವಸೂಲು ಮಾಡಿ. 30 ಕೋಟಿ ರೂಪಾಯಿಗಳ ಹಣ ಸಿಗುತ್ತದೆ. ಈ ರೀತಿ ಹಣ ಕೊಡುತ್ತೇವೆಂದು ಅನೇಕ ಕಡೆಯಿಂದ ಜಾತಾ ಬಂದಿದೆ ಎಂದು ನ್ಯಾಯಾಂಗ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿ ಅವರು ಹೇಳಿದರು. ಅವರು ಹುಟ್ಟಿದ ಸ್ಥಳವಾದ ಅರಕೆರೆಯಲ್ಲಿ ಒಂದು ಸಾವಿರ ಮನೆಗಳು ಇವೆ. ಈ ಒಂದು ಸಾವಿರ ಸಂಸಾರದಲ್ಲಿ 300 ಸಂಸಾರದವರಿಗೆ ವಾಸಕ್ಕೆ ಸರಿಯಾದ ಮನೆಗಳೇ ಇಲ್ಲ. ಜೇರೆಯವರನ್ನು ಆಶ್ರಯ ಮಾಡುವ ಸ್ಥಿತಿಯಲ್ಲಿ ಇದ್ದಾರೆ. ಅನೇಕ ಜನರು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಕೆಲವರ ಬಳಿ ಹಣ ಇರಬಹುದು. ಆದರೆ ಎಲ್ಲರ ಬಳಿಯೂ ಇಲ್ಲ. ನ್ಯಾಯಾಂಗ ಮಂತ್ರಿಗಳು ಕಳೆದ 7 ವರ್ಷಗಳಿಂದ ಮಂತ್ರಿಗಳಾಗಿದ್ದಾರೆ. ಅವರು ಹೌಸಿಂಗ್ ಇರಾಖೆ ಮಂತ್ರಿಗಳಾಗಿದ್ದಾಗ ಮೈಸೂರು ಹೌಸಿಂಗ್ ಬೋರ್ಡಿನ ಮೂಲಕ ಅವರ ಊರಿನಲ್ಲಿ 40 ಮನೆಗಳನ್ನು 20ರಿಂದ 40 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿ ಶ್ರೀಮಂತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಕಳೆದ 22 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಈ ಸರ್ಕಾರದವರು 450 ಕೋಟಿ ರೂಪಾಯಿಗಳವರೆಗೆ ಸಾಲ ಮಾಡಿದ್ದಾರೆಯೇ ಹೊರತು ಯಾವ ಒಂದು ನೀರಾವರಿಯ ಅನುಕೂಲವನ್ನೂ ರೈತರಿಗೆ ಮಾಡಿಕೊಟ್ಟಿಲ್ಲ. ಬಡ ರೈತನ ಮೇಲೆ ಮತ್ತೆ ಮತ್ತೆ ತೆರಿಗೆಯನ್ನು ಹಾಕುತ್ತಿದ್ದೀರಿ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ರಾಜ್ಯದ ಬಜೆಟ್ ಮೂರೂವರೆ ಕೋಟಿ ರೂಪಾಯಿಗಳು ಇದ್ದರೂ ಕೂಡ ಮುವತ್ಮೂರೂವರೆ ಕೋಟಿ ರೂಪಾಯಿಗಳವರೆಗೆ ಅಪದ್ಧನವನ್ನು ಇಟ್ಟಿದ್ದರು. ಆ ಹಣವನ್ನು ಸಹ ಖರ್ಚು ಮಾಡಿದಿರಿ. ಆದರೆ ರೈತರ ಶ್ರೇಯಸ್ಸಿಗೆ ಯಾವ ಒಂದು ಅನುಕೂಲವನ್ನೂ ಮಾಡಿಕೊಡಲಿಲ್ಲ. ಹೊರದೇಶಗಳಿಗೆ ಭಿಕ್ಷಾಪಾತ್ರೆಗಳನ್ನು ಹಿಡಿದುಕೊಂಡು ಹೋಗುವುದು ತಪ್ಪಲಿಲ್ಲ. ಕೊನೆಯದಾಗಿ ಸರ್ಕಾರದವರು ತಮ್ಮಲ್ಲಿರುವ ಸಂಪತ್ತಿನ ಮೂಲಕವೇ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕೇ ಹೊರತು ರೈತರಿಂದ ಮುಂಗಡವಾಗಿ ಅಭಿವೃದ್ಧಿ ವಂತಿಗೆಯನ್ನು ವಸೂಲ್ಮಾಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುವುದಕ್ಕೆ ಮೊದಲು, ಒಂದು ಯೋಚನೆ ಬರುತ್ತದೆ. ಏನೆಂದರೆ ರೈತನ ಉದ್ಧಾರ ಮಾಡಲು ಈ ರಾಜ್ಯದಲ್ಲಿ ಸರ್ಕಾರ ಇದೆಯೇ ಅಥವಾ ರೈತನನ್ನು ದಿವಾಳಿ ಮಾಡುವುದಕ್ಕೆ ಈ ಸರ್ಕಾರ ಇದೆಯೇ ಎಂಬ ಬಗ್ಗೆ ಕೆಲವು ಭಾವನೆಗಳು ನಮ್ಮ ಮನಸ್ಸಿನಲ್ಲಿ ಬರುತ್ತಿವೆ. "The Mysore Irrigation Levy of Betterment Contribution and Water Rate (Amendment) Bill 1969, ಏನಿದೆ ಇದು ಈಗಾಗಲೇ ಹಲವಾರು ತಿದ್ದುಪಡಿಗಳನ್ನು ಕಂಡಿದೆ. ಈ ಮಸೂದೆಯ ಬಗ್ಗೆ ಹೇಳುವುದಾದರೆ, 1957ನೇ ಇಸವಿಯಲ್ಲಿ ಪಾಸ್ ಮಾಡಿದ ಆಕ್ಟ್‌ನ್ನು 1967ನೇ ಇಸವಿಯಲ್ಲಿ ಜಾರಿಗೆ ಕೊಟ್ಟಿದ್ದಾರೆ. ಆ ರೀತಿ ಜಾರಿಗೆ ಕೊಡುವಾಗ 1944ನೇ ಇಸವಿಗೆ ಹಿಂದಕ್ಕೆ ಕಟ್ಟಿದ ಕೆರೆಕಟ್ಟೆಗಳ ಅಚ್ಚುಕಟ್ಟಿನ ಪ್ರದೇಶದ ಮೇರೆ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಹಾಕಬಾರದು ಎಂಬ ಬಗ್ಗೆ ಸೆಕ್ಷನ್ 3ರಲ್ಲಿ ಹೇಳಿತ್ತು. 1944ನೇ

(ಶ್ರೀ ಕೆ. ಎಚ್. ರಂಗನಾಥ್)

ಇನವಿಗೆ ಹಿಂದೆ ಕಟ್ಟಿದ ಕೆರೆಕಟ್ಟೆಗಳ ಆಚ್ಚುಕಟ್ಟು ಪ್ರದೇಶದ ಮೇಲೆ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಹಾಕಬಾರದೆಂದು ಹೇಳಿರುವುದರ ಜೊತೆಗೆ ಸೆಕ್ಷನ್ 10 ಕ್ಲಾಸ್ (2)ರಲ್ಲಿ ಅಂತಹ ಕೆರೆ ಕಟ್ಟೆಗಳಿಂದ ಉಪಯೋಗಿಸಿಕೊಳ್ಳುವ ನೀರಿನ ಮೇಲೆ ವಾಟರ್ ರೇಟನ್ನು ಹಾಕಬಾರದೆಂದು ಇತ್ತು. 1965ರಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ತಂದು ಸೆಕ್ಷನ್ 10(ಎ) ಅನ್ನು ಡಿಲೀಟೆಡ್ ಎಂದು ಮಾಡಿದರು. ಈ ಒಂದು ಡಿಲೀಟೆಡ್ ಎಂಬ ಶಬ್ದವನ್ನು ತಂದು ತಿದ್ದುಪಡಿ ಮಾಡಿದ್ದರಿಂದ, ಹಳೆಯ ಮೈಸೂರಿನ 9 ಜಿಲ್ಲೆಯ ಸುಮಾರು 26 ಸಾವಿರ ಕೆರೆಕಟ್ಟೆಗಳ ಮೇಲೆ ಮತ್ತು ಎರಡು ದೊಡ್ಡ ಕೆರೆಗಳಾದ ವಾಣಿವಿಲಾಸಸಾಗರ ಮತ್ತು ಕೃಷ್ಣರಾಜಸಾಗರ ಅಣಿಕಟ್ಟಿನ ಭಾಗದ ರೈತರಿಗೆ ತೊಂದರೆಯಾಯಿತು. ಅದರಲ್ಲೂ ಕೂಡ ಸಣ್ಣ ಸಣ್ಣ ರೈತರಿಗೆ ಬಹಳ ತೊಂದರೆಯಾಯಿತು. ಈ ಒಂದು ಸಣ್ಣ ತಿದ್ದುಪಡಿ ಕಾರಣದಿಂದ ನಮ್ಮ ಹಿರಿಯೂರು ತಾಲ್ಲೂಕಿನಲ್ಲಿ ಸುಮಾರು 8 ಲಕ್ಷ ರೂಪಾಯಿಗಳವರೆಗೆ ನೀರಿನ ತೆರಿಗೆಯನ್ನು ಕೊಡಬೇಕಾದ ಪರಿಸ್ಥಿತಿ ಬಂದಿದೆ. ರೈತರ ಉದ್ಧಾರ ವಾಗಬೇಕಾದರೆ ನೀರನ್ನು ಒದಗಿಸುವ ಕರ್ತವ್ಯ ಸರ್ಕಾರದ್ದು. ಈ ಕಡೆ ಸರ್ಕಾರದವರು ಸರಿಯಾದ ಗಮನ ಕೊಡದೆ, 5ನೇ ಆರ್ಥಿಕ ಆಯೋಗದ ಮುಂದೆ ಪರ್‌ಕ್ಯಾಪಿಟಾ ಇನ್‌ಕಮ್ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆ ಎಂಬ ಹೇಳಿಕೆಯನ್ನು ಕೊಟ್ಟು ನಮ್ಮ ರಾಜ್ಯಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಗುವಂತೆ ಮಾಡಿದ್ದಾರೆ. ರಾಜ್ಯದ ಹಣವನ್ನು ದುಂದು ಮಾಡುತ್ತಿದ್ದಾರೆ. ನಾವುಗಳು ದಿವಾಳಿತನಕ್ಕೆ ಬಂದಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಸುಮಾರು 500 ಕೋಟಿ ರೂಪಾಯಿಗಳವರೆಗೆ ಸಾಲ ಮಾಡಿದ್ದಾರೆ. Pauper Government can only bring a measure of this kind ಎಂದು ನನಗನ್ನಿಸುತ್ತದೆ. ಕ್ಲಾಸ್ 3(ಎ)ಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದರಲ್ಲಿ ಈ ರೀತಿ ಹೇಳಿದೆ :

> "Notwithstanding anything in this Act, where the Government, having the due regard to the relative priority of works and availability of funds....."

ಇದನ್ನು ನಿರ್ಣಯ ಮಾಡುವವರು ಯಾರು ? ಇಲ್ಲೂ ಕೂಡ ರಾಜಕೀಯ ಮಾಡಬೇಕು. ಈಗ ವಾಣಿವಿಲಾಸಸಾಗರದಲ್ಲಿ ಒಂದು ಅಡಿ ನೀರು ಇಲ್ಲ. ಮೊನ್ನೆ ಮಳೆ ಬರದಿದ್ದರೆ 4 ಸಾವಿರ ಅಡಿಕೆ ಮರಗಳು ಹಾಳಾಗುತ್ತಿದ್ದವು. ಯಗಚಿ ನದಿಯ ನೀರನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸ ಬೇಕೆಂದು ನಾವು ಹತ್ತಾರು ವರ್ಷಗಳಿಂದ ಹೇಳುತ್ತಲೇ ಇದ್ದೇವೆ. ರೈತರನ್ನು ಉದ್ಧಾರ ಮಾಡುವ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿಲ್ಲ. ಜನರಿಂದ, ರೈತರಿಂದ ಹಣ ವಸೂಲಿ ಮಾಡುವುದಕ್ಕಾಗಿ ಇಂತಹ ಒಂದು ಕಾನೂನನ್ನು ತರುತ್ತಿದ್ದಾರೆ. ದುಂದು ವೆಚ್ಚ ಮಾಡತಕ್ಕಂಥ ಈ ಸರ್ಕಾರಕ್ಕೆ ಇಂತಹ ಕಾನೂನನ್ನು ತರುವ ಹಕ್ಕಾದರೂ ಕೂಡ ಎಲ್ಲಿದೆ ಎಂದು ಕೇಳುತ್ತೇನೆ. ಸುಮಾರು 400 ಪಂಪ್‌ಸೆಟ್ಟುಗಳಿಗೆ ನೀರನ್ನು ಎತ್ತಲು ಅವಕಾಶವನ್ನು ತಾವು ಕೊಟ್ಟಿದ್ದರಿಂದ ಸುತ್ತಮುತ್ತಲ ಕೆರೆಯ ನೀರೆಲ್ಲಾ ಒಣಗಿಹೋಯಿತು. ಒಬ್ಬ ರೈತ ತಿಳಿಯದೆ ನೀರನ್ನು ತನ್ನ ಜಮೀನಿಗೆ ಬಿಟ್ಟುಕೊಂಡರೆ : not less than 10 times the water rate and not more than 30 times ದಂಡ ಕೊಡಬೇಕೆಂದು ಕಾನೂನು ಮಾಡಿದ್ದಾರೆ.

Sri K. PUTTASWAMY.—Do you know how many of the tailenders have suffered ?

Sri K. H. RANGANATH.—If the Hon. Minister really goes and sees what is happening in Hiriyur Taluk, he will really shed tears.

ಇಲ್ಲಿ ಕುಳಿತು ನಾವು ಮಾತನಾಡುವುದು ಸುಲಭ. ಆಚ್ಚುಕಟ್ಟಿನ ಪ್ರದೇಶವಲ್ಲದೆ ಇರತಕ್ಕ ಆರು ಎಕರೆ ಭೂಮಿಗೆ ಹಿರಿಯೂರು ತಾಲ್ಲೂಕಿನಲ್ಲಿ 7 ಸಾವಿರ ರೂಪಾಯಿಗಳ ಟಿ.ಟಿ. ಪ್ರೊಸೀಡಿಂಗ್ಸ್ ಬಂದಿದೆ.

ಈ ಮನೂದೆಯಲ್ಲಿ ಸರ್ಕಾರದವರು ಕೇಳುತ್ತಿರುವುದು ಕನ್‌ಸ್ಟ್ರಕ್ಷನ್‌ಗೆ ಮಾತ್ರವಲ್ಲ, ಎಕ್ಸ್‌ಪ್ಯಾನ್‌ಷನ್, ರೆಸ್ಟೊರೇಷನ್ ಎಲ್ಲದಕ್ಕೂ ಕೇಳುತ್ತಿದ್ದಾರೆ. ನೂರು ಎಕರೆ ಆಚ್ಚುಕಟ್ಟು ಇರುವ ಕೆರೆ ಭರ್ತಿ ಆದರೆ ಎರಡು ಮೂರು ತಿಂಗಳು ಮಾತ್ರ ನೀರಿರುತ್ತದೆ. ಹೂಳು ತೆಗೆಯುವುದು ರೈತರ ಕೆಲಸವಲ್ಲ. ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಹೂಳು ತೆಗೆಯುತ್ತೇವೆ ಎನ್ನುವಂಥ ಕಾನೂನು ಆಗಿದೆ.....

ಶ್ರೀ ಕೆ. ಪುಟ್ಟಸ್ವಾಮಿ.—ಹೂಳು ತೆಗೆಯುತ್ತೇವೆ ಎನ್ನುವುದನ್ನು ಸರ್ಕಾರ ಯಾವತ್ತಿಗೂ ಒಪ್ಪಿಕೊಂಡಿಲ್ಲ.

Sri K. H. RANGANATH.—What is restoration? What is expansion? What is construction? I want to have a reply from the Hon. Minister. ಇಂಥ ಒಂದು ಕರಾಳ ಶಾಸನ ಮನೂದೆಯ ರೂಪದಲ್ಲಿ ನಮ್ಮ ಮುಂದೆ ಬಂದಿದೆ. ಈ ಹೊತ್ತಿನ ದಿವಸ ಪೇಪರ್ ಆಗುವ ಸ್ಥಿತಿಗೆ ಬಂದಿರುವುದರಿಂದ ಸರ್ಕಾರ ಈ ಕಾನೂನು ತಂದಿದೆ. ಈ ಕಾನೂನು ರೈತರ ಹಿತಕ್ಕಾಗಿ ಬಂದಿಲ್ಲ. ಸರ್ಕಾರವನ್ನು ಬೆಂಬಲಿಸಿರತಕ್ಕ ಸದಸ್ಯರಲ್ಲಿ ರೈತರ ಬಗ್ಗೆ ಅನುಕಂಪ, ಕಳಕಳಿ ಇದ್ದರೆ, ಈ ಕಾನೂನನ್ನು ವಾಪಸು ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಹೊಸದಾಗಿ ಸೇರಿಸಲು ಸೂಚಿಸಿರುವ ಸೆಕ್ಷನ್ 3 (ಎ) ನಲ್ ಕ್ಲಾಜ್ 7 ಏನಿದೆ ಇದು ರೈತರ ಹಿತಕ್ಕಾಗಿ ಇಲ್ಲ. ಸರ್ಕಾರ ರೈತರಿಗೆ ತೊಂದರೆ ಕೊಡುವ ದೃಷ್ಟಿಯಿಂದ ಇದೆ. ಸೇಕಡ 66ರಷ್ಟು ಅಚ್ಚುಕಟ್ಟುದಾರರು ಮಾಡಬಹುದು ಎಂದರೆ ಸೇಕಡ 33ರಷ್ಟು ಜನ ಬೇಡ ಎಂದರೂ ಕೂಡ ನಾಳೆಯ ದಿನ ದುಡ್ಡನ್ನು ಕಡ್ಡಾಯವಾಗಿ ವಸೂಲು ಮಾಡುತ್ತೀರಿ. This is going to be a charge on the land. ಇದನ್ನೆಲ್ಲ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಆದ್ದರಿಂದ ದಯಮಾಡಿ ಸರ್ಕಾರ ಈ ಕಾನೂನನ್ನು ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಬೆಂಬಲ ಕೊಡತಕ್ಕ ರೈತರ ಪ್ರತಿನಿಧಿಗಳೆನಿಸಿ ಕೊಂಡಿರತಕ್ಕ ಸದಸ್ಯರು ಒತ್ತಾಯ ಮಾಡಬೇಕೆಂದು ಹೇಳಿ ಇದನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಸಭೆಯ ಮುಂದೆ ಇರುವ ಇರಿಗೇಷನ್ (ಲೆವಿ ಆಫ್ ಬೆಟರ್‌ಮೆಂಟ್ ಅಂಡ್ ವಾಟರ್ ರೇಟರ್) ತಿದ್ದುಪಡಿ ಮನೂದೆಯನ್ನು ಸ್ವಾಗತಿಸುವುದೇ ಅಥವಾ ಬಡುವುದೇ ಎನ್ನತಕ್ಕ ಒಂದು ಜಿಜ್ಞಾಸೆ, ಭ್ರಾಂತಿ ನನ್ನ ಮನಸ್ಸಿನಲ್ಲಿ ಉಳಿಯುತ್ತದೆ. ಒಂದು ದೃಷ್ಟಿಯಿಂದ ಈ ಹೊತ್ತಿನ ಹಣಕಾಸಿನ ಪರಿಸ್ಥಿತಿಯಿಂದ ಮತ್ತು ಆಗ ಬೇಕಾದ ಕೆಲಸಕಾರ್ಯಗಳ ದೃಷ್ಟಿಯಿಂದ ಸಾರ್ವಜನಿಕರಿಂದ ಹಣ ಬರಬೇಕು, ಅವರು ಹಣ ತುಂಬಿದರೆ ಕೆಲಸಕಾರ್ಯಗಳು ಆಗುತ್ತವೆ ಎನ್ನುವುದನ್ನು ಸ್ವಾಗತಿಸುತ್ತೇನೆ. ಆದರೆ ಕೆಲವು ಸಂದೇಹಗಳಿಗೆ ಈ ಶಾಸನದಲ್ಲಿ ಸರಿಯಾಗಿ ಉತ್ತರ ದೊರಕುತ್ತಿಲ್ಲ. ಶಾಸನದ ಉದ್ದೇಶ ಯಾವ ಯಾವ ಕಡೆ ಪ್ರಯೋರಿಟಿ ಬೇಸಿಸ್‌ಮೇಲೆ 66 ಪರ್ಸೆಂಟ್ ಜನ ಒಪ್ಪಿಗೆಯನ್ನು ಸೂಚಿಸುತ್ತಾರೋ ಅಲ್ಲಿ ಆ ಕೆಲಸವನ್ನು ಆರಂಭಿಸಬೇಕು ಎನ್ನುವುದಕ್ಕೆ ಅವಕಾಶವಿದೆ. ಇಲ್ಲಿ ಶ್ರೀಮಾನ್ ಚನ್ನಬಸಪ್ಪ ನವರು ಪ್ರಸ್ತಾಪ ಮಾಡಿದ ಪ್ರಶ್ನೆ ಬರುತ್ತದೆ. ದುಡ್ಡು ಹೇಗೆ ಈ 66 ಜನಗಳಿಗೆ ಬರಬೇಕು? ಕೈಯಲ್ಲಿ ದುಡ್ಡಿದ್ದವರು ಕೊಡಬಹುದು. ಉಳಿದವರು ತಮ್ಮ ಜಮೀನನ್ನು ಒತ್ತೆ ಹಾಕಿ ಕೊಡಬೇಕು. ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸುತ್ತಿದ್ದೇವೆ, ಒತ್ತೆ ಇಡತಕ್ಕ ಜಮೀನುಗಳಿಗೆ ಬ್ಯಾಂಕಿನಿಂದ ದುಡ್ಡಿನ ಸೌಲಭ್ಯ ಒದಗುತ್ತದೆ ಎಂದು ಹೇಳಿದರು. ಸಂತೋಷ. ಹೀಗೆ ಬ್ಯಾಂಕುಗಳಿಂದ ಯಾರು ಅಚ್ಚುಕಟ್ಟುದಾರರಾಗಿರುತ್ತಾರೆ ಅವರಿಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಬಗ್ಗೆ ಸಾಲವನ್ನು ಕೊಡುವುದಾದರೆ ನೇರವಾಗಿ ಸರ್ಕಾರ ಸಾಲವನ್ನು ಬ್ಯಾಂಕುಗಳಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಅನೇಕ ಕಾಮಗಾರಿಗಳಿಗೆ ಸರ್ಕಾರ ದವರು ಸ್ಟೇಟ್ ಲೋನ್ಸ್ ಎತ್ತುತ್ತಿದ್ದಾರೆ. ಇಂಥ ಪ್ರಾಜೆಕ್ಟ್‌ಗಳನ್ನು ಪ್ರಯಾರಿಟಿ ಮೇಲೆ ತೆಗೆದುಕೊಳ್ಳಬೇಕು ಎಂದು ಒಂದು ಯೋಜನೆಯನ್ನು ಮಾಡಿ, ಇಂಥಿಂಥ ನಿರ್ದಿಷ್ಟ ಗಳಲ್ಲಿ ತೆಗೆದು ಕೊಳ್ಳಬೇಕೆಂದು ತೀರ್ಮಾನ ಮಾಡಿ ಅವಕ್ಕಾಗಿ ಏಕೆ ಸ್ಟೇಟ್ ಲೋನ್ಸ್ ಹೆಚ್ಚಿಸಬಾರದು? ಹೀಗಿರು ವಾಗ ಇದನ್ನು ಒಂದು ಕಾನೂನು ರೂಪದಲ್ಲಿ ಸೆಕ್ಷನ್ 3 (ಎ) ಎಂದು ಸೂಚಿಸಿ ತಂದಿರುವುದರಲ್ಲಿ ಔಚಿತ್ಯವಾದರೂ ಏನು? ಇದರಿಂದ ಯಾವ ಉದ್ದೇಶ ನೆರವೇರುತ್ತದೆ ಎನ್ನುವಂಥ ಬಗೆಹರಿಯದಂಥ ಸಮಸ್ಯೆ ಉಳಿಯುತ್ತದೆ. ಸೆಕ್ಷನ್ 3 (ಎ) ಇರಲಿ ಎಂದು ಇಟ್ಟುಕೊಳ್ಳೋಣ. ಇದರಲ್ಲಿ ಎರಡು ಸ್ಟೇಜ್ ಇದೆ. ಒಂದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಸ್ಟೇಜ್, ಎರಡನೆಯದು ಅಚ್ಚುಕಟ್ಟಾದ ಮೇಲೆ ಬರಾತ್ಕಾರವಾಗಿ ಇರಿಗೇಷನ್ ಆಕ್ಟ್ ಪ್ರಕಾರವಾಗಿ ನೀರನ್ನು ಉಪಯೋಗಿಸಿ, ಉಪಯೋಗಿಸದೆ ಇರಲಿ ಪ್ರತಿಯೊಬ್ಬ ರೈತನೂ ಕಂದಾಯ, ಲೆವಿ, ವಾಟರ್ ರೇಟ್ ಇವೆಲ್ಲವನ್ನೂ ಕೊಟ್ಟೇ ಕೊಡಬೇಕು. ಇದನ್ನು ಕೊಡುವ ಪೂರ್ವದಲ್ಲಿ 6 ಜನ ಒಪ್ಪಿ, 3 ಜನ ಒಪ್ಪದೆ ಇದ್ದರೂ ಈ ಶಾಸನದ ಪ್ರಕಾರವಾಗಿ ಬರಾತ್ಕಾರ ಪಡಿಸುವುದಕ್ಕೆ ಅವಕಾಶವಿದೆ. ಆರು ಜನ ಒಪ್ಪಲಿ ಎಂದರೆ ವಾಲಂಟರಿಯಾಗಿ ಒಪ್ಪುವುದಾದರೆ ಸೆಕ್ಷನ್ 3 (ಎ) ಇರತಕ್ಕುದರ ಅವಶ್ಯಕತೆ ಏನಿದೆ? ಹಿಂದಿನ ನಡವಳಿಕೆಗಳನ್ನು ನೋಡುತ್ತ ಬಂದರೆ, ಒಂದು ಭಾಗದ ಜನ ದುಡ್ಡು ಹಾಕಿದಮೇಲೆ ಸರ್ಕಾರ ದವರನ್ನು ನಕಾಯ ಮಾಡಿಕೊಡಿ ಎಂದರೆ ಇಂಥ ಶಾಸನವಿಲ್ಲದೆಯೇ ಅನೇಕ ಕಡೆ ಕೆಲಸಕಾರ್ಯಗಳು

(ಶ್ರೀ ಎಲ್. ಶ್ರೀಕಂಠಯ್ಯ)

ನಡೆಯುತ್ತಿವೆ. ಹೀಗಿರುವಾಗ ಸೆಕ್ಷನ್ 3 (ಎ) ಉಪಯೋಗ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ; ಇದು ತರೆತಿರೋಭಾರವಾಗುತ್ತದೆ. ಈಗ ಕಾನೂನು ತಂದಿರುವುದನ್ನು ನೋಡಿದರೆ ಗುಂಡು ಯಾರಿಗೆ ಬೇಕಾದರೂ ತಗಲಬಹುದು. 6 ಜನ ಒಪ್ಪಿದ ಪಕ್ಷದಲ್ಲಿ ಸರ್ಕಾರದವರು ಕೆರೆ ಕಟ್ಟಿಸುತ್ತಾರೆ. ಕಾನೂನು ಪ್ರಕಾರ ಉಳಿದ ಮೂರು ಜನರನ್ನು ಒತ್ತಾಯಮಾಡಲು ಯಾವ ವಿಧವಾದ ಹಕ್ಕೂ ಇರುವುದಿಲ್ಲ. ಆದ್ದರಿಂದ ಇದಕ್ಕೆ ಇಂಥ ಒಂದು ಶಾಸನದ ಆವಶ್ಯಕತೆ ಇಲ್ಲ. ನಾನು ಪ್ರಾರಂಭದಲ್ಲಿಯೇ ಒಂದು ಸಂದೇಹವನ್ನು ವ್ಯಕ್ತಪಡಿಸಿದೆ. ಈ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಒಂದು ಉಭಯ ಹಸ್ತವನ್ನು ನೀಡಿದ್ದಾರೆ. ಪ್ರಯಾರಿಟಿ ಸ್ಕೀಮಿನಲ್ಲಿದ್ದರೂ ಸಹ ಕಮಿನಿಯೋಜನೆ ಅರ್ಧ ಕೆಲಸವಾಗಿದೆ, ಅದನ್ನು ಪೂರ್ಣ ಮಾಡಬೇಕಾದರೆ, ಸೆಕ್ಷನ್ 3 (ಬಿ) ಪ್ರಕಾರವಾಗಿ ಪೂರ್ತಿ ಹಣವನ್ನು ಕೊಡುವುವಾದರೆ ಈ ಯೋಜನೆಯನ್ನು ಪುಂಡುವರಿಸುತ್ತೇವೆ ಎನ್ನುವ ತಕರಾರು ಹಾಕುವುದಾದರೆ ಆಗ ಏನು ಮಾಡಬೇಕು ಎಂದು ಮಾನ್ಯ ಸಿದ್ದವೀರಪ್ಪನವರು ಕೇಳಿದರು. ಇದರಲ್ಲಿ ಉಂಡಪನೇ ಜಾಣ ಎನ್ನುವ ಪ್ರಶ್ನೆ ಬರುತ್ತದೆ. ಲಕ್ಷಾಂತರ ರೂಪಾಯಿ. ಕೋಟ್ಯಾಂತರ ರೂಪಾಯಿಗಳ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಅರ್ಧ ಕೆಲಸ ಮಾಡಿ ಅದಕ್ಕೆ ತಗಲುವ ಪೂರ್ತಿ ಹಣವನ್ನು ಕೊಡದೆ ಪೂರ್ತಿ ಮಾಡುವುದಿಲ್ಲ ಎಂದು ಹೇಳಿದರೆ ಆ ಜನರು ಏನು ಮಾಡಬೇಕು ! ಇದರ ಬಗ್ಗೆ ಕ್ಲಾಜ್ ಎ ಅಥವಾ ಬಿ ನಲ್ಲಿ ಯಾವ ವಿಧವಾದ ಸ್ಪಷ್ಟೀಕರಣವಿಲ್ಲ. ಇದನ್ನು ಯಾವುದಕ್ಕೆ ಬೇಕಾದರೂ ಅನ್ವಯ ಮಾಡಬಹುದು. ಆದುದರಿಂದ ಈ ಶಾಸನದ ಅಗತ್ಯತೆ ಇಲ್ಲವೆಂದು ನನಗೆ

7-00 P.M.

ತೋರುತ್ತದೆ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಅಪ್ಪಣೆ ಕೊಡಿಸಿದರು. ಅದಕ್ಕಾಗಿ ನಾನು ಒಂದು ಸೂಚನೆ ಕೊಡುತ್ತೇನೆ. ಅದು ಏನೆಂದರೆ ಶೇಕಡ 66 ಜನರು ಅಪೇಕ್ಷೆ ಮಾಡಿದರೆ ಬ್ಯಾಂಕುಗಳಿಂದ ಸಾಲ ಕೊಡಿಸಿ ಅವರಿಂದ ನಾವು ತೆಗೆದುಕೊಳ್ಳುವ ಪಕ್ಷಕ್ಕೆ ನಾವೇ ನೇರವಾಗಿ ಸಾಲ ತೆಗೆದುಕೊಳ್ಳುವುದಕ್ಕೆ ಬ್ಯಾಂಕಿಗೆ ಹೋಗೋಣ.

Sri H. N. NANJE GOWDA.—Sir, it is now 7 O' clock.

Mr. SPEAKER.—Probably the hon' Member is finishing his speech in about five minutes.

Sri L. SRIKANTIAH.—No Sir, I want at least another half an hour.

Mr. SPEAKER.—Shall we meet at 12 O' clock tomorrow ?

Sri H. SIDDAVEERAPPA.—If we are going to complete the legislative business on the 5th, I request the Chair not to make us sit like that.

Mr. SPEAKER.—We have admitted the motions. Now we are adjourning. We are sitting for a few days next week so that the elections to several committees also might be held. My only request is let us try to conform to the Business Advisory Committee Report.

Now the House adjourns and will meet tomorrow at 1 p.m.

The House adjourned at Five Minutes past Seven of the Clock, to meet again at One of the Clock on Thursday, the 4th September 1969.

WD 13528—GPB—600—8-12-1969

CONTENTS

		Pages
1	(i) Starred Questions and Answers ...	167—197
	(ii) Short Notice Question and Answer ...	198—199
	(iii) Questions for Answers on the day (but not taken up) ...	199—201
	(iv) Replies to the supplementaries by Ministers ...	201—204
	(v) Convention to meet the Speaker in his chambers ..	204
	(vi) Procedure for a member to catch the eye of the Speaker ...	205—207
2	Third Report of the Committee on Government Assurances—(Presented) ...	207
3	(A) Mysore Appropriation (No. 5) Bill, 1969—(Presented)	208
	(B) Mysore Appropriation (No. 6) Bill, 1969—(Presented)	208
	(C) Mysore Silkworm Seed and Cocoon (Regulation of Production, Supplies and Distribution)(Amendment) Bill, 1969—(Presentation) ...	208
	(D) Mysore Weights and Measures (Enforcement) (Amendment) Bill, 1969—(Presented) ...	208—209
4	Mysore Irrigation (Levy of Betterment Contribution and Water Rate) (Amendment) Bill, 1969—Motion to refer to a Select Committee—(Adopted) ...	209—235
5	Mysore Appropriation (No. 5) Bill, 1969—(Passed) ...	235—236
6	Mysore Appropriation (No. 6) Bill, 1969—(Passed) ...	236—237
7	Bangalore, Karnatak and Mysore Universities (Amendment) Bill, 1968 as passed by the Legislative Council—(Motion to consider—Debate not concluded) ...	237—252
8	Business of the House ...	252—253
9	Half-an-Hour Discussion arising out of replies to Question No. 342 *re*: Bidar Halikhed Sahakara Sakkare Karkhane ...	253—262